"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(044)/13-2-2019/11-30/ಎಲ್ಎಂ/ಜಿಆರ್

**ಕರ್ನಾಟಕ ವಿಧಾನ ಪರಿಷತ್ತು**

**ದಿನಾಂಕ: 13ನೇ ಫೆಬ್ರವರಿ 2019**
**ಬುಧವಾರ**

**ವಿಷಯಾನುಕ್ರಮಣಿಕೆ**

1. **ರಾಜ್ಯದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಯಲ್ಲಿ ಅವ್ಯವಹಾರವಾಗಿರುವ ಬಗ್ಗೆ ಸದನ ಸಮಿತಿಯನ್ನು ರಚಿಸಲು ಒತ್ತಾಯಿಸಿ ಮುಂದುವರೆದ ಧರಣಿ**

ಡಾ॥ ಜಯಮಾಲ(ಸಭಾನಾಯಕರು)
– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

2. **ಪ್ರಕಟಣೆ.**

3. **ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಕೋರಿಕೆ.**
– ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

**(ಪ್ರಶ್ನೋತ್ತರ ವೇಳೆ ನಂತರ ಅನುಮತಿಸಲಾಯಿತು)**

4. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**360 – ರಾಜ್ಯದಲ್ಲಿ ಪೋಡಿಗಾಗಿ ಬಾಕಿ ಇರುವ ಅರ್ಜಿಗಳ ಬಗ್ಗೆ.**
– ಶ್ರೀ ಎನ್.ಕೋಟ ಶ್ರೀನಿವಾಸ ಪೂಜಾರಿ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು)

**415– ಬೀದರ್ ನಗರದ ಹೊರವರ್ತುಲ ರಸ್ತೆ (ರಿಂಗ್ ರೋಡ್) ಅಕ್ಕ-ಪಕ್ಕದ ಸಿ ಫಾರಂ ಬಗ್ಗೆ**
– ಶ್ರೀ ಅರವಿಂದ ಕುಮಾರ ಅರಳಿ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು)

**459 – ಬರ ನಿರ್ವಹಣೆಗೆ ಸರ್ಕಾರವು ತೆಗೆದುಕೊಂಡ ಕ್ರಮಗಳ ಕುರಿತು.**
– ಶ್ರೀ ಟಿ.ಎ.ಶರವಣ
– ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು)

**440 – ರಾಯಚೂರು ಜಿಲ್ಲೆಯಲ್ಲಿರುವ ಕಾರ್ಮಿಕರ ಬಗ್ಗೆ –**
– ಶ್ರೀ ಎನ್.ಎಸ್.ಬೋಸರಾಜು
– ಶ್ರೀ ವೆಂಕಟರಮಣಪ್ಪ (ಕಾರ್ಮಿಕ ಸಚಿವರು)

5. **ನೂತನ ಸಚಿವರುಗಳ ಪರಿಚಯ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ರಹೀಂ ಖಾನ್ (ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು)
– ಶ್ರೀ ಆರ್.ವಿ.ತಿಮ್ಮಾಪುರ(ಸಕ್ಕರೆ ಸಚಿವರು)

**6. ಮುಂದುವರೆದ ಪ್ರಶ್ನೋತ್ತರಗಳು**

**238 – ಮಂಡ್ಯದಲ್ಲಿ ನಿರ್ಮಾಣವಾಗುತ್ತಿರುವ ಒಳಾಂಗಣ ಕ್ರೀಡಾಂಗಣ ಬಗ್ಗೆ.**
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ರಹೀಂ ಖಾನ್ (ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು)

**522 – ಲಿಂಗಾನುಪಾತ ಕುಸಿತ, ಹೆಣ್ಣು ಭ್ರೂಣ ಹತ್ಯೆ.**
– ಡಾ॥ ತೇಜಸ್ವಿನಿ ಗೌಡ
– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**448 – ಆಂಧ್ರ ಪ್ರದೇಶದ ತಿರುಪತಿ-ತಿರುಮಲದಲ್ಲಿರುವ ಕರ್ನಾಟಕ ಛತ್ರದ ಕೊಠಡಿಗಳ ಬಗ್ಗೆ.**
– ಶ್ರೀ ಪಿ.ಆರ್.ರಮೇಶ್
– ಶ್ರೀ ಪಿ.ಟಿ.ಪರಮೇಶ್ವರ್ ನಾಯ್ಕ(ಮುಜರಾಯಿ ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)

**477– ಕಾಡು ಪ್ರಾಣಿಗಳ ಹಾವಳಿ**
– ಶ್ರೀ ಕೆ.ಎ. ತಿಪ್ಪೇಸ್ವಾಮಿ
– ಶ್ರೀ ಸತೀಶ್ ಎಲ್ ಜಾರಕಿಹೊಳಿ(ಅರಣ್ಯ ಸಚಿವರು)

**436+563 – ಕ್ರೀಡಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರನ್ನು** ಖಾಯಂಗೊಳಿಸುವ ಕುರಿತು.
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ರಹೀಂ ಖಾನ್(ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು)

**416 – ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳ ಅಂಗನವಾಡಿ ಕೇಂದ್ರಗಳು.**
– ಶ್ರೀ ಆರ್.ಪ್ರಸನ್ನಕುಮಾರ್
– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**121 – ಆನೆಗಳ ಹಾವಳಿ ಕುರಿತು.**
– ಶ್ರೀ ಎಂ.ಕೆ.ಪ್ರಾಣೇಶ್
– ಶ್ರೀ ಸತೀಶ್ ಎಲ್ ಜಾರಕಿಹೊಳಿ(ಅರಣ್ಯ ಸಚಿವರು)

**ಆ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**
– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**7. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.**
**ಅ) "ಕಾವೇರಿ ತಾಲ್ಲೂಕು ರಚನೆಗಾಗಿ ಮತ್ತೆ ಹೋರಾಟ" ಎಂಬ ಪತ್ರಿಕಾ ವರದಿ ಬಗ್ಗೆ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಆ) ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರೌಢ ಶಾಲಾ ಶಿಕ್ಷಕರಿಗೆ ಕಾಲಾವಕಾಶ 8 ತಿಂಗಳಿಂದ 3 ಆಗುತ್ತಿರುವ ಬಗ್ಗೆ.**

– ಶ್ರೀ ಶರಣಪ್ಪ ಮಟ್ಟೂರು

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಇ) ಪಾನಮತ್ತ ಸಾಹಿತಿಗಳು ದೆಹಲಿಯ ಕರ್ನಾಟಕ ಭವನದಲ್ಲಿ ಗದ್ದಲ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ದೂರು ನೀಡಿರುವ ಬಗ್ಗೆ.**

– ಶ್ರೀ ಅರುಣ ಶಹಾಪೂರ

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಈ) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ವಿಭಜಿಸುತ್ತಿರುವ ಬಗ್ಗೆ**

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

– ಶ್ರೀ ಅರುಣ ಶಹಪೂರ

– ಶ್ರೀ ಎಸ್.ಆರ್.ಪಾಟೀಲ್

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಉ) ಆರೋಗ್ಯ ಇಲಾಖೆಯ ಸಿಬ್ಬಂದಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರದ ಬಗ್ಗೆ**

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**ಊ) ಹುಬ್ಬಳ್ಳಿ-ಧಾರವಾಡ ಜಿಲ್ಲೆಯ ಗ್ರಮಾಂತರ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಬಿಡುಗಡೆಯಾಗದಿರುವ ಬಗ್ಗೆ.**

– ಶ್ರೀ ಎಸ್.ವ್ಹಿ.ಸಂಕನೂರ

– ಡಾ॥ ಜಯಮಾಲ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು)

**8. ವರದಿಯನ್ನೊಪ್ಪಿಸುವುದು.**

ಅ) ಶ್ರೀ ಸಿ.ಎಂ.ಲಿಂಗಪ್ಪ (ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಸದಸ್ಯರು)

ಆ) ಡಾ॥ ವೈ.ಎ.ನಾರಾಯಣಸ್ವಾಮಿ(ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯರು)

**9. ವಿತ್ತೀಯ ಕಾರ್ಯಕಲಾಪಗಳು.**

**2018-19ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು) ಒಪ್ಪಿಸುವುದು.**

**10. ಕಾರ್ಯಕಲಾಪಗಳ ಸಲಹಾ ಸಮಿತಿ ವರದಿ.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**11. ಹಕ್ಕುಚ್ಯುತಿ ಪ್ರಸ್ತಾವ.**

**ಸೆಕ್ಷನ್ 144ನ್ನು ಉಲ್ಲಂಘಿಸಿರುವರೆಂಬ ಆಪಾದನೆ ಮೇಲೆ ವಿರೋಧ ಪಕ್ಷದ ಸದಸ್ಯರು ಹಾಗೂ ಅವರ ಕುಟುಂಬದವರ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಿಸಿರುವ ಬಗ್ಗೆ**

- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು)

**12. ಪ್ರಕಟಣೆ**

**13) ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.**

**ವಿಷಯ:- ತ್ರಿವರ್ಣ ಧ್ವಜಕ್ಕೆ ಅಪಮಾನ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳದೇ ಇರುವ ಬಗ್ಗೆ.**

- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**14. ಹಾಸನ ಜಿಲ್ಲೆಯ ಶಾಸಕರ ಮನೆಗೆ ಗೂಂಡಾಗಳು ಕಲ್ಲು ತೂರಾಟ ನಡೆಸಿ ಗಲಾಟೆ ಮಾಡಿರುವ ಬಗ್ಗೆ.**

- **ಶ್ರೀ ಕೋಟ ಶ್ರೀನಿವಾಸ ಪೂಜಾರಿ**

(ವಿರೋಧ ಪಕ್ಷದ ಸದಸ್ಯರಿಂದ ಧರಣಿ)

**15. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಅಂಗೀಕರ ಮತ್ತು ಅನುಮೋದನೆ.**

– – –

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 13ನೇ ಫೆಬ್ರವರಿ, 2019**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ: 11 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು**

**ಸಭಾಪತಿ (ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ) ಯವರು**

**ಪೀಠದಲ್ಲಿ ಉಪಸ್ಥಿತರಿದ್ದರು**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನ ಪ್ರಾರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿದ್ದರು)**

**1. ರಾಜ್ಯದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಯಲ್ಲಿ ಅವ್ಯವಹಾರವಾಗಿರುವ ಬಗ್ಗೆ ಸದನ ಸಮಿತಿಯನ್ನು ರಚಿಸಲು ಒತ್ತಾಯಿಸಿ ಮುಂದುವರೆದ ಧರಣಿ**

**ಡಾ: ಜಯಮಾಲ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಸದನ ನಡೆಯಲು ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಅವರಿಗೆ ಬೇಡಿಕೊಳ್ಳುತ್ತೇನೆ, ಮನವಿ ಮಾಡಿಕೊಳ್ಳುತ್ತೇನೆ. ಇವತ್ತು ಅನೇಕ ಒಳ್ಳೆಯ ಪ್ರಶ್ನೆಗಳು ಬಂದಿವೆ, ದಯಮಾಡಿ ಧರಣಿ ನಡೆಸುತ್ತಿರುವ ಸದಸ್ಯರು ಬಾವಿಯಿಂದ ತಮ್ಮ ಸ್ಥಾನಗಳಿಗೆ ಬಂದು ಸದನ ನಡೆಸಲು ಅನುವು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ತಾವು ಎಲ್ಲ ನಡವಳಿಕೆಗಳನ್ನು ಕಂಡಿದ್ದೀರು. ನಿನ್ನೆ ಮಾನ್ಯ ರಘುನಾಥ್‌ರಾವ್ ಮಲ್ಕಾಪೂರೆಯವರು ಹಾಕಿರುವಂತಹ ಪ್ರಶ್ನೆಗೆ, 81,400 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಲಾಗಿದೆ ಎಂದು ಸರ್ಕಾರ ಉತ್ತರ ನೀಡಿದೆ. ಅದಕ್ಕೆ ನಾವು ಈ ಶುದ್ಧ ನೀರಿನ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ, ಅದರ ಪರಿಶೀಲನೆಗಾಗಿ ಸದನ ಸಮಿತಿ ರಚನೆ ಮಾಡಿ ಎಂದು ಸರ್ಕಾರವನ್ನು ಕೇಳಿದ್ದೇವೆ. ಸರ್ಕಾರ ಒಪ್ಪದಿದ್ದಾಗ ನಾವು ಪ್ರತಿಭಟನೆಗೆ ಇಳಿದಿದ್ದೇವೆ. ಈಗ ಪ್ರತಿಭಟನೆಯ ಮುಂದುವರೆದ ಸಮಯದಲ್ಲಿ ಅದನ್ನೇ ಹೇಳುತ್ತಿದ್ದೇವೆ. 18,400 ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಆದರೆ ಅದರಲ್ಲಿ 50% ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ. ಒಂದು ಹಂತದಲ್ಲಿ ಶುದ್ಧ ನೀರಿನ ಘಟಕಕ್ಕೆ 5,88,000 ರೂ.ಗಳನ್ನು ಕೊಡಲಾಗಿದೆ. ಅದೇ ಮಾದರಿಯ ಇನ್ನೊಂದು ಶುದ್ಧ ನೀರಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘಟಕಕ್ಕೆ 17 ಲಕ್ಷ ರೂ.ಗಳನ್ನು ಕೊಡಲಾಗಿದೆ. ಒಟ್ಟಾರೆ 18,400 ಶುದ್ಧ ನೀರಿನ ಘಟಕಗಳಿಗೆ ಪ್ರತಿ ಘಟಕಕ್ಕೆ 10 ಲಕ್ಷ ರೂ.ಗಳೆಂದು ಲೆಕ್ಕ ಹಾಕಿದರೂ 1800 ಕೋಟಿ ರೂ.ಗಳ ವ್ಯವಹಾರವಾಗಿದೆ. ಇದರಲ್ಲಿ 50% ಘಟಕಗಳು ಕೆಲಸ ಮಾಡುತ್ತಿಲ್ಲ. ಕುಡಿಯಲು ಶುದ್ಧ ನೀರು ಸಿಗದೆ ಜನರು ಅಸಹಾಯಕರಾಗಿದ್ದಾರೆ. ಇಡೀ ಕರ್ನಾಟಕದ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಚರ್ಚೆ ಮಾಡಲು ಸದನ ಸಮಿತಿಯನ್ನು ರಚನೆ ಮಾಡಿ ಎನ್ನುವುದು ನಮ್ಮ ಉದ್ದೇಶವಾಗಿತ್ತು. ಈ ವಿಚಾರವಾಗಿ ನಿನ್ನೆ ನಿಮ್ಮ ಕೊಠಡಿಯಲ್ಲಿ ಚರ್ಚೆ ಮಾಡಲಾಯಿತು. ಸರ್ಕಾರ ನನ್ನ ವಾದವನ್ನು ಮತ್ತೆ ಮುಂದೂಡಿತು. ಅದಕ್ಕಾಗಿ ನಾವು ಕೆಲವು ಪ್ರಶ್ನೆಗಳನ್ನು ಕೇಳಬೇಕಾಯಿತು. ನಂತರ ತಾವು ಸದನವನ್ನು ಮುಂದೂಡಿದ್ದಿರಿ. ಅದನ್ನು ನಾವು ಗೌರವದಿಂದ ಸ್ವೀಕಾರ ಮಾಡಿದ್ದೇವೆ.

ಈಗಲೂ ನಾವು ಸರ್ಕಾರವನ್ನು ಒತ್ತಾಯ ಮಾಡುವುದು 18,400 ಶುದ್ಧ ನೀರಿನ ಘಟಕಗಳಲ್ಲಿ ಸರಾಸರಿ 1800 ಕೋಟಿ ರೂ.ಗಳ ವ್ಯವಹಾರ ನಡೆದಾಗ ಅದನ್ನು ತನಿಖೆ ಮಾಡುವ ಅವಶ್ಯಕತೆ ಇದೆ ಎಂದು ಸರ್ಕಾರವನ್ನು ನಾವು ಒತ್ತಾಯ ಮಾಡುತ್ತಿರುವಾಗ ಸರ್ಕಾರ ತನ್ನ ಮೊಂಡುವಾದವನ್ನು ಮುಂದುರೆಸಿದರೆ ಪ್ರಜಾಪ್ರಭುತ್ವದಲ್ಲಿ ..

**ಸಭಾಪತಿಯವರು:–** ಇದೇ ವಿಚಾರ ನಿನ್ನೆ ಚರ್ಚೆಯಾಗಿದೆ, ಧರಣಿ ಕುಳಿತು ಭಾಷಣ ಮಾಡುವುದು ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಮ್ಮ ಅಹವಾಲನ್ನು ತಾವು ಕೇಳಬೇಕಾಗುತ್ತದೆ.

**ಸಭಾಪತಿಯವರು:–** ಆ ವಿಚಾರದ ಮೇಲೆ ಸಾಕಷ್ಟು ಮಾತನಾಡಿದ್ದೀರಿ. ಸದನದಲ್ಲಿ, ಹೊರಗಡೆ ಈಗಾಗಲೇ ಸಾಕಷ್ಟು ಮಾತನಾಡಿದ್ದೀರಿ. ಸಾಕು, ಪದೇ–ಪದೇ ಅದನ್ನೆ ಹೇಳುವುದು ಸರಿಯಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಪ್ರತಿಪಕ್ಷದವರಾಗಿ ನಾವು ಮಾತನಾಡುವುದಷ್ಟೆ ಕೆಲಸ, ಅದನ್ನು ಬಿಟ್ಟು ಏನು ಮಾಡಲು ಸಾಧ್ಯವಿಲ್ಲ.

**ಸಭಾಪತಿಯವರು:–** ಅಧಿವೇಶನ ಪ್ರಾರಂಭವಾಗಿ ಕಳೆದ ನಾಲ್ಕೈದು ದಿನಗಳಲ್ಲಿ ಸರಿಯಾಗಿ ಒಂದು ಗಂಟೆಯು ಸದನ ನಡೆದಿರುವುದಿಲ್ಲ. ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಆಡಳಿತ ಪಕ್ಷದ ಕಡೆಯು ಸದಸ್ಯರು ಮಾತನಾಡುವವರು ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಮ್ಮ ಭಾವನೆಗಳನ್ನು ತಾವು ಕೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಎಲ್ಲವು ನಮ್ಮ ಮೂಗಿನ ನೇರಕ್ಕೆ ಆಗಬೇಕು, ನಾವು ಹೇಳಿದ ಹಾಗೆಯೇ ಉತ್ತರ ಕೊಡಬೇಕು ಎನ್ನುವುದನ್ನು ನಿರೀಕ್ಷೆ ಮಾಡುವುದು ಸಮಂಜಸವಲ್ಲ. ತಾವು ಕೇಳಿರುವ ಪ್ರಶ್ನೆಗೆ ಸರ್ಕಾರ ಉತ್ತರ ಕೊಟ್ಟಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಸದನ ಸಮಿತಿ ಮಾಡಿ ಎಂದರೆ ಸರ್ಕಾರ ಒಪ್ಪುತ್ತಿಲ್ಲ. ಮಾತು ಮುಂದುವರೆಸಬೇಡಿ, ಸದನ ನಡೆಸಬೇಕು ಬನ್ನಿ ಎಂದು ತಾವು ಹೇಳುತ್ತಿದ್ದಿರಿ. ಪೀಠದ ಆದೇಶದ ಮೇರೆಗೆ ಸ್ವಯಂಪ್ರೇರಿತನಾಗಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಸರ್ಕಾರದ ಮೇಲೆ ನಮಗೆ ವಿಶ್ವಾಸವಿಲ್ಲ. 1800 ಕೋಟಿ ರೂ.ಗಳ ಅವ್ಯವಹಾರ ನಡೆಯುತ್ತಿದೆ, ಇದಕ್ಕಾಗಿ ಸದನ ಸಮಿತಿ ರಚನೆ ಮಾಡಿ ಎಂದರೆ, ಸರ್ಕಾರ ಒಪ್ಪುತ್ತಿಲ್ಲ.

**(ಗೊಂದಲ)**

ಸದನ ಸಮಿತಿ ರಚನೆ ಮಾಡಲು ಸರ್ಕಾರಕ್ಕೆ ಏನು ತೊಂದರೆ? ಸರ್ಕಾರ ಹೇಳಿದ ಹಾಗೆ ಕೇಳಿಕೊಂಡು ಕುಳಿತುಕೊಳ್ಳಲು ನಾವು ಇಲ್ಲಿ ಬಂದಿರುವುದಿಲ್ಲ. ಇದು ಸಾರ್ವಜನಿಕ ಹಿತಾಸಕ್ತಿಯ ವಿಚಾರ. ವಿರೋಧ ಪಕ್ಷದವರು ಹೀಗೆ ಇರಬೇಕು ಎಂದು ಆಡಳಿತ ಪಕ್ಷದವರು ಆಸೆಪಟ್ಟರೆ ನಾವೇನು ಮಾಡಲು ಆಗುವುದಿಲ್ಲ. ಒಂದು ವಿಚಾರ ತೀರ್ಮಾನವಾಗಬೇಕಾದರೆ ನಾವು ಹೇಳುವುದನ್ನು ಸಹ ಸರ್ಕಾರ ಕೇಳಬೇಕಾಗುತ್ತದೆ.

**(ಗೊಂದಲ)**

**ಡಾ: ಜಯಮಾಲ:–** ಮಾನ್ಯ ಸಭಾಪತಿಗಳೆ, ಅವ್ಯವಹಾರವಾಗಿದೆ ಎನ್ನುವುದಕ್ಕೆ ಅವರು ದಾಖಲೆಗಳನ್ನು ಕೊಡಬೇಕಾಗುತ್ತದೆ. ಅವರು ದಾಖಲೆಗಳನ್ನು ಕೊಡಲಿ.

**(ಗೊಂದಲ)**

**ಶ್ರೀ ಭೋಜೇಗೌಡ:–** ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದವರಿಗೆ ಚರ್ಚೆಯು ಬೇಕಾಗಿಲ್ಲ, ಪರಿಹಾರವು ಬೇಕಾಗಿಲ್ಲ; ಸರ್ಕಾರದಿಂದ ಉತ್ತರವು ಬೇಕಾಗಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರದ ಪರವಾಗಿ ಭೋಜೇಗೌಡರು ಉತ್ತರ ಕೊಡಬೇಕು ಎನ್ನುವುದು ನಮ್ಮ ಅಭಿಲಾಷೆಯಲ್ಲ. ಸರ್ಕಾರ ಉತ್ತರ ಕೊಡಬೇಕಾಗುತ್ತದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ಇನ್ನು ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡುವುದು ಇದೆ. ಒಂದೇ ವಿಚಾರವಾಗಿ ಮಾತನಾಡುತ್ತಾ ಹೋದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಸರ್ಕಾರ ಯಾವುದೇ ರೀತಿ ಮೊಂಡುವಾದವನ್ನು ಮಾಡಿದರು ನಾವು ಸದನವನ್ನು ನಡೆಸಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿದ್ದೇವೆ. 1800 ಕೋಟಿ ರೂ.ಗಳ ಅವ್ಯವಹಾರವನ್ನು ಸರ್ಕಾರ ತನಿಖೆ ಮಾಡದೆ ಹೋದರೆ, ನಾವೇ ಪ್ರತಿಪಕ್ಷದವರು ರಾಜ್ಯದ 30 ಜಿಲ್ಲೆಗಳಲ್ಲಿ ಸಂಚಾರ ಮಾಡಿ, ತನಿಖೆ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಕೊಡುತ್ತೇವೆ.

**(ಗೊಂದಲ)**

**ಶ್ರೀ ವೆಂಕಟರಮಣಪ್ಪ**(ಕಾರ್ಮಿಕ ಸಚಿವರು):- ಮಾನ್ಯ ಸಭಾಪತಿಗಳೆ, ಬಾವಿಗೆ ಬಿದ್ದು ಇಷ್ಟೊಂದು ಮಾತನಾಡುತ್ತಾರೆ. ಬರಿ ಬಾವಿಗೆ ಬೀಳುವುದೆ ಇವರ ಕೆಲಸ, ಬೇರೆ ಯಾವ ಕೆಲಸವು ಇಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಮ್ಮ ಪಾರ್ಟಿವತಿಯಿಂದ ನಾವು ತನಿಖೆ ಮಾಡುತ್ತೇವೆ. 18,400 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪರಿಶೀಲನೆ ಮಾಡುತ್ತೇವೆ. ಸರ್ಕಾರದ ಮುಖಕ್ಕೆ ಕನ್ನಡಿ ಹಿಡಿಯುವಂತಹ ವರದಿಯನ್ನು ಕೊಡುತ್ತೇವೆ. ಸರ್ಕಾರ ಮಾಡಿರುವ ಅಕ್ರಮವನ್ನು ಹೊರಗೆ ತರುತ್ತೇವೆ. ವರದಿಯ ಒಂದು ಪ್ರತಿಯನ್ನು ಸರ್ಕಾರಕ್ಕೂ ಕೊಡುತ್ತೇವೆ. ಸರ್ಕಾರದ ಅಕ್ರಮಗಳ ಬಗ್ಗೆ ಜನರಿಗೆ ತಿಳಿಸುತ್ತೇವೆ.

**(ಗೊಂದಲ)**

**ಶ್ರೀ ಭೋಜೇಗೌಡ:-** ಮಾನ್ಯ ಸಭಾಪತಿಗಳೆ, ವಿರೋಧ ಪಕ್ಷದವರು ನಿರ್ದಿಷ್ಟವಾಗಿ ಒಂದೇ ಒಂದು ಘಟನೆಯ ಬಗ್ಗೆಯು ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಜನರಲ್ ಆಗಿ ಹೇಳುತ್ತಿದ್ದಾರೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, 18,000 ಶುದ್ಧ ನೀರಿನ ಘಟಕಗಳ ಬಗ್ಗೆ ನಡೆದಿರುವ ಅಕ್ರಮವನ್ನು ತನಿಖೆ ಮಾಡುವುದಕ್ಕೆ ಸರ್ಕಾರ ಅಸಹಾಯಕವಾಗಿರುವುದರಿಂದ, ಪೀಠಕ್ಕೆ ಗೌರವ ಕೊಟ್ಟು, ಸದನ ನಡೆಯಬೇಕು ಎನ್ನುವ ಉದ್ದೇಶದಿಂದ ನಾವು ನಮ್ಮ ಧರಣಿಯನ್ನು ಹಿಂದಕ್ಕೆ ಪಡೆಯುತ್ತಿದ್ದೇವೆ.

**(ಈ ಹಂತದಲ್ಲಿ ಧರಣಿಯಲ್ಲಿ ನಿರತರಾಗಿದ್ದ ಭಾರತೀಯ ಜನತಾ ಪಕ್ಷದ ಸದಸ್ಯರು ತಮ್ಮ-ತಮ್ಮ ಸ್ಥಾನಕ್ಕೆ ತೆರಳಿದರು)**

**2. <u>ಪ್ರಕಟಣೆ</u>**

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ,

"ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಅನಾರೋಗ್ಯದ ನಿಮಿತ್ತ ವಿಧಾನ ಪರಿಷತ್ತಿನ 137ನೇ ಅಧಿವೇಶನದ ಎಲ್ಲಾ ಉಪವೇಶನಗಳಿಗೆ ಭಾಗವಹಿಸಲು ಅಸಾಧ್ಯವಾಗಿರುವ ಕಾರಣ ಹಾಜರಾತಿ ವಿನಾಯಿತಿಯನ್ನು ಕೊಡಬೇಕೆಂದು ಕೋರಿರುತ್ತಾರೆ"

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

**ಸಭಾಪತಿಯವರು:** ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

**<u>ಸಭೆಯು ಒಪ್ಪಿಗೆ ಸೂಚಿಸಿತು</u>**

3. **<u>ನಿಯಮ 59ರ ಮೇರೆಗೆ ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿ ಚರ್ಚೆಗೆ ಅವಕಾಶ ಕೋರಿಕೆ</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಹಾವೇರಿ ಜಿಲ್ಲೆಯಲ್ಲಿರುವ ಹಾನಗಲ್ ತಾಲ್ಲೂಕು..

**ಸಭಾಪತಿಯವರು:-** ಪ್ರಶ್ನೋತ್ತರವಾದ ಮೇಲೆ ತೆಗೆದುಕೊಂಡು ಬನ್ನಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ನಿನ್ನೆಯಿಂದ ಇದೇ ರೀತಿ ಕಾಲಹರಣವಾಗುತ್ತಿದೆ. ಇನ್ನು ಪ್ರಶ್ನೋತ್ತರ ಕಲಾಪ ಇದೆ, ಬೇರೆ-ಬೇರೆ ವಿಚಾರಗಳು ಇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಕುಡಿಯುಲು ನೀರು ಕೇಳಿದರೆ ಇವರು ಕಾಲಹರಣ ಎನ್ನುತ್ತಿದ್ದಾರೆ. ಸಭಾನಾಯಕರು ನಮ್ಮ ರಕ್ಷಣೆಗೆ ಬರಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ನಡೆದಿರುವ ಘಟನೆ ಬಗ್ಗೆ ಹೇಳುತ್ತಿದ್ದೇವೆ. ಈ ಘಟನೆಯಿಂದ ದೇಶಕ್ಕೆ ಅವಮಾನವಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಗಳೆ, ಈ ರೀತಿ ಮಾಡಿದರೆ ಜನ ಏನು ಹೇಳುತ್ತಾರೆ, ಇಷ್ಟೊಂದು ಲಕ್ಷ ರೂ.ಗಳನ್ನು ಖರ್ಚು ಮಾಡಿ ಅಧಿವೇಶನ ನಡೆಸುತ್ತಿರುವಾಗ ಸರ್ಕಾರದವರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ.

**(045)13–02–2019(11–40)ಬಿಎಸ್‌ಡಿ–ಎಂಡಿ**

**(ಗೊಂದಲ)**

**ಸಭಾಪತಿಯವರು:–** ನಾನು ನಂತರ ಅವಕಾಶ ಮಾಡಿಕೊಡುತ್ತೇನೆ. ಮೊದಲು ಪ್ರಶ್ನೋತ್ತರ ವೇಳೆ ಮುಕ್ತಾಯವಾಗಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಲಾ ಮಕ್ಕಳು ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು ಮೆರವಣಿಗೆ ಹೋಗುವ ಸಂದರ್ಭದಲ್ಲಿ ಮಕ್ಕಳಿಗೆ ...... ದಾರುಣ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ. ಕಾನೂನು ಸುವ್ಯವಸ್ಥೆ ಹದೆಗೆಟ್ಟಿದೆ, ರಾಷ್ಟ್ರಧ್ವಜಕ್ಕೆ ಅಪಮಾನವಾಗಿದೆ. ತಾವು ದಯಮಾಡಿ ಇದನ್ನು ಕೇಳಬೇಕು.

**ಸಭಾಪತಿಯವರು:–** ನಂತರ ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ರಾಷ್ಟ್ರಧ್ವಜಕ್ಕೆ ಅಪಮಾನ ಮಾಡುವುದು ನಡೆದಿದೆ.

**ಸಭಾಪತಿಯವರು:–** ನಾವೇ ಮಾಡಿಕೊಂಡ ನಿಯಮಾವಳಿಗಳ ಪ್ರಕಾರ ಪ್ರಸ್ತಾಪ ಮಾಡಲು ಆಗುವುದಿಲ್ಲ. ಆ ರೀತಿ ಪ್ರಸ್ತಾಪ ಮಾಡುವುದಾಗಿದ್ದರೆ ನಿಯಮಾವಳಿಗಳಲ್ಲಿ ಅವಕಾಶವಿದೆಯೇ? ಇದ್ದರೆ ತೋರಿಸಿ. ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕು. ತಮಗೆ ಪ್ರಶ್ನೋತ್ತರ ಅವಧಿ ಮುಕ್ತಾಯವಾದ ನಂತರ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ತಾವು ಇಡೀ ಸದನವನ್ನು ಏಕೆ ಈ ರೀತಿ ......

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನಿಯಮಾವಳಿಗಳಲ್ಲ, ಇದು ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:–** ಆ ರೀತಿ ಆಗಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಡಳಿತ ಪಕ್ಷದವರೇ ಸಭಾಪತಿ ಆಗುವುದಾದರೆ ನಾವೇನು ಮಾಡುವುದು? ತಾವು ನಮಗೆ ರಕ್ಷಣೆಯನ್ನು ನೀಡಬೇಕು. ತಮ್ಮ ಮಾತನ್ನು ಎಲ್ಲರೂ ಕೇಳಬೇಕು. ವಿರೋಧ ಪಕ್ಷದ ನಾಯಕನಾಗಿ ನಾನು ತಮ್ಮ ಮುಂದೆ ಇಟ್ಟಿರುವ ಜವಾಬ್ದಾರಿ ವಿಷಯ ಏನೆಂದರೆ, ರಾಷ್ಟ್ರಧ್ವಜಕ್ಕೆ ಅಪಮಾನವಾಗುವ ಗಂಭೀರ ಘಟನೆಗಳು ನಡೆಯುತ್ತಿವೆ. ಈ ವಿಷಯವನ್ನು ಪ್ರಾಥಮಿಕ ಹಂತದಲ್ಲಿ ಐದು ನಿಮಿಷಗಳ ಪ್ರಸ್ತಾಪಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:–** ತಾವು ಮನವಿ ಮಾಡಿದ್ದು, ಪ್ರಶ್ನೋತ್ತರದ ನಂತರ ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಯಿತು, ಪೀಠದ ಆದೇಶವನ್ನು ಪಾಲಿಸುತ್ತೇನೆ.

**4. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ: 360**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಉತ್ತರದಲ್ಲಿ ತತ್ಕಾಲ್ ಪೋಡಿ ಎಂಬ ಪದವನ್ನು ಬಳಸಿದ್ದಾರೆ. ಇಡೀ ರಾಜ್ಯದಲ್ಲಿ ಪೋಡಿ ಎನ್ನುವ ಪಿಡುಗಿನಿಂದ ರೈತರಿಗೆ, ಜನಸಾಮಾನ್ಯರಿಗೆ ಬಹಳ ತೊಂದರೆಯಾಗಿದೆ. ಇದನ್ನು ಸಮಗ್ರವಾಗಿ ಪರಿಹರಿಸಬೇಕು. ಅವರು ಕಂದಾಯ ಸಚಿವರಾದ ನಂತರ ಚೆನ್ನಾಗಿ ಕೆಲಸ ಮಾಡಿಕೊಂಡು ಇದರ ಬಗ್ಗೆ ಗಮನವನ್ನು ಕೊಟ್ಟಿದ್ದಾರೆ. ಇನ್ನೂ ಬೇರೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಸವಿಸ್ತಾರವಾಗಿ 1–5 ಎಂದಿರುವುದನ್ನು ಪೋಡಿ ಮಾಡಿದರೆ ರೈತರಿಗೆ ಉಪಯೋಗವಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಇದಲ್ಲದೇ ಪರವಾನಗಿ ಭೂಮಾಪಕರಿಗೆ ಮಾಹೆಯಾನ ಗುರಿಯನ್ನು 23ರಿಂದ 30ಕ್ಕೆ ನಿಗದಿಪಡಿಸಿದ್ದು, ಈ ಪರಿಸ್ಥಿತಿಯಲ್ಲಿಯೇ 23ರ ಗುರಿಯನ್ನು ತಲುಪುವುದು ಕಷ್ಟವಾಗಿದೆ. ಅಂದರೆ ದಾಖಲೆ ಸೇರಿದಂತೆ ಬೇರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆ ಸಮಸ್ಯೆಗಳು ಇವೆ. 30ರ ಗುರಿ ನಿಗದಿಪಡಿಸುವ ಬದಲು ಇನ್ನೂ ಕಡಿಮೆ ಗುರಿ ನಿಗದಿಪಡಿಸಬೇಕು ಮತ್ತು ಹೆಚ್ಚು ಭೂಮಾಪಕರನ್ನು ನೇಮಕ ಮಾಡಿಕೊಂಡು ಮಾಡಿದರೆ ಅನುಕೂಲವಾಗುತ್ತದೆ ಎಂದು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ತತ್ಕಾಲ್ ಪೋಡಿ 2008ರಲ್ಲಿ ಜಾರಿಗೆ ಬಂದಿದ್ದು, ಆ ಪ್ರಕಾರ ಮಾನ್ಯ ಸದಸ್ಯರು ಕೇಳಿರುವ ಜಿಲ್ಲೆಗೆ ಸಂಬಂಧಪಟ್ಟ ವಿವರಗಳನ್ನು ನೀಡಿದ್ದೇನೆ. ಅಕ್ಟೋಬರ್ ತಿಂಗಳಿನಿಂದ 850 ಭೂಮಾಪಕರನ್ನು ನೇಮಕ ಮಾಡಿದ್ದು, ಮಂಡ್ಯ ಜಿಲ್ಲೆಗೆ ಹೊಸದಾಗಿ 20 ಭೂಮಾಪಕರನ್ನು ಕೊಟ್ಟಿದ್ದೇನೆ. ಪರವಾನಗಿ ಭೂಮಾಪಕರು limited responsibility ಯನ್ನು ಹೊಂದಿರುತ್ತಾರೆ. ಖಾಸಗಿ ಜಮೀನನ್ನು ಅಳತೆ ಮಾಡಿ ವರದಿಯನ್ನು ಕಛೇರಿಗೆ ಕೊಟ್ಟ ನಂತರ ಅಧಿಕೃತ ಭೂಮಾಪಕರು ನೋಡುತ್ತಾರೆ. ಈಗ ಪೋಡಿ ಮುಕ್ತ ಆಂದೋಲನದ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ನಾವು ಗ್ರಾಮಗಳನ್ನು ಆಯ್ಕೆ ಮಾಡಿ, ಉಚಿತವಾಗಿ ಕೆಲಸ ಮಾಡಿಕೊಡುತ್ತೇವೆ. ಕೆಲವು ಕಡೆ ಅಪೇಕ್ಷೆಯಂತೆ ಕೆಲಸ ಆಗಿಲ್ಲ ಎನ್ನುವುದು ಗೊತ್ತು. ಹಾಗಾಗಿ ಹೆಚ್ಚುವರಿ ಭೂಮಾಪಕರುನ್ನು ನೇಮಿಸಿಕೊಂಡು ಕ್ರಮ ತೆಗೆದುಕೊಂಡಿದ್ದೇವೆ. 23ರ ಗುರಿಯಿಂದ 30ರ ಗುರಿ ನಿಗದಿಪಡಿಸಿ ಜವಾಬ್ದಾರಿ ಹೆಚ್ಚು ಮಾಡಿದ್ದೇವೆ. ಅವರುಗಳು ನನ್ನ ಹತ್ತಿರವೂ ಬಂದಿದ್ದರು. ಅವರಿಗೆ ಕೆಲಸ ಹೆಚ್ಚಾದರೂ ಆ ಕೆಲಸವನ್ನು ಮಾಡಬೇಕಾಗುತ್ತದೆ. ಅವರು ಪೋಡಿಯನ್ನು ಉಚಿತವಾಗಿ ಮಾಡುವುದಿಲ್ಲ, ಅವರಿಗೆ ರೂ.850/- ಹಣವನ್ನು ಕೊಡುತ್ತೇವೆ. Multi owners ಇದ್ದರೆ additional ಆಗಿ per block ಗೆ ರೂ.150ಗಳ ಹಣವನ್ನು ಕೊಡುತ್ತೇವೆ. ಹಾಗಾಗಿ ಪೋಡಿ ಆಂದೋಲನ ಯಶಸ್ವಿಯಾಗಿ, ಪೋಡಿ ಬೇಗ ಪಾರದರ್ಶಕವಾಗಿ ಆಗಬೇಕೆಂಬ ದೃಷ್ಟಿಯಿಂದ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.

**ಪ್ರಶ್ನೆ ಸಂಖ್ಯೆ: 415**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದು, ಈ ಉತ್ತರದಲ್ಲಿ ನನಗೆ ಸ್ವಲ್ಪ ಅನುಮಾನ ಇದೆ. ಏಕೆಂದರೆ ಬೀದರ್‌ನಲ್ಲಿ ರಿಂಗ್ ರೋಡ್ ಸುತ್ತಮುತ್ತಲೂ ಸುಮಾರು 30 ಎಕರೆಗಿಂತ ಮೇಲ್ಪಟ್ಟು platting ಮಾಡಿ ಮಾರುತ್ತಿದ್ದಾರೆ. ಆದರೆ ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಸಿ ಫಾರ್ಮ್‌ನಲ್ಲಿ ' ಇಲ್ಲ ' ಎಂದು ಹೇಳಿದ್ದಾರೆ. ಆ ಜಮೀನನ್ನು ದಲಿತರಿಗೆ ಉಳುಮೆ ಮಾಡಲು ಕೊಟ್ಟಿರುತ್ತಾರೆ. ಆದರೆ ಈ ಜಮೀನನ್ನು platting ಮಾಡಿಕೊಂಡು ಮಾರುತ್ತಿದ್ದಾರೆ. ಉದಾಹರಣೆಗೆ ನಾನು ಬೇಕೆಂದು ಸಿ ಫಾರ್ಮ್ ಜಮೀನಿನಲ್ಲಿ ಫ್ಲಾಟ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಂಡಿದ್ದೇನೆ. ಆದರೆ ಉತ್ತರದಲ್ಲಿ ಇಲ್ಲ ಎಂದಿರುವುದರಿಂದ ತಪ್ಪು ಮಾಹಿತಿ ಕೊಟ್ಟಿರಬಹುದು ಎಂದು ನನಗೆ ಅನಿಸುತ್ತಿದೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು ಮಾಹಿತಿ ಕೊಡುವಾಗ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ನೀಡಿರುವ ಮಾಹಿತಿ ಆಧಾರದ ಮೇಲೆ ಮಾಹಿತಿಯನ್ನು ಕೊಟ್ಟಿದ್ದೇನೆ. ಫಾರ್ಮ್ ಸಿ ಲ್ಯಾಂಡ್ ಎಂದರೆ ಸಾಗುವಳಿ ಚೀಟಿ ಭೂಮಿಯಾಗಿದೆ. ಕಜಡಿುಖಜಡಿಚಿಟ ಡಿಟಟಿರ ಡಿಂಚಿಜ ಆ ವಲಯದಲ್ಲಿ ಇಲ್ಲ ಎಂದು ನನಗೆ ವರದಿ ಬಂದಿದ್ದು, ಮಾನ್ಯ ಸದಸ್ಯರು ಇದೆ ಎಂದು ಹೇಳಿದಾಗ ಅವರ ಮಾತಿಗೂ ನಾನು ಗೌರವ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಲಭ್ಯವಿರುವ ದಾಖಲಾತಿಗಳೊಡನೆ ನನಗೆ ಲಿಖಿತವಾಗಿ ಪತ್ರ ನೀಡಿದರೆ, ತಪ್ಪು ಮಾಹಿತಿ ನೀಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಕೇಳಿರುವ ಪ್ರಶ್ನೆಯ ಸಂಬಂಧವೂ ಕ್ರಮ ತೆಗೆದುಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ: 459**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಹಿರಿಯ ಸಚಿವರು ಬಹಳ ದೀರ್ಘವಾಗಿ ಉತ್ತರವನ್ನು ನೀಡಿದ್ದು, ಇವತ್ತು ಬರದಿಂದ ಜನರ ಬದುಕು ಬಹಳ ಭಾರವಾಗಿದೆ. 156 ತಾಲ್ಲೂಕುಗಳಲ್ಲಿ ಭೀಕರ ಬರವನ್ನು ರಾಜ್ಯದ ಜನರು ನೋಡುತ್ತಿದ್ದಾರೆ. ಚಳಿಗಾಲದಲ್ಲಿ ಕೃಷಿ ಚಟುವಟಿಕೆಗೆ ಬೇಕಿರುವ ನೀರಿಗೆ ಎಷ್ಟು ಕಷ್ಟವಾಗುತ್ತಿದೆ ಎಂದು ಉತ್ತರದಲ್ಲಿ ವಿವರವಾಗಿ ತಿಳಿಸಿದ್ದಾರೆ. ಬಹುಶ: ಇವತ್ತು ಮಳೆಗಾಲದಲ್ಲಿಯೇ ವಾಡಿಕೆ ಮಳೆಗಿಂತ ಇಷ್ಟೊಂದು ಪ್ರಮಾಣದ ಮಳೆಯ ಕೊರತೆ ಇದೆ. ಉತ್ತರದಲ್ಲಿ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡುವ ಬಗ್ಗೆಯೂ ತಿಳಿಸಿದ್ದು, ಇದನ್ನು ವ್ಯವಸ್ಥಿತವಾಗಿ ಮಾನಿಟರಿಂಗ್ ಮಾಡಲು ಜವಾಬ್ದಾರಿಯನ್ನು ಯಾರಿಗೆ ಕೊಡಲಾಗಿದೆ ಮತ್ತು ಇದು ಪಾರದರ್ಶಕವಾಗಿ ನಡೆಯುತ್ತಿದೆಯೇ ಎಂದು ಕೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ, ಕೆಲವು ಕಡೆ ಮೇವು ಬ್ಯಾಂಕ್‌ಗಳು ಸರಿಯಾದ ರೀತಿಯಲ್ಲಿ ಜಾನುವಾರುಗಳಿಗೆ ಮೇವನ್ನು ಒದಗಿಸುತ್ತಿದೆಯೇ? ಮೇವು ಇಲ್ಲದೇ ತೊಂದರೆಯಾಗಿ ಜಾನುವಾರುಗಳು ಕಸಾಯಿಖಾನೆಗೆ ಹೋಗುತ್ತಿವೆಯೇ? ಜನರು ಗುಳೆ ಹೋಗಲು ಇರುವ ಮುಖ್ಯವಾದ ಕಾರಣಗಳನ್ನು ಮಾನ್ಯ ಸಚಿವರು ತಿಳಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇನ್ನು ಮೂರನೆಯದಾಗಿ, ನೈಸರ್ಗಿಕ ವಿಕೋಪದಿಂದ ಕೇಂದ್ರದ ವರದಿಯನ್ನು ಮಾನ್ಯ ಸಚಿವರು ನೋಡಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ವರ್ಷಕ್ಕಿಂತ ವರ್ಷಕ್ಕೆ ಮಳೆ ಪ್ರಮಾಣದ ಕೊರತೆಯುಂಟಾಗುತ್ತಿದ್ದು, ಈ ಬರವನ್ನು ನಿರ್ವಹಣೆ ಮಾಡಲು ಎಷ್ಟು ಅನುದಾನ ಬಿಡುಗಡೆಯಾಗಿದೆ ಎಂದು ವಿವರವಾದ ಮಾಹಿತಿ ನೀಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್. ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಿಳಿಸಿದಂತೆ ಕರ್ನಾಟಕದ ರೈತರು ಮತ್ತು ಕೂಲಿಕಾರರು ಬಹಳ ಕಷ್ಟದಲ್ಲಿದ್ದಾರೆ. ಕರ್ನಾಟಕಕ್ಕೆ ಬರಗಾಲವು ಕಾಡುತ್ತಿದೆ. ಕಳೆದ 18 ವರ್ಷಗಳಲ್ಲಿ ಸುಮಾರು 13-14 ವರ್ಷಗಳ ಕಾಲ ಭೀಕರ ಬರಗಾಲ ಇತ್ತು. ಈ ವರ್ಷ ಕೊಡಗು ಮತ್ತು ಕರಾವಳಿ ಪ್ರದೇಶಗಳಲ್ಲಿ ಸಾಕಷ್ಟು ಅತಿವೃಷ್ಟಿಯಾಯಿತು.

**(46)13-02-2019(11-50)ಹೆಚ್‌ವಿ-ಎಂಡಿ**

**ಶ್ರೀ ಆರ್.ವಿ.ದೇಶಪಾಂಡೆ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಅನಂತರ ಮುಂಗಾರು ಹಂಗಾಮಿನಲ್ಲಿ ಸುಮಾರು 100 ತಾಲ್ಲೂಕುಗಳನ್ನು ಮತ್ತು ಹಿಂಗಾರು ಹಂಗಾಮಿನಲ್ಲಿ ಸುಮಾರು 156 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ವಿವರವನ್ನು ಲಿಖಿತರೂಪದ ಉತ್ತರದಲ್ಲಿ ನೀಡಿದ್ದೇನೆ. ನಿನ್ನೆಯ ದಿನ ಪುನಃ ಸುಮಾರು 162 ಕೋಟಿ ರೂಪಾಯಿಗಳನ್ನು 30 ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ. ಈ ಮಾತನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ, ಬರ ನಿರ್ವಹಣೆ ಮಾಡುವುದಕ್ಕೆ ಸರ್ಕಾರಕ್ಕೆ ಹಣದ ಕೊರತೆ ಇಲ್ಲ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬರ ನಿರ್ವಹಣೆಗಾಗಿ ಕನಿಷ್ಠ 5 ಕೋಟಿ ರೂಪಾಯಿಗಳ ಅನುದಾನ ಇರಬೇಕೆನ್ನುವ ಆದೇಶವನ್ನು ನೀಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಮುಂಗಾರು ಹಂಗಾಮಿನಲ್ಲಿ ಸುಮಾರು 100 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿತ್ತು. ಆ ತಾಲ್ಲೂಕುಗಳಲ್ಲಿ ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡುವುದಕ್ಕೆ, ಪಂಪ್ ಮತ್ತು ಮೋಟಾರ್‌ಗಳನ್ನು ಖರೀದಿ ಮಾಡುವುದಕ್ಕೆ ಒಂದೂವರೆ ಲಕ್ಷಕ್ಕಿಂತ ಹೆಚ್ಚಿಗೆ pipeline extend ಮಾಡುವ ಕಾರ್ಯಗಳಿಗಾಗಿ Task Force ಗಳಿಗೆ ಈಗಾಗಲೇ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಅದೇರೀತಿಯಲ್ಲಿ ಮೇವಿನ ಸಾಗಾಣಿಕೆ ಮತ್ತು ಖರೀದಿಯ ಉದ್ದೇಶಕ್ಕಾಗಿ 25 ಕೋಟಿ ರೂಪಾಯಿಗಳನ್ನು ಪಶುಸಂಗೋಪನಾ ಇಲಾಖೆಗೆ ನೀಡಲಾಗಿದೆ. ಅಷ್ಟೇ ಅಲ್ಲದೇ, ದನಕರುಗಳ ಜೊತೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕುರಿಗಳಿಗೂ ಮೇವಿನ ತೊಂದರೆಯಾಗಬಾರದೆನ್ನುವ ಉದ್ದೇಶದಿಂದ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ನಿಗಮಕ್ಕೆ ಸುಮಾರು 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಬಹಳ ದಿನಗಳಾಗಿವೆ. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಕ್ತವಾದ ಆದೇಶವನ್ನು ನೀಡಿದ್ದೇವೆ. Task Forceಗಳಿಗೆ ವಿಧಾನಸಭೆಯ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಅವರು ಎಲ್ಲಿ ಮೇವು ಸಂಗ್ರಹಣಾ ಕೇಂದ್ರ ಆಗಬೇಕೆಂದು ಹೇಳುತ್ತಾರೆ, ಅದರಂತೆ ಮೇವು ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿದ್ದೇವೆ. ನಮ್ಮ ಅಧಿಕಾರಿಗಳು ಅದರ ಬಗ್ಗೆ ನಿಗಾ ವಹಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಂದ ಹಿಡಿದು ಅವರ ಕೆಳ ಹಂತದವರೆಗಿನ ಅಧಿಕಾರಿಗಳು ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಬೇಕೆನ್ನುವ ನಿರ್ದೇಶನವನ್ನು ನೀಡಲಾಗಿದೆ. ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿಗಳಲ್ಲಿ ಮತ್ತು ಕೆ.ಡಿ.ಪಿ. ಕಛೇರಿಗಳಲ್ಲಿ ದೂರುಗಳನ್ನು ದಾಖಲಿಸಲು register ಇಡುವುದಕ್ಕೆ ಹೇಳಿದ್ದೇವೆ. ಅಲ್ಲಿಗೆ ಭೇಟಿ ನೀಡುವ ಅಧಿಕಾರಿಗಳು, ಯಾವಾಗ ಭೇಟಿ ನೀಡಿದ್ದೇವೆ, ಏತಕ್ಕೋಸ್ಕರ ಭೇಟಿ ನೀಡಿದ್ದೇವೆ ಮತ್ತು ಏನು ಮಾಡಲಾಯಿತು ಎನ್ನುವುದರ ವಿವರವನ್ನು ಆ register ನಲ್ಲಿ ಬರೆಯುವುದಕ್ಕೆ ಹೇಳಿದ್ದೇವೆ. ಸಚಿವ ಸಂಪುಟದ ಉಪ ಸಮಿತಿಯಲ್ಲಿ 4 divisionಗಳಿಗೆ 4 ತಂಡಗಳನ್ನು ರಚನೆ ಮಾಡಲಾಗಿದೆ. ಈ 4 ತಂಡಗಳು ಪ್ರತಿಯೊಂದು ಜಿಲ್ಲೆಗೆ ಭೇಟಿ ಕೊಟ್ಟು ವರದಿಯನ್ನು ಕೊಟ್ಟಿವೆ. ನಾವು ವರದಿಯನ್ನು ಪಡೆದುಕೊಂಡಿದ್ದೇವೆ. ಸರ್ಕಾರ ಯುದ್ಧೋಪಾದಿಯಲ್ಲಿ ಬರ ನಿರ್ವಹಣೆಗಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಆದರೆ, ಇನ್ನೂ ಸಮಸ್ಯೆಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, ಯಾರೂ ಗುಳೆ ಹೋಗಬಾರದೆನ್ನುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ನಾನು ಯಾರ ಮೇಲೂ ಆರೋಪವನ್ನು ಹೊರೆಸುವುದಕ್ಕೆ ಹೋಗುವುದಿಲ್ಲ. ಆದರೆ ದುರಾದೃಷ್ಟವಶಾತ್, ನರ್ರೇಗಾ ಯೋಜನೆಯಡಿಯಲ್ಲಿ ಕೂಲಿ ಕಾರ್ಮಿಕರ ಕೂಲಿಯನ್ನು ನೇರವಾಗಿ ಕೇಂದ್ರ ಸರ್ಕಾರದವರೇ ತಮ್ಮ Web Portal ನಿಂದ ನೂರಕ್ಕೆ ನೂರರಷ್ಟು ಪೇಮೆಂಟ್ ಮಾಡುತ್ತಿದ್ದಾರೆ. Material componentನಲ್ಲಿ ಶೇಕಡಾ 75ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಭರಿಸುತ್ತಾರೆ, ಇನ್ನುಳಿದ ಉಳಿದ ಶೇಕಡಾ 25ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಈ ವರ್ಷದಲ್ಲಿ ಸುಮಾರು 1,000 ಕೋಟಿ ರೂಪಾಯಿಗಳಷ್ಟು ಬಾಕಿ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ. ಅದೇ ರೀತಿಯಲ್ಲಿ ಕಳೆದ ವರ್ಷದ ಬಾಕಿ ಸುಮಾರು 1,000 ಕೋಟಿ ರೂಪಾಯಿಗಳು ಬರಬೇಕಾಗಿದೆ. ಹಿಂಗಾರು ಹಂಗಾಮಿನಲ್ಲಿ ಉಂಟಾಗಿರುವ ಬೆಳೆ ನಷ್ಟದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಕೇಂದ್ರದ ಗೃಹ ಸಚಿವರ ಗಮನಕ್ಕೆ ಈ ವಿಚಾರವನ್ನು ತಂದಿದ್ದೆ. ಇದರ ಜೊತೆಗೆ ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಎಲ್ಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಲೋಕಸಭಾ ಸದಸ್ಯರುಗಳ ನಿಯೋಗವನ್ನು ತೆಗೆದುಕೊಂಡು ದೆಹಲಿಗೆ ಹೋಗಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೂ ಈ ವಿಚಾರವನ್ನು ತಂದಿದ್ದಾರೆ. ಎಲ್ಲರ ಸಹಕಾರವನ್ನು ನಾವು ಅಪೇಕ್ಷಿಸಿದ್ದೇವೆ. ಈಗ ರಾಜ್ಯ ಸರ್ಕಾರದ ಹಣದಿಂದ ನಾವು ಪೇಮೆಂಟ್ ಮಾಡುತ್ತಿದ್ದೇವೆ. ಇದು ಬಹಳ ಕಷ್ಟದ ಕೆಲಸವಾಗಿದೆ. ಏಕೆಂದರೆ, Web Portal ಕೇಂದ್ರ ಸರ್ಕಾರದ ಬಳಿಯಿದೆ. ಕೂಲಿ ಕಾರ್ಮಿಕರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ನಾವು ಹಣವನ್ನು ಸಂಗ್ರಹ ಮಾಡಿ ಪೇಮೆಂಟ್ ಮಾಡುತ್ತಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಜನರಿಗೆ ಮತ್ತು ದನಕರುಗಳಿಗೆ ಕುಡಿಯುವ ನೀರಿನ ಅಭಾವ ಇರಬಾರದೆನ್ನುವ ದೃಷ್ಟಿಯಿಂದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವನ್ಯ ಜೀವಿಗಳಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಅರಣ್ಯದ ಪಕ್ಕದಲ್ಲಿ ಕೆರೆಗಳು ಇದ್ದರೆ, ಆ ಕೆರೆಗಳ ಹೂಳು ತೆಗೆಯುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಹಾಗಾಗಿ ಇವತ್ತು SDRF (State Disaster Response Fund) and NDRF (National disaster Response Fund) ಅಡಿಯಲ್ಲಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಜನರು ಯಾರೂ ಗುಳೆ ಹೋಗಬಾರದು ಎನ್ನುವ ದೃಷ್ಟಿಯಿಂದ ಜನರಿಗೆ, ದನಕರುಗಳಿಗೆ ಕುಡಿಯುವ ನೀರಿನ ಅಭಾವ ಇರಬಾರದು ಮತ್ತು ಜಾನುವಾರುಗಳಿಗೆ ಮೇವಿನ ಅಭಾವ ಇರಬಾರದೆಂದು ಎಲ್ಲ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಬರ ನಿರ್ವಹಣೆಗಾಗಿ ಮುಂಗಾರು ಹಂಗಾಮಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ನಾವು ಮನವಿಯನ್ನು ಕೊಟ್ಟಿದ್ದೆವು. ರೈತರು ಬೆಳೆದ ಬೆಳೆಗೆ ಸಬ್ಸಿಡಿಯನ್ನು ನೀಡುವುದಕ್ಕೆ ಮತ್ತು ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಸುಮಾರು 2,434 ಕೋಟಿ ರೂಪಾಯಿಗಳ ಪರಿಹಾರವನ್ನು ಕೇಳಿದ್ದೆವು. ಕೇಂದ್ರ ಸರ್ಕಾರ 949.49 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ, ಇನ್ನೂ ಹಣ ಬಿಡುಗಡೆಯಾಗಿಲ್ಲ. ಮೊನ್ನೆ ದಿನ ಮಾನ್ಯ ಪ್ರಧಾನಮಂತ್ರಿಗಳು ಹುಬ್ಬಳ್ಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ವಿಚಾರವನ್ನು ಅವರ ಗಮನಕ್ಕೂ ತಂದಿದ್ದೇನೆ.

ಮುಂಗಾರು ಹಂಗಾಮಿನಲ್ಲಿ ಸುಮಾರು 28 ತಾಲ್ಲೂಕುಗಳಲ್ಲಿ ಸಾಧಾರಣವಾದ ಬರಗಾಲವಿದ್ದು, ಈ ತಾಲ್ಲೂಕುಗಳಲ್ಲಿ ಶೇಕಡಾ 33ರಷ್ಟು ಬೆಳೆ ನಷ್ಟವಾಗಿದೆ. ಕೇಂದ್ರ ಸರ್ಕಾರದ ಹೊಸ ಮಾರ್ಗಸೂಚಿಯ ಪ್ರಕಾರ ಇಲ್ಲಿಯೂ ಸಹ ನಮಗೆ ಪರಿಹಾರ ದೊರೆಯಬೇಕಾಗಿತ್ತು, ಆದರೆ ಪರಿಹಾರ ಸಿಕ್ಕಿಲ್ಲ. ಈ ಬಗ್ಗೆ ಮಾನ್ಯ ಗೃಹ ಸಚಿವರು ಪುನಃ ಕೇಂದ್ರ ಸರ್ಕಾರದ ಕೃಷಿ ಸಚಿವರಿಗೆ 'ತಾವು ನಮಗೆ ಕೇವಲ 949.49 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ, ನಮಗೆ ಅನ್ಯಾಯವಾಗಿದೆ. ಇದನ್ನು ಪುನರ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರಿಶೀಲನೆ ಮಾಡಬೇಕು' ಎಂದು ಒಂದು ಪತ್ರವನ್ನು ಬರೆದಿದ್ದಾರೆ. ನಾನು ಈ ವಿಚಾರವನ್ನು ಮಾನ್ಯ ಪ್ರಧಾನಮಂತ್ರಿಗಳ ಗಮನಕ್ಕೂ ತಂದಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಹಿಂಗಾರು ಹಂಗಾಮಿನಲ್ಲಿ ಸುಮಾರು 156 ತಾಲ್ಲೂಕುಗಳನ್ನು ಬರಗಾಲ ಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಲಾಗಿದೆ. ಇದೇ ತಿಂಗಳ 5ನೇ ತಾರೀಖಿನಂದು ನಾನು ಮತ್ತು ಕೃಷಿ ಸಚಿವರು ಕೇಂದ್ರ ಸರ್ಕಾರದ ಗೃಹ ಸಚಿವರಾದ ಮಾನ್ಯ ರಾಜನಾಥ್‌ಸಿಂಗ್ ಅವರನ್ನು ಭೇಟಿ ಮಾಡಿ, ರಾಜ್ಯದ ರೈತರ ಸಹಾಯಕ್ಕೆ ಧಾವಿಸಬೇಕೆಂದು ಕೇಳಿಕೊಂಡಿದ್ದೇವೆ. ಈ 156 ತಾಲ್ಲೂಕುಗಳಲ್ಲಿ ಒಟ್ಟಾರೆಯಾಗಿ 11,384.47 ಕೋಟಿ ರೂಪಾಯಿಗಳಷ್ಟು ಬೆಳೆ ಹಾನಿ ಸಂಭವಿಸಿದೆ. ನಾವು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ರೂ.2064.30 ಕೋಟಿಗಳಷ್ಟು ಹಣವನ್ನು ಕೇಳಿದ್ದೇವೆ. ಇದನ್ನು ಮಾನ್ಯ ಪ್ರಧಾನಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಕರ್ನಾಟಕ ರಾಜ್ಯದ ರೈತರು ಮತ್ತು ಕೂಲಿ ಕಾರ್ಮಿಕರು ಬಹಳ ಕಷ್ಟದಲ್ಲಿದ್ದಾರೆ, ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರದ ಇತಿಮಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದ್ದರಿಂದ ಹಿಂಗಾರು ಹಂಗಾಮಿನಲ್ಲಿ ಆಗಿರುವ ಬೆಳೆ ನಷ್ಟದ ಅಧ್ಯಯನಕ್ಕಾಗಿ ಕೇಂದ್ರ ತಂಡವನ್ನು ಕಳುಹಿಸಿಕೊಡಬೇಕು, ಮುಂಗಾರು ಹಂಗಾಮಿನ ಬರ ನಿರ್ವಹಣೆಗಾಗಿ ಕೊಡಬೇಕಾಗಿರುವ ಬಾಕಿ ಉಳಿದಿರುವ ಹಣ ಬಿಡುಗಡೆಯಾಗಬೇಕು ಮತ್ತು Rural Development and Panchayat Raj Department ನಿಂದ wage component and material componentಗೆ ಹಣ ಬಿಡುಗಡೆಯಾಗಬೇಕು' ಎಂದು ಕೇಳಿದ್ದೇವೆ. ಅದೇ ರೀತಿಯಲ್ಲಿ ಈ ಸದನದ ಸದಸ್ಯರಲ್ಲಿ ನಾನು ಮನವಿ ಮಾಡುವುದೇನೆಂದರೆ, ತಮ್ಮ ಗಮನಕ್ಕೆ ಯಾವುದಾದರು ಸಮಸ್ಯೆ ಕಂಡು ಬಂದರೆ, ತಾವು ತಕ್ಷಣ ನನ್ನನ್ನು ಸಂಪರ್ಕಿಸಿ ಸಲಹೆ ಕೊಡಬೇಕಾಗಿದೆ. ಬರಗಾಲವಿರಬಹುದು ಅಥವಾ ಪ್ರವಾಹ ಇರಬಹುದು, ಈ ಪರಿಸ್ಥಿತಿಯನ್ನು ನಾವೆಲ್ಲರೂ ಕೂಡಿ ಎದುರಿಸಬೇಕಾಗಿದೆ. ಸರ್ಕಾರದ ಕೆಲಸಕ್ಕೆ ಜನಪ್ರತಿನಿಧಿಗಳ ಮತ್ತು ಎಲ್ಲರ ಸಹಕಾರ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಮ್ಮೆಲ್ಲರ ಸಹಕಾರವನ್ನು ಮತ್ತು ಸಲಹೆಗಳನ್ನು ಕೇಳುತ್ತಾ, ಅವರ ಪ್ರಶ್ನೆಗೆ ಉತ್ತರವನ್ನು ನೀಡಿದ್ದೇನೆ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಮಾನ್ಯ ಸಚಿವರು ಮಾತನಾಡುತ್ತಾ, ಕುಡಿಯುವ ನೀರಿನ ಸಮಸ್ಯೆ ಎಲ್ಲಿಯೂ ಇಲ್ಲವೆಂದು ಹೇಳಿದ್ದಾರೆ. ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ವರದಿಯ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ.....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ವಿ.ದೇಶಪಾಂಡೆ:–** ಸನ್ಮಾನ್ಯ ಸಭಾಪತಿಯವರೇ, ಎಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ಇಲ್ಲವೆಂದು ನಾನು ಎಲ್ಲೂ ಹೇಳಿಲ್ಲ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಚಿಕ್ಕಬಳ್ಳಾಪುರ ಜಿಲ್ಲೆಯ ಸುಮಾರು 80 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ ಎನ್ನುವ ವಿಚಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಾನ್ಯ ಸಚಿವರು ಉತ್ತರ ನೀಡುವ ಸಂದರ್ಭದಲ್ಲಿ, 'ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಬರ ನಿರ್ವಹಣೆಗಾಗಿ ಕನಿಷ್ಠ 5 ಕೋಟಿ ರೂಪಾಯಿಗಳ ಅನುದಾನ ಇರಬೇಕೆನ್ನುವ ಆದೇಶವನ್ನು ನೀಡಿದ್ದೇವೆ.' ಎನ್ನುವ ಮಾತನ್ನು ಹೇಳಿದ್ದಾರೆ. ಆದರೂ ಸಹ ಕೆಲವು ಕಡೆಗಳಲ್ಲಿ ಈ ರೀತಿಯ ಸಮಸ್ಯೆಗಳು ಕಂಡುಬರುತ್ತಿವೆ, ಇದರ ಬಗ್ಗೆಯೂ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಜಾನುವಾರುಗಳಿಗೆ ಮೇವನ್ನು ಒದಗಿಸುವುದಕ್ಕಾಗಿ ಮೇವು ಸಂಗ್ರಹಣಾ ಕೇಂದ್ರಗಳನ್ನು ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿ ತೆರೆಯಲಾಗಿದೆ. ಈ ಮೇವು ಸಂಗ್ರಹಣಾ ಕೇಂದ್ರಗಳನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿ, ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ಮೇವನ್ನು ಸಮರ್ಪಕವಾಗಿ ಸರಬರಾಜು ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ವಿ.ದೇಶಪಾಂಡೆ:–** ಸನ್ಮಾನ್ಯ ಸಭಾಪತಿಯವರೇ, ಸುಮಾರು 327 ಹಳ್ಳಿಗಳಿಗೆ 595 ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸಿಕೊಡಲಾಗುತ್ತಿದೆ ಮತ್ತು 420 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡು ನೀರನ್ನು ಖರೀದಿ ಮಾಡಿ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳಿಗೆ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುತ್ತಿದೆ ಎನ್ನುವುದನ್ನು ಲಿಖಿತ ರೂಪದಲ್ಲಿ ಕೊಟ್ಟಿರುವ ಉತ್ತರದಲ್ಲಿ ತಿಳಿಸಿದ್ದೇನೆ. ಅವರ ಗಮನಕ್ಕೆ ಎಲ್ಲಿಯಾದರು ಸಮಸ್ಯೆಗಳು ಕಂಡುಬಂದರೆ ಅದನ್ನು ನನ್ನ ಗಮನಕ್ಕೆ ತರಬೇಕೆಂದು ಮನವಿ ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ ಮೇವು ಸಂಗ್ರಹಣಾ ಕೇಂದ್ರಗಳನ್ನು ತೆರೆಯುವುದಕ್ಕೆ ಆದೇಶ ಕೊಟ್ಟಿದ್ದೇವೆ. Task Forceಗಳು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಿದರೆ, ಇನ್ನೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಬರಬೇಕಾಗಿರುವ ಹಣಕ್ಕಾಗಿ ನಾವು ಕೇಂದ್ರ ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದೇವೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. 2016–17ನೇ ಸಾಲಿನಲ್ಲಿ 2140 ಕೋಟಿ ರೂಪಾಯಿಗಳನ್ನು, 2017–18ನೇ ಸಾಲಿನಲ್ಲಿ 2628 ಕೋಟಿ ರೂಪಾಯಿಗಳು ಮತ್ತು ಈ ಸಾಲಿನಲ್ಲಿ ಅಂದರೆ, 2018–19ನೇ ಸಾಲಿನಲ್ಲಿ 10 ಕೋಟಿ ಮಾನವ ದಿನಗಳ ಬೇಡಿಕೆಯನ್ನು ಸಲ್ಲಿಸಲಾಗಿದೆ. ನಿನ್ನೆ ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಈ ಬಗ್ಗೆ ಉಲ್ಲೇಖ ಮಾಡಿರುವುದನ್ನು ನಾನು ಕೇಳಿದ್ದೇನೆ. ಇಲಾಖೆಯಿಂದ ನಾನು ಮಾಹಿತಿ ತರಿಸಿಕೊಂಡಿದ್ದೇನೆ. ರಾಜ್ಯ ಸರ್ಕಾರ ಬೇಡಿಕೆ ಇಟ್ಟಿರುವ 10 ಕೋಟಿ ಮಾವನ ದಿನಗಳಿಗೆ ಬೇಕಾಗಿರುವ ಭೌತಿಕ ಗುರಿ ಸುಮಾರು 4,399 ಕೋಟಿ ರೂಪಾಯಿಗಳ ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರ ಅನುದಾನವನ್ನು ಕೊಟ್ಟಿದೆ ಎನ್ನುವ ಮಾಹಿತಿ ನನಗೆ ದೊರೆತಿದೆ.

**(47) 13.2.2019 12.00 ಪಿಕೆ:ಎಕೆ**

**ಶ್ರೀ ಕೋಟ ಶ್ರೀನಿವಾಸಪೂಜಾರಿ(ಮುಂದುವರೆದಿದೆ)**

ಅದರ ಜೊತೆ, ರೂ.450 ಕೋಟಿ ಯಿಂದ ರೂ. 500 ಕೋಟಿಗಳನ್ನು ಕೇಂದ್ರ ಸರ್ಕಾರ ಏನು ಹಣ ಬಿಡುಗಡೆ ಮಾಡಿದೆಯೋ ಆ ಹಣ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ "ಮಹಾತ್ಮಗಾಂಧೀ ಉದ್ಯೋಗ ಖಾತ್ರಿ ಯೋಜನೆ" ಗೆಂದೇ ಮೀಸಲಿದೆ. ಆರ್ಥಿಕ ವರ್ಷಕ್ಕೆ ಒಂದು ತಿಂಗಳು ಇರುವುದರಿಂದ ಯಾವುದೇ ಕಾರಣಕ್ಕೂ ಹಣದ ತೊಂದರೆ ಆಗುವುದಿಲ್ಲ ಎಂದು ಇಲಾಖೆಯವರು ನನಗೆ ಮಾಹಿತಿ ಕೊಡುತ್ತಾರೆ. ಆದರೆ ನಿನ್ನೆ ಗೌರವಾನ್ವಿತ ಮಂತ್ರಿಗಳು, ಕೇಂದ್ರ ಸರ್ಕಾರ ಸುಮಾರು ರೂ. 2,000 ಕೋಟಿಗಳನ್ನು ಕೊಡಬೇಕೆಂದು ವಾದ ಮಂಡಿಸಿದರು. ಬರ ಮತ್ತು ಅತಿವೃಷ್ಟಿಯ ವಿಚಾರದಲ್ಲಿ ಅಂಕಿ-ಅಂಶಗಳ ಆಟ ಆಡದೇ ರಾಜಕಾರಣಕ್ಕೋಸ್ಕರ ರಾಜ್ಯ ಸರ್ಕಾರ ತಪ್ಪು ಮಾಹಿತಿಗಳನ್ನು ಕೊಡಬಾರದು. ನನಗಿರುವ ಮಾಹಿತಿ ಪ್ರಕಾರ ರಾಜ್ಯ ಸರ್ಕಾರದ ಬಳಿ ಉದ್ಯೋಗ ಖಾತ್ರಿ ಯೋಜನೆಗೆಂದು ರೂ. 450 ಕೋಟಿ ಯಿಂದ ರೂ.500 ಕೋಟಿ ರೂಪಾಯಿಗಳಿದ್ದು ಹಣದ ತೊಂದರೆ ಇಲ್ಲ. ಕೆಲವು ಗ್ರಾಮ ಪಂಚಾಯಿತಿಯ ಪಿಡಿಓಗಳ ಮೇಲೆ ಎಸಿಪಿಯವರ ಮೇಲೆ ದೂರು ಇರುವುದರಿಂದ, ಲೋಕಾಯುಕ್ತರ ತನಿಖೆ ಇರುವುದರಿಂದ ಅಂತಹ ಪ್ರಕರಣಗಳಲ್ಲಿ ಪೆಂಡಿಂಗ್ ಇರಬಹುದು. ಒಂದು ವೇಳೆ ಅಂತಹ ಪ್ರಕರಣಗಳಲ್ಲಿ ಪೆಂಡಿಂಗ್ ಇದ್ದರೆ ಅದು ಎಷ್ಟು ಸಾವಿರ ಕೋಟಿ ಆಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ, ನಮ್ಮ ಗ್ರಾಮ ಪಂಚಾಯಿತಿಗಳಲ್ಲಿ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಕ್ಕೆ ಹೋದರೆ ಯಾವ ಪಿಡಿಓಗಳೂ ಕೂಡ ಬೇರೆ ಬೇರೆ ಕಾರಣಗಳಿಗೆ ಬಿಲ್ ಮಾಡದೇ ಇರುವ ಪರಿಸ್ಥಿತಿ ಇದೆ. ಪಿಡಿಓ ಮತ್ತು ಎಸಿಪಿಗಳು ಯಾವ ಸರ್ಕಾರದ ಅಡಿ ಬರುತ್ತಾರೆ ಎನ್ನುವುದು ನಿಮಗೆ ಗೊತ್ತಿದೆ. ಎಲ್ಲದಕ್ಕೂ ಕೇಂದ್ರ ಸರ್ಕಾರವನ್ನು ದೂರವ ಕೆಲಸ ಮಾಡಬಾರದು. ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವ ಅಂಕಿಅಂಶಗಳು ಮಾನ್ಯ ಸಚಿವರು ಕೊಟ್ಟ ಅಂಕಿಅಂಶಗಳಿಗೆ ಪೂರಕವಾಗಿಲ್ಲ ಎನ್ನುವುದು ನನ್ನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಭಿಪ್ರಾಯವಾಗಿದೆ. ಈ ಅಂಕಿ-ಅಂಶಗಳು ಸರಿಯಿಲ್ಲ, ಕೇಂದ್ರ ಸರ್ಕಾರದಿಂದ ಇಂತಿಷ್ಟು ಹಣ ಬರಬೇಕು ಎಂದು ಹೇಳುವುದಿದ್ದರೆ ಅದರ ಬಗ್ಗೆ ನಂತರ ಯೋಚನೆ ಮಾಡೋಣ.

**(ಗೊಂದಲ)**

**ಶ್ರೀ ಆರ್.ವಿ.ದೇಶಪಾಂಡೆ:-**ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ದಾರಿ ತಪ್ಪಿ ಹೋಗುತ್ತಿದ್ದಾರೆ. ನಾನು ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡಲಿಲ್ಲ. ಗೌರವಾನ್ವಿತ ಪ್ರಧಾನ ಮಂತ್ರಿಗಳು ಹುಬ್ಬಳ್ಳಿಗೆ ಬಂದಿದ್ದಾಗ, ಹಣ ಬಿಡುಗಡೆ ಮಾಡುವ ವಿಚಾರದ ಸಂಬಂಧ ಅವರ ಗಮನವನ್ನು ಸೆಳೆದೆ ಎನ್ನುವ ಮಾತನ್ನು ಹೇಳಿದೆ. ಮಾನ್ಯ ಸಭಾಪತಿಯವರೇ, ಮಹಾತ್ಮ ಗಾಂಧಿ ನರೇಗಾ ಕಾರ್ಯಕ್ರಮದಲ್ಲಿ ಶೇಕಡ 100ರಷ್ಟು ಕೂಲಿಯನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಇನ್ನು materials ನಲ್ಲಿ ಕೇಂದ್ರ ಸರ್ಕಾರದ ಪಾಲು ಶೇಕಡ 75 ರಷ್ಟು ಮತ್ತು ರಾಜ್ಯ ಸರ್ಕಾರದ ಪಾಲು ಶೇಕಡ 25ರಷ್ಟು ಕೊಡುತ್ತದೆ. 2015-16, 2016-17 ವರ್ಷಗಳ ಬಾಕಿ ಸುಮಾರು ರೂ.1900 ಕೋಟಿ ಬರಬೇಕಿದೆ. ಈ ವರ್ಷದ್ದು ಇನ್ನು ಸುಮಾರು ರೂ. 200 ಕೋಟಿ ಬರಬೇಕಿದೆ. ಒಂದು ತಿಂಗಳ ಹಿಂದೆ ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯ ಕೃಷ್ಣಭೈರೇಗೌಡರು ರಾಜ್ಯದ ಎಲ್ಲಾ ಪಕ್ಷಗಳ ಲೋಕಸಭಾ ಸದಸ್ಯರನ್ನು ಕರೆದುಕೊಂಡು ದೆಹಲಿಗೆ ಹೋಗಿ ಕೇಂದ್ರದ ಆರ್‌ಡಿಪಿಆರ್ ಮಂತ್ರಿಗಳಿಗೆ ಮನವಿ ಕೊಟ್ಟು ಬಂದಿದ್ದಾರೆ. ತಾವು ಈ ವಿಷಯವನ್ನು ದಿನಪತ್ರಿಕೆಗಳಲ್ಲಿ ಓದಿರಬಹುದು. 8 ದಿವಸದ ಹಿಂದೆ ಕೇಂದ್ರ ಸರ್ಕಾರ ಒಟ್ಟು ರೂ.2000 ಕೋಟಿಗಳ ಪೈಕಿ ರೂ. 117 ಕೋಟಿಗಳನ್ನು ಬಿಡುಗಡೆ ಮಾಡಿದೆ. ನಾನು ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುತ್ತಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬರದೇ ಇದ್ದರೆ ಅದರಿಂದ ಕೂಲಿಗಾರರಿಗೆ ತೊಂದರೆ ಆಗಬಾರದು ಎಂದು ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿ ಪೇಮೆಂಟ್ ನೀಡುವುದಕ್ಕೆ ಕ್ರಮ ಕೈಗೊಳ್ಳುತ್ತಿದೆ.

**ಶ್ರೀ ಕೋಟ ಶ್ರೀನಿವಾಸಪೂಜಾರಿ:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದ ಬಳಿಯೇ ರೂ.450 ರಿಂದ ರೂ.500 ಕೋಟಿ ಹಣ ಇದೆ. ಸರ್ಕಾರ ತಪ್ಪು ಸಂದೇಶ ಕೊಡುವ ಕೆಲಸ ಮಾಡಬಾರದು.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರದ ಅವಧಿಯಲ್ಲಿ ಈ ರೀತಿಯ ವಿವರಣೆಗಳನ್ನು ಕೇಳುವುದಕ್ಕೆ ಅವಕಾಶ ಇದೆಯೇ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ:ವೈ.ಎ.ನಾರಾಯಣಸ್ವಾಮಿ:-**ಮಾನ್ಯ ಸಭಾಪತಿಯವರೇ, ನಮಗೆ ಬೇಕಾದ ವಿವರಣೆಯನ್ನು ನಾವು ಕೇಳಲೇಬೇಕಾಗುತ್ತದೆ. ಅದರ ಬಗ್ಗೆ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಹೇಳಬಾರದು.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 440**
**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಶರಣಪ್ಪ ಮಟ್ಟೂರ (ಶ್ರೀ ಎನ್.ಎಸ್.ಭೋಸ್‌ರಾಜು ಪರವಾಗಿ):-** ಮಾನ್ಯ ಸಭಾಪತಿಯವರೇ, ಕೇಳಿರುವ ಪ್ರಶ್ನೆ ಶಾರ್ಟ್ ಆಗಿಯೇನೋ ಇದೆ. ಆದರೆ, ಕೊಟ್ಟಿರುವ ಉತ್ತರ ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಅವರು "Since the Labour Department has not conducted any survey regarding the number of workers in Raichur District, no information is available on number of workers in Raichur District" ಎಂದು ಹೇಳಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಇರುವ ಕಾರ್ಮಿಕರ ಸಂಖ್ಯೆ ಎಷ್ಟು ಎನ್ನುವುದರ ಬಗ್ಗೆ ಸಮೀಕ್ಷೆ ಮಾಡಿಲ್ಲದ ಕಾರಣ ಕಾರ್ಮಿಕರುಗಳ ಸಂಖ್ಯೆಯ ಮಾಹಿತಿ ಲಭ್ಯವಿಲ್ಲ ಎಂದು ಹೇಳಿದ್ದಾರೆ. ಆದರೆ, ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳು ಜಾರಿಗೊಳಿಸುತ್ತಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ ಅಡಿ ಬರುವ ಫಲಾನುಭವಿಗಳ ಸಂಖ್ಯೆ 26,070 ಎಂದು ಹೇಳಿದ್ದಾರೆ. ಸರ್ವೇ ಮಾಡುವುದಕ್ಕೆ ಏನು ತೊಂದರೆಯಾಗಿದೆ? ಏಕೆ ಸರ್ವೇ ಮಾಡಲಿಲ್ಲ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ವೆಂಕಟರಮಣಪ್ಪ:-**ಮಾನ್ಯ ಸಭಾಪತಿಯವರೇ, ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಆಗಿರುವ ಕಾರ್ಮಿಕರ ಸಂಖ್ಯೆ 26,070. ಇಡೀ ರಾಯಚೂರು ಜಿಲ್ಲೆಯಲ್ಲಿ ಎಷ್ಟು ಜನ ಕಾರ್ಮಿಕರಿದ್ದಾರೆ ಎನ್ನುವುದನ್ನು ನಾವು ಸರ್ವೇ ಮಾಡಿಲ್ಲ. ನೋಂದಣಿ ಆಗಿರುವವರ ಸಂಖ್ಯೆಯನ್ನು ಮಾತ್ರ ಕೊಟ್ಟಿದ್ದೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಹೆಚ್.ಎಂ.ರಮೇಶ್‌ಗೌಡರವರ ಪ್ರಶ್ನೆ ಸಂಖ್ಯೆ: 461 ವರ್ಗಾವಣೆಯಾಗಿದೆ. ಇದನ್ನು ನಾಳೆ ತೆಗೆದುಕೊಳ್ಳಲಾಗುತ್ತದೆ.

**5. ನೂತನ ಸಚಿವರ ಪರಿಚಯ**

**ಡಾ: ಜಯಮಾಲ(ಸಭಾನಾಯಕರು):-**ಮಾನ್ಯ ಸಭಾಪತಿಯವರೇ, ಹೊಸದಾಗಿ ಬಂದಿರುವ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರಾದ ಮಾನ್ಯ ರಹೀಂ ಖಾನ್‌ರವರನ್ನು ಮತ್ತು ಸಕ್ಕರೆ ಸಚಿವರಾದ ಮಾನ್ಯ ಆರ್.ಬಿ.ತಿಮ್ಮಾಪುರ ಅವರನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, 3-4 ದಿನಗಳಿಂದ ನಮ್ಮ ನೂತನ ಸಚಿವರು ಸದನಕ್ಕೆ ಬರುತ್ತಿದ್ದಾರೆ, ಆದರೆ ನಿನ್ನೆ ಮೊನ್ನೆ ಸದನದಲ್ಲಿ ಗಲಾಟೆ ಇದ್ದುದರಿಂದ ಅವರ ಪರಿಚಯ ಮಾಡಿಕೊಡುವುದಕ್ಕೆ ಆಗಿರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆ ಭಾಗದಿಂದ ಗಲಾಟೆಗಳಾಗುತ್ತಿತ್ತೇ ಹೊರತು ನಮ್ಮ ಭಾಗದಿಂದಲ್ಲ.

**ಶ್ರೀ ಭೋಜೇಗೌಡ:-**ಮಾನ್ಯ ಸಭಾಪತಿಯವರೇ, ಅವರು ಹೇಳಿದ್ದನ್ನು ನಾನು ಜಟಿಜಂಥಿಜ ಮಾಡುತ್ತೇನೆ. ಆ ಗಲಾಟೆ ಕೇವಲ ಒಂದು ಪಕ್ಷದಿಂದ ಮಾತ್ರವಾಗಿಲ್ಲ. ಎಲ್ಲಾ ಪಕ್ಷಗಳ ಸದಸ್ಯರೂ ಬಾವಿಯೊಳಗೆ ಇಳಿದು ಧರಣಿ ಮಾಡಿದ್ದೆವು.

**6. ಮುಂದುವರೆದ ಪ್ರಶ್ನೋತ್ತರಗಳು**

**ಪ್ರಶ್ನೆ ಸಂಖ್ಯೆ : 238**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-**ಮಾನ್ಯ ಸಭಾಪತಿಯವರೇ, ನಾನು ಕಳೆದ ವರ್ಷವೂ ಈ ಪ್ರಶ್ನೆಯನ್ನು ಕೇಳಿದ್ದೆ. 2009ರಲ್ಲಿ ಮಂಡ್ಯ ನಗರದಲ್ಲಿ ಒಂದು ಒಳಾಂಗಣ ಕ್ರೀಡಾಂಗಣದ ಶಂಕುಸ್ಥಾಪನೆ ಮಾಡಲಾಯಿತು. 2019ನೇ ಇಸವಿ ಬಂದರೂ ಅದು ಇನ್ನೂ ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭ ಮಾಡಲಿಲ್ಲ. ತಾವು ಕಳೆದ ವರ್ಷದ ಮಾರ್ಚ್ ತಿಂಗಳಲ್ಲಿ ಆ ಕ್ರೀಡಾಂಗಣದ ಉದ್ಘಾಟನೆ ಕೂಡ ಮಾಡಿದಿರಿ. ಈಗ ಉತ್ತರದಲ್ಲಿ, ಮರದ ನೆಲಹಾಸು ಕಾಮಗಾರಿ ಕೆಲಸ ನಡೆಯುತ್ತಿದ್ದು, ಅದು ಮುಗಿಯುವ ಹಂತದಲ್ಲಿದೆ ಮತ್ತು ಶೀಘ್ರದಲ್ಲಿಯೇ ಇಲಾಖೆಗೆ ಹಸ್ತಾಂತರಿಸಿಕೊಂಡು ಸಾರ್ವಜನಿಕರ ಬಳಕೆಗೆ ಒಳಾಂಗಣ ಕ್ರೀಡಾಂಗಣವನ್ನು ಮುಕ್ತಗೊಳಿಸಲಾಗುವುದು ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದೀರಿ. ರೂ.222.76 ಲಕ್ಷಗಳ ಬದಲಾಗಿ ರೂ. 319.90 ಲಕ್ಷಗಳನ್ನು ಖರ್ಚು ಮಾಡಿದ್ದೀರಿ. ಈ ಒಳಾಂಗಣ ಕ್ರೀಡಾಂಗಣ ಯಾವಾಗ ಸಿದ್ಧವಾಗುತ್ತದೆ, ಯಾವಾಗ ಅದನ್ನು ಪೂರ್ಣವಾಗಿ ಬಳಸಿಕೊಳ್ಳಬಹುದು ಎಂದು ನಾವು ಚಾತಕ ಪಕ್ಷಿಯಂತೆ ಕಾಯುತ್ತಿದ್ದೇವೆ. ನಾನು ಸಂಬಂಧಪಟ್ಟ ಅಲ್ಲಿನ ಅಧಿಕಾರಿಗಳಿಗೆ ಕೇಳಿದರೆ ಅವರು, ಇನ್ನೂ gym equipment ಗಳು ಬಂದಿಲ್ಲ ಎಂದು ಹೇಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(48)13-02-2019 12.10 ಡಿಎಸ್-ಎಕೆ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು)-**

ಯಾವುದೇ ಕ್ರೀಡಾ ಸಲಕರಣೆಗಳು ಅಲ್ಲಿ ಬಂದಿಲ್ಲ. ನಿರ್ಮಿತಿ ಕೇಂದ್ರದವರು ಇಲಾಖೆಗೆ ಹಸ್ತಾಂತರ ಮಾಡಿದರೆ ಆ ಕ್ರೀಡಾಂಗಣದ ಪ್ರಯೋಜನವನ್ನು ಪಡೆದುಕೊಳ್ಳಬಹುದು. ನನ್ನ ಪ್ರಶ್ನೆ ಏನೆಂದರೆ, ಎಷ್ಟು ದಿವಸಗಳಲ್ಲಿ ಆ ಕ್ರೀಡಾಂಗಣವನ್ನು ನಿರ್ಮಿತಿ ಕೇಂದ್ರದಿಂದ ಇಲಾಖೆಗೆ ಹಸ್ತಾಂತರ ಮಾಡಿಸುತ್ತಾರೆ? ಎಷ್ಟು ದಿವಸಗಳಲ್ಲಿ ಆ ಎಲ್ಲಾ ಸಲಕರಣೆಗಳನ್ನು ಜಿಮ್‌ನಿಂದ ಹಿಡಿದು ಏನೆಲ್ಲಾ ಕ್ರೀಡಾ ಪರಿಕರಗಳಿವೆ ಅವುಗಳನ್ನು ಯಾವಾಗ ಪೂರೈಸುತ್ತಾರೆ? ಒಟ್ಟಾರೆ ಆ ಒಳ ಕ್ರೀಡಾಂಗಣವನ್ನು ನಾವು ಬಳಕೆ ಮಾಡುವುದಕ್ಕೆ ಯಾವಾಗ ಸಿದ್ಧ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ನಿಜವಾಗಿಯೂ ಸುಮಾರು ದಿವಸಗಳಿಂದ ತಡವಾಗಿದೆ. ಅದಕ್ಕೆ ಬಹಳಷ್ಟು ಕಾರಣಗಳಿವೆ. ನಿರ್ಮಿತಿ ಕೇಂದ್ರದವರು ಇನ್ನು 15-20 ದಿವಸಗಳಲ್ಲಿ ಇಲಾಖೆಗೆ ಹಸ್ತಾಂತರ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಇಲಾಖೆಗೆ ಹಸ್ತಾಂತರ ಮಾಡಿದ ತಕ್ಷಣ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು ಎಂದು ಉತ್ತರದಲ್ಲಿ ತಿಳಿಸಿದ್ದೇವೆ. ಆದರೂ ನಾನು ಮತ್ತೊಂದು ಸಲ ಪರಿಶೀಲನೆ ಮಾಡಿ ತಕ್ಷಣ ಮಾಡಿಸಿ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ:522**
**(ಉತ್ತರ ಲಗತ್ತಿಸಲಾಗಿದೆ)**

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ನನಗೆ ತಡವಾಗಿ ಉತ್ತರ ಕೊಟ್ಟಿರುವುದರಿಂದ ನಾನು ಪ್ರತಿಭಟಿಸುತ್ತೇನೆ. ಇದು ದಾಖಲೆಗೆ ಹೋಗಬೇಕು. ನನಗೆ ಎರಡು ನಿಮಿಷಗಳ ಹಿಂದೆ ಈ ಉತ್ತರ ಸಿಕ್ಕಿದೆ. ಕರ್ನಾಟಕದಲ್ಲಿ 'ಲಿಂಗಾನುಪಾತ' ಸಮಾನವಾಗಿರುವಂತೆ ಗಮನಹರಿಸಲು ಕಾಲ ಕಾಲಕ್ಕೆ ಸರ್ಕಾರವು ಗಣತಿ ನಡೆಸಿದೆಯೇ, ರಾಜ್ಯದಲ್ಲಿ 1000 ಗಂಡು ಸಂತತಿಗೆ ಎದುರಾಗಿ ಹೆಣ್ಣು ಸಂತತಿ ಗಣನೀಯವಾಗಿ ಕುಸಿದಿರುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದೇನೆ. 'ಲಿಂಗಾನುಪಾತ ಏರುಪೇರಾಗಲು ಕಾನೂನು ಬಾಹಿರವಾಗಿ ಹೆಣ್ಣು ಭ್ರೂಣ ಪತ್ತೆ ಮಾಡಿ, ಭ್ರೂಣ ಹತ್ಯೆ ನಡೆಯುತ್ತಿರುವ ಬಗ್ಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತಿದೆ, ಹೆಣ್ಣಿನ ರಕ್ಷಣೆಗೆ ಬದುಕುವ ಹಕ್ಕು ಉಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ' ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಸಚಿವರು ಜನಗಣತಿ ನಡೆಸಿರುವ ಬಗ್ಗೆ ಉತ್ತರದಲ್ಲಿ ಹೇಳಿದ್ದಾರೆ. 2001 ರಿಂದ 2011 ರವರೆಗೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ 1000 ಗಂಡು ಮಕ್ಕಳಿಗೆ 946 ಇದ್ದು, 2011ರ ಜನಗಣತಿಯಲ್ಲಿ 948ಕ್ಕೆ ಏರಿಕೆಯಾಗಿದೆ. ಅಂದರೆ, ಹತ್ತು ವರ್ಷಗಳ ಕಾಲ ಒಂದೇ ಸಮನಾದ ಜನನ ಪ್ರಮಾಣ ಇದೆ. ಇದಕ್ಕೆ ಏನು ಕಾರಣ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಒಂದು ದಶಕವೆಂದರೆ ಅದು ಬಹಳ ದೊಡ್ಡ ಕಾಲ. ಅದನ್ನು ಹೆಚ್ಚು ಮಾಡುವುದಕ್ಕೆ ಏನಾದರೂ ಕ್ರಮ ವಹಿಸುವುದಕ್ಕೆ ಸಾಧ್ಯವಾಗಿದೆಯೇ ಎಂಬುದೇನೂ ಕಂಡುಬರಲಿಲ್ಲ. ಅಕ್ರಮವಾಗಿ ಹೆಣ್ಣು ಭ್ರೂಣ ಹತ್ಯೆಯನ್ನು ಪತ್ತೆ ಹಚ್ಚುವ ಪ್ರಸಂಗದಲ್ಲಿ ಒಂದಿಷ್ಟು ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಸದನದ ಸಮಯವನ್ನು ಉಳಿಸುವುದಕ್ಕಾಗಿ ನಾನು ಸಂಕ್ಷಿಪ್ತವಾಗಿ ಹೇಳುತ್ತಿದ್ದೇನೆ. 2002 ರಿಂದ ಇಲ್ಲಿಯವರೆಗೆ ಅಂದರೆ 18 ವರ್ಷಗಳಲ್ಲಿ 80 ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿವೆ. ಅದರಲ್ಲಿ 39 ಪ್ರಕರಣಗಳು ಇನ್ನು ಜೀವಂತವಾಗಿವೆ. 41 ಪ್ರಕರಣಗಳಲ್ಲಿ ಆರೋಪಿ ವೈದ್ಯರುಗಳಿಗೆ ನ್ಯಾಯಾಲಯದಲ್ಲಿ ದಂಡ ವಿಧಿಸಲಾಗಿದೆ. ಯಾವುದೇ ಪ್ರಕರಣಗಲಲ್ಲಿ ಜೈಲು ಶಿಕ್ಷೆಯಾಗಿರುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. 18 ವರ್ಷಗಳಲ್ಲಿ 80 ಪ್ರಕರಣಗಳು ದಾಖಲಾಗಿವೆ ಎಂದರೆ ಈ ಸಮಸ್ಯೆ ಇದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. 39 ಪ್ರಕರಣಗಳು ಮಾತ್ರ ಚಾಲ್ತಿಯಲ್ಲಿವೆ. ಶಿಕ್ಷೆಯ ಪ್ರಮಾಣ ತೀರಾ ಕಡಿಮೆ ಇದೆ. ಕಾಯ್ದೆಯ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ವಿಭಾಗಾಧಿಕಾರಿಗಳಿಗೆ ಹೇಳಿದ್ದಾರೆ. ಗಡಿನಾಡಿನಲ್ಲಿ ವಿದ್ಯಾಭ್ಯಾಸದ ಕೊರತೆ ಜೊತೆಗೆ ಬಡತನ ಸಮಸ್ಯೆ ಕೂಡ ಜಾಸ್ತಿ ಇರುತ್ತದೆ. ವಿಶೇಷವಾಗಿ ಬಾಗಲಕೋಟೆ, ಹಾವೇರಿ, ಗದಗ, ದಕ್ಷಿಣ ಕನ್ನಡ ಜಿಲ್ಲೆ, ವಿಜಯಪುರ, ನಮ್ಮ ಮಂಡ್ಯ ಜಿಲ್ಲೆಯೂ ಕೂಡ ಅದಕ್ಕೆ ಸೇರಿದೆ. ಅಂತಹ ಜಿಲ್ಲೆಗಳಲ್ಲಿ ಸರ್ಕಾರ ಗಮನ ಕೊಡಬೇಕಾಗಿದೆ. ಕೇವಲ ಸುತ್ತೋಲೆಗಳನ್ನು ಕಳುಹಿಸಿರುವುದು ಬಿಟ್ಟರೆ ಕಾರ್ಯಾನುಷ್ಠಾನ ಏನು ಆಗಿಲ್ಲ. ಬಹಳ ಆತಂಕಕಾರಿ ವಿಚಾರವೇನೆಂದರೆ, **'ಭಾಗ್ಯಲಕ್ಷ್ಮಿ'** ಯೋಜನೆಯನ್ನು ಸರ್ಕಾರ ಉಲ್ಲೇಖಿ ಮಾಡಿದೆ. ಹೆಣ್ಣು ಮಗುವಿನ ಸ್ಥಾನವನ್ನು ಮೊದಲು ಕುಟುಂಬದಲ್ಲಿ ನಂತರ ಸಮಾಜದಲ್ಲಿ ಹೆಚ್ಚಿಸಲು ಮತ್ತು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನ ಉತ್ತೇಜಿಸಲು 2006–07ನೇ ಸಾಲಿನಿಂದ ಹೆಣ್ಣು ಮಕ್ಕಳ ರಕ್ಷಣೆಗೆ, ಲಿಂಗಾನುಪಾತ ಉತ್ತಮಪಡಿಸಲು ಹಾಗೂ ಆರ್ಥಿಕ ಸಬಲೀಕರಣಕ್ಕಾಗಿ **'ಭಾಗ್ಯಲಕ್ಷ್ಮಿ'** ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ತುಂಬಾ ನೋವಿನ ವಿಚಾರವೆಂದರೆ, ಸರ್ಕಾರ ಒದಗಿಸಿರುವ ಮಾಹಿತಿಯಲ್ಲಿ 2006 ರಿಂದ 2018 ರವರೆಗೆ 12 ವರ್ಷಗಳಲ್ಲಿ ಒಟ್ಟು 25,20,348 ಫಲಾನುಭವಿಗಳಿಗೆ ಮಾತ್ರ ಈ ಯೋಜನೆ ತಲುಪಿದೆ. ಕರ್ನಾಟದಲ್ಲಿ ಬಡತನ ರೇಖೆಗಿಂತ ಕೆಳಗಿರುವಂತಹ ಕುಟುಂಬಗಳು ಎಷ್ಟು, ಗಡಿನಾಡಿನ ಭಾಗದಲ್ಲಿರುವಂತಹ ಬಡವರು ಎಷ್ಟು, ಈ ಯೋಜನೆ ಒಳ್ಳೆಯ ರೀತಿಯಲ್ಲಿ ಏಕೆ ಮುಟ್ಟಲಿಲ್ಲ? ಒಟ್ಟಾರೆಯಾಗಿ ಈ ಯೋಜನೆಯಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿರುವುದು ಕಂಡು ಬರುತ್ತದೆ. ಕೇಂದ್ರ ಸರ್ಕಾರ 'ಬೇಟಿ ಬಚಾವೊ ಬೇಟಿ ಪಡಾವೊ' ಎನ್ನುವ ಯೋಜನೆಯನ್ನು ತಂದಿದೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಲಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಈಗ ಉತ್ತರವನ್ನು ಕೊಟ್ಟಿದ್ದಾರೆ. ಹಾಗೆ ನೋಡಿದರೆ ನಾನು ಬಾವಿಗೆ ಬಂದು ಧರಣಿ ಮಾಡಬೇಕು. ನನ್ನ ಹಕ್ಕನ್ನು ಮೊಟಕುಗೊಳಿಸಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:-** ಹಾಗಾದರೆ ಪ್ರಶ್ನೋತ್ತರವನ್ನು ನಾಲ್ಕು ಗಂಟೆಗಳ ಕಾಲ ನಡೆಸಬೇಕಾಗುತ್ತದೆ.

**ಡಾ:ತೇಜಸ್ವಿನಿಗೌಡ:-** ಚುಕ್ಕೆ ಗುರುತಿನ ಪ್ರಶ್ನೆಗೆ ಈಗ ಸದನದಲ್ಲಿ ಸರ್ಕಾರ ಉತ್ತರವನ್ನು ಕೊಟ್ಟಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಪ್ರಶ್ನೋತ್ತರ ವೇಳೆಯಲ್ಲಿ ಓದುತ್ತಾರೆಯೇ? ಪ್ರಶ್ನೆಯನ್ನು ಕೇಳಬೇಕು.

**ಡಾ:ತೇಜಸ್ವಿನಿಗೌಡ:-** ಹೆಣ್ಣು ಮಕ್ಕಳ ವಿಚಾರ ಬಂದಾಗ ಎಷ್ಟು ಸೂಕ್ಷ್ಮವಾಗಿರುತ್ತದೆ ಎಂಬುದು ಗೊತ್ತಿದೆ.

**ಶ್ರೀ ಹೆಚ್.ಎಂ.ರೇವಣ್ಣ:-** ಅದು ನಮಗೂ ಗೊತ್ತಿದೆ.

**ಡಾ:ತೇಜಸ್ವಿನಿಗೌಡ:-** ಮಾನ್ಯ ರೇವಣ್ಣನವರೇ, ನಾನು ಪಕ್ಷಪಾತ ಮಾಡುತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:-** ನಾವೂ ಸಂಸಾರಸ್ಥರು, ನಮಗೂ ಹೆಣ್ಣು ಮಕ್ಕಳ ಬಗ್ಗೆ ಗಮನ ಇದೆ. ನಾವೇನು ಗುಂಡರಗೋವಿಗಳಲ್ಲ.

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಇದು derogatory statement. ಸಂಸಾರಸ್ಥರು, ಗುಂಡರಗೋವಿಗಳಲ್ಲ ಎಂದರೆ ಏನು? ಹೆಣ್ಣು ಮಕ್ಕಳು ಸದನದಲ್ಲಿದ್ದಾಗ ಏನು ಬೇಕಾದರೂ ಭಾಷೆ ಪ್ರಯೋಗ ಮಾಡಬಹುದೇ? ಎಲ್ಲರೂ ಸಂಸಾರಸ್ಥರೇ, ಸಂಸಾರ ಇದ್ದರೆ ಗಂಡು ಮಕ್ಕಳು, ಹೆಣ್ಣು ಮಕ್ಕಳು ಹುಟ್ಟುವಂಥದ್ದು. ನನಗೂ ಮಾತನಾಡುವುದಕ್ಕೆ ಬರುತ್ತದೆ. ದಯಮಾಡಿ ಆ ರೀತಿ ಪ್ರಚೋದನೆ ಮಾಡಬಾರದು, ನನಗೆ ಪೀಠ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಸಂಗತಿಗಳಲ್ಲಿ ಆಡಳಿತ ಪಕ್ಷದ ಮಂತ್ರಿಗಳು ಉತ್ತರಿಸಬೇಕೇ ಹೊರತು ಮಂತ್ರಿಗಳ ಪರವಾಗಿ ಎಲ್ಲಾ ಶಾಸಕರು ಉತ್ತರಿಸಬಾರದು. ಹಾಗಿದ್ದರೆ ಮಂತ್ರಿಗಳು ಅಸಮರ್ಥರು ಎಂದು ಪದೇಪದೇ ಹೇಳಿದ ಹಾಗೆ ಆಗುತ್ತದೆ. ದಯಮಾಡಿ ತಾವು ನಮ್ಮ ಶಾಸಕ ಮಿತ್ರರಿಗೆ ಇದನ್ನು ಹೇಳಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ:ಜಯಮಾಲ:-** ಮಾನ್ಯ ಸಭಾಪತಿಯವರೇ, ಅವರು ಬಳಸುವಂತಹ ಪದಗಳನ್ನು ಆಲೋಚನೆ ಮಾಡಿ ಬಳಸಬೇಕು. ಇಲ್ಲಿ ಎಲ್ಲರೂ ಕೂಡ crosstalk ಗಳನ್ನು ಮಾಡುವುದು ಈ ಸದನದಲ್ಲಿ ಹೊಸದೇನು ಅಲ್ಲ. ಆದರೆ ಸಮರ್ಥತೆ ಎನ್ನುವುದು ಉತ್ತರ ಕೊಡುವಾಗ ಗೊತ್ತಾಗುವಂಥದ್ದು. ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಲಿ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಹಾಕಿದ್ದಾರೆ. ಆ ಪ್ರಶ್ನೆ ಅತ್ಯಂತ ಸೂಕ್ತವಾಗಿದೆ. ದಯವಿಟ್ಟು ಅವರು ಪ್ರಶ್ನೆಯನ್ನು ಕೇಳಲಿ.

**ಡಾ:ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ 'ಬೇಟಿ ಬಚಾವೊ ಬೇಟಿ ಪಡಾವೊ' ಯೋಜನೆಗೆ ಕೇಂದ್ರದಿಂದ 2.5 ಕೋಟಿ ರೂಪಾಯಿಗಳು ಬಂದಿದೆ. 2.5 ಕೋಟಿ ರೂಪಾಯಿಗಳಲ್ಲಿ 1 ಕೋಟಿ 22 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಈ ಐದು ಜಿಲ್ಲೆಗಳಿಗೆ ಕೇವಲ 35.48 ಲಕ್ಷ ರೂಪಾಯಿಗಳನ್ನು ಮಾತ್ರ ನಮ್ಮ ಸರ್ಕಾರ ಬಳಸಿಕೊಂಡಿದೆ. ನಿನ್ನೆ ಈ ಬಗ್ಗೆ ವಾಗ್ವಾದ ನಡೆದಿದೆ. ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಎಷ್ಟರ ಮಟ್ಟಿಗೆ ನಾವು ಯೋಜನೆಗಳನ್ನು ಸದ್ಬಳಕೆ ಮಾಡಿಕೊಳುತ್ತಿದ್ದೇವೆ ಎಂಬುದು ಗೊತ್ತಾಗುತ್ತಿದೆ. ಆ ಕಾರಣಕ್ಕಾಗಿ ಹೆಣ್ಣು ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಸರ್ಕಾರ ಕ್ರಿಯಾಶೀಲವಾಗಿ ಏನು ಮಾಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಡಾ:ಜಯಮಾಲ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಲಿಂಗಾನುಪಾತದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದರಲ್ಲೂ ಕೂಡ ಇತ್ತೀಚೆಗೆ NDTV ಯಲ್ಲಿ ವರದಿ ಬಂದಿದೆ. ಹಲವಾರು ಪತ್ರಿಕೆಗಳಲ್ಲೂ ಕೂಡ ಈ ವರದಿ ಬಂದಿರುವುದನ್ನು ನಾವು ಕಂಡಿದ್ದೇವೆ. ಇದರ ಬಗ್ಗೆ ಅತ್ಯಂತ ಕಾಳಜಿಯಿಂದ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಇದರ ಸಂಬಂಧವಾಗಿ ಒಂದೆರಡು ಮಾಹಿತಿಯನ್ನು ಹೇಳಬೇಕಾಗುತ್ತದೆ. ನಮ್ಮಲ್ಲಿ ಲಿಂಗಾನುಪಾತವನ್ನು ಕಂಡುಹಿಡಿಯುವುದಕ್ಕಾಗಿ ಮೂರು ವಿಧವಾದಂತಹ indicators ಅನ್ನು ನಾವು ಬಳಸುತ್ತಿದ್ದೇವೆ. ಅಂದರೆ total population ನಲ್ಲಿ sex ratio ಎಷ್ಟಿದೆ ಎನ್ನುವುದನ್ನು ಕಂಡುಹಿಡಿಯುವಂಥದ್ದಾಗಿರಬಹುದು, Child Sex Ratio in the age group of 0-6 years, ಇದು ಗಂಡಿನ ಪ್ರಮಾಣಕ್ಕೆ ಹೆಣ್ಣು ಎಷ್ಟಿದ್ದಾರೆ ಎಂದು ನೋಡುವಂಥದ್ದು. ಇವೆರಡನ್ನು ಕೂಡ ಕೇಂದ್ರದಿಂದ Census of India ಪ್ರತಿ ಹತ್ತು ವರ್ಷಕ್ಕೊಮ್ಮೆ ಮಾಡುವಂಥದ್ದು. Census ನಿಂದ ಇವೆರಡು ಅಂಶಗಳು ಹೊರ ಬರುತ್ತದೆ.

**(049)13-02-2019/12-20/ಬಿಕೆಪಿ-ಆರ್‌ಎನ್**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಯಮಾಲ(ಮುಂದು)**

ಮೂರನೆಯದಾಗಿ SRB ಅಂದರೆ Sex Ratio at Birth ಎಂದು ಹೇಳುವಂತಹದ್ದು. ನಮ್ಮ ರಾಜ್ಯದಲ್ಲಿ birth registration ಎಲ್ಲಿದೆಯೋ ಅದರ ಮೂಲಕ ಇದನ್ನು ನಾವು ಪತ್ತೆ ಹಚ್ಚುತ್ತಿದ್ದೇವೆ. ನಮ್ಮಲ್ಲಿಯೂ ಕೂಡ 2001 ಮತ್ತು 2011 ರ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ನೀಡಿದ್ದೇವೆ. ಆದರೆ, ನಮ್ಮಲ್ಲಿ ಆರೋಗ್ಯ ಇಲಾಖೆ ಮತ್ತು ಯೋಜನಾ ಇಲಾಖೆಯ ವತಿಯಿಂದ ಪ್ರತಿವರ್ಷವೂ ಸಹ ತನಿಖೆಯ ಮೂಲಕ ಅದನ್ನು ನೋಡುವಂತಹ ಕೆಲಸವನ್ನು ಮಾಡಲಾಗುತ್ತದೆ. ಈ ಮಾಹಿತಿಯನ್ನು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಮಾಡುತ್ತಿಲ್ಲ, ಭಾರತದಲ್ಲಿರುವ ಎಲ್ಲಾ ಜಿಲ್ಲೆಗಳ ವಿವರಗಳನ್ನು 2007 ರಿಂದ 2016 ರವರೆಗಿನ ಮಾಹಿತಿಯನ್ನು ಅವರು ಬಿಟ್ಟಿದ್ದಾರೆ. 2006 ರಿಂದ 2016 ರವರೆಗೆ ಮಾನ್ಯ ಸದಸ್ಯರು ಹೇಳಿರುವಂತಹದ್ದು ಸರಿಯಾಗಿದೆ. ನಾವು ಇವತ್ತು ಲಿಂಗಾನುಪಾತದ ಪ್ರಮಾಣವನ್ನು ನೋಡಿದಾಗ 2016 ರಲ್ಲಿ 896 ಇದೆ. ಆದರೆ, ನಂತರದ ದಿನಗಳದ್ದು ಮಾಹಿತಿ ಇನ್ನೂ ಬಿಡುಗಡೆಯಾಗಿಲ್ಲ. ಇವತ್ತು ಪತ್ರಿಕೆಗಳು ಇರಬಹುದು, ಎನ್‌ಡಿಟಿವಿಯವರು ಇರಬಹುದು. ಅವರು ಸರ್ವೆ ಮಾಡಿ ಚರ್ಚೆ ಮಾಡಿರುವಂತಹದ್ದಲ್ಲ. ಈ ಒಂದು ಮಾಹಿತಿ ಆಧಾರದ ಮೇಲೆ ಅವರು ಚರ್ಚೆ ಮಾಡಿರುವಂತಹದ್ದಾಗಿದೆ. ನಂತರದಲ್ಲಿ ನೋಡಿದಾಗ 896 ಇದ್ದಂತಹ ಅಂಕಿ-ಅಂಶಗಳು 2017ಕ್ಕೆ 927ಕ್ಕೆ ಹೋಗಿದೆ. 2018-19 ರ ಮಾಹಿತಿಯೂ ಸಹ ಇದೆ. ಈ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದೆ.

ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಮಾನ್ಯ ಸದಸ್ಯರಿಗೆ ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ನನ್ನ ಹತ್ತಿರವೂ ಸಹ ಒಂದು ಪಟ್ಟಿ ಇದೆ. 2016 ರ ಮಾಹಿತಿಯ ಪ್ರಕಾರ ಈ ವಿಚಾರವಾಗಿ ನಾವು ದಕ್ಷಿಣ ಭಾರತವನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಆಂಧ್ರಪ್ರದೇಶದಲ್ಲಿ 806 ಇದೆ, ತಮಿಳುನಾಡು ರಾಜ್ಯದಲ್ಲಿ 840 ಇದೆ, ತೆಲಂಗಾಣ ರಾಜ್ಯದಲ್ಲಿ 881 ಇದೆ, ಕರ್ನಾಟಕ ರಾಜ್ಯದಲ್ಲಿ 896 ಇದೆ. ಈ ಅಂಕಿ-ಅಂಶಗಳು 2016 ರಲ್ಲಿ ಬಿಡುಗಡೆಯಾಗಿರುವಂತಹದ್ದಾಗಿದೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಹಾಗೆ ಮಾಹಿತಿಯನ್ನು ಯೋಜನಾ ಇಲಾಖೆಯಿಂದ ತೆಗೆದುಕೊಂಡಾಗ ಅನೇಕ precautionary measures ಅನ್ನು ಸರ್ಕಾರದ ವತಿಯಿಂದ ತೆಗೆದುಕೊಳ್ಳಲಾಗಿದೆ. ಇವುಗಳಲ್ಲಿ ಒಂದು ಅಂಶವನ್ನು ನೋಡಿದಾಗ ಇವತ್ತು ಆರೋಗ್ಯ ಇಲಾಖೆಯಲ್ಲಿ ಇರತಕ್ಕಂತಹ Pre-Conception and Pre-Natal Diagnostic Techniques (Prohibition Of Sex Selection) PCPNDT Act ಪ್ರಕಾರ ಇವತ್ತು ನಮ್ಮ ರಾಜ್ಯದಲ್ಲಿ ಒಟ್ಟು 4711 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೆಂಟರ್‌ಗಳಿವೆ. ಅದರಲ್ಲಿ ಸರ್ಕಾರದ್ದು 239 ಸ್ಕ್ಯಾನಿಂಗ್ ಸೆಂಟರ್‌ಗಳಿವೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿಯವರದ್ದು ಸುಮಾರು 4772 ಸ್ಕ್ಯಾನಿಂಗ್ ಸೆಂಟರ್‌ಗಳಿವೆ. ಈ ವಿಚಾರವಾಗಿ ಸದನದಲ್ಲಿ ಅಂದರೆ ಅದು ಕೆಳಮನೆ ಇರಬಹುದು, ಮೇಲ್ಮನೆ ಇರಬಹುದು, ಈ ಎರಡು ಸದನಗಳಲ್ಲಿಯೂ ಸಹ ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರುಗಳು ಇದರ ಬಗ್ಗೆ ಅನೇಕ ಚರ್ಚೆಗಳನ್ನು ಮಾಡಿದ್ದಾರೆ. ಅನೇಕ ಬಾರಿ ಎಚ್ಚರವನ್ನು ವಹಿಸಿದ್ದಾರೆ. ಈ ಭ್ರೂಣ ಹತ್ಯೆ ಬಗ್ಗೆ, ಬಾಲ್ಯ ವಿವಾಹದ ಬಗ್ಗೆ ಈ ರೀತಿಯಲ್ಲಿ ಪ್ರತಿಯೊಂದು ವಿಷಯಗಳ ಮೇಲೆಯೂ ಕೂಡ ನಮ್ಮಲ್ಲಿ ಬೆಳಕು ಚೆಲ್ಲುವಂತಹ ಕೆಲಸಗಳು ಆಗಿವೆ. ಡಿ.ಸಿ.ಗಳು, ಎನ್‌ಜಿಓ.ಗಳು, ಡಿಹೆಚ್‌ಓ.ಗಳು ಎರಡು ತಿಂಗಳಿಗೊಮ್ಮೆ ಇದರ ಬಗ್ಗೆ ಸಂಪೂರ್ಣ ಸಭೆ ಮಾಡುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ತನಿಖೆಯನ್ನೂ ಸಹ ಮಾಡುತ್ತಿದ್ದಾರೆ. Convict ಆಗಿರುವವರ ಪೈಕಿ ನಾನು ಸಹ ಇದ್ದೇನೆ. ಈ ವಿಚಾರ ನನಗೆ ಬಹಳ ಆತಂಕವುಂಟು ಮಾಡುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರು ಹೇಳಿರುವಂತಹ ವಿಚಾರ ನಮಗೆ ತಲುಪುವುದಿಲ್ಲವೆಂದು ಮಾನ್ಯ ಸದಸ್ಯರು ತಿಳಿದುಕೊಂಡಿರಬಹುದು. ಈ ವಿಚಾರವಾಗಿ ನಾನು ಸಹ ಪ್ರಶ್ನೆಯನ್ನು ಹಾಕಿದ್ದೇನೆ. ಇದರ ಬಗ್ಗೆ ಸಾಕಷ್ಟು ಯೋಜನೆಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಭಾಗ್ಯಲಕ್ಷ್ಮಿ ಯೋಜನೆ ಬಗ್ಗೆ ಹೇಳಿದ್ದಾರೆ. "ಭಾಗ್ಯಲಕ್ಷ್ಮಿ" ಯೋಜನೆ ವಿಚಾರದಲ್ಲಿ ಹೇಳುವುದಾದರೆ, ಆ ಅನುಪಾತದಲ್ಲಿ ಎಷ್ಟು ಜನ ಹೆಣ್ಣುಮಕ್ಕಳು ಹುಟ್ಟುತ್ತಾರೆ, ಈ ಯೋಜನೆ ಸೌಲಭ್ಯ ಆ ಮಕ್ಕಳಿಗೆ ತಲುಪುತ್ತಿದೆ. ಎಷ್ಟು ಮಕ್ಕಳು ಹುಟ್ಟಿದ್ದಾರೆ, ಆ ಮಕ್ಕಳಿಗೆಲ್ಲಾ ಈ ಸೌಲಭ್ಯ ಹೋಗುತ್ತಿದೆ ಎನ್ನುವ ವಿಚಾರದಲ್ಲಿ ಅಂಕಿ-ಅಂಶಗಳನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. "ಬೇಟಿ ಬಚಾವೋ ಬೇಟಿ ಪಡಾವೋ" ಈ ಯೋಜನೆ ಕೇವಲ 5 ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಇವುಗಳು ಇನ್ನು ಹೆಚ್ಚಾಗಬೇಕು. ಜೊತೆಗೆ ಹೆಣ್ಣುಮಕ್ಕಳ ನೀತಿಯನ್ನು ಸಹ ನಾವು ಜಾರಿಗೆ ತಂದಿದ್ದೇವೆ.

ಮಾನ್ಯ ಸಭಾಪತಿಯವರೇ, ವೈದ್ಯಕೀಯ ಕ್ಷೇತ್ರದಲ್ಲಿ ಈ ಹಿಂದೆಯೂ ಕೂಡ ಅಂದರೆ ನಮ್ಮ ತಾಂಡಗಳಲ್ಲಿ ಆಗುವಂತಹ ಗರ್ಭಪಾತಗಳ ವಿಷಯವಾಗಿ ನಾವು ಇಲ್ಲಿ ಚರ್ಚೆ ಮಾಡಿದ್ದೇವೆ. ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ಮುಚ್ಚಿ ಹಾಕುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆ. ತನಿಖೆಯನ್ನು ಮಾಡಿದ್ದೇವೆ. ಪೊಲೀಸ್‌ನವರು ಸಹ ಈ ನಿಟ್ಟಿನಲ್ಲಿ ಕ್ರಮವನ್ನು ವಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಒಂದು ಆಕ್ಟ್ ಸಹ ಮಾಡಲಾಗಿದೆ. ಒಂದು ವಿಷಯ ನಿಜ. ಈ ವಿಚಾರವಾಗಿ ವಿಸ್ತಾರವಾಗಿ ಇನ್ನೂ ಹೆಚ್ಚು ಬೆಳಕನ್ನು ಚೆಲ್ಲಬೇಕಾಗಿದೆ. ಈ ವಿಷಯವಾಗಿ ಸಾರ್ವಜನಿಕರು 104 ರ ಸಹಾಯವಾಣಿಗೆ ದೂರನ್ನು ನೀಡಿದವರಿಗೆ ರೂ. 50,000/- ಗಳನ್ನು ಘೋಷಿಸಿ ಪತ್ರಿಕಾ ಪ್ರಕಟಣೆ, ಸ್ಥಳೀಯ ಪತ್ರಿಕೆಯಲ್ಲೂ ಸಹ ಜಾಹೀರಾತು ನೀಡಲಾಗಿದ್ದು, ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಎಲ್ಲಾ precautionary measures ಗಳನ್ನು ತೆಗೆದುಕೊಂಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಳಗಿನಿಂದೊಳಗೆ ಅನೇಕ ಬಾರಿ ಸಮಾಜದ ಕಣ್ತೆರೆಸುವಲ್ಲಿ ಇನ್ನಷ್ಟು ಹೆಚ್ಚಿನ ಜಾಹೀರಾತುಗಳನ್ನು ಕೊಟ್ಟರೂ ಸಹ ಸಾಕಾಗುವುದಿಲ್ಲವೆಂದೆನಿಸುತ್ತದೆ. ಈ ವಿಚಾರವಾಗಿ ನಾನು ಮಾಧ್ಯಮದ ಮೂಲಕವೂ ಸಹ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ವಿಚಾರದಲ್ಲಿ ಪ್ರತಿಯೊಬ್ಬ ಮನುಷ್ಯನು ಸಹ ಅದು ಬಾಲ್ಯವಿವಾಹ ಇರಬಹುದು, ಶಿಕ್ಷಣ ಇರಬಹುದು ಅಥವಾ ನಮ್ಮ ಮಕ್ಕಳಲ್ಲಿ ಇರತಕ್ಕಂತಹ ಪೌಷ್ಟಿಕತೆ ಇರಬಹುದು, ಅಪೌಷ್ಟಿಕತೆ ಇರಬಹುದು ಅದರ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸುವಂತಹ ಕೆಲಸಗಳನ್ನು ಮಾಡಬೇಕೆಂದು ಈಗಾಗಲೇ ಹತ್ತು-ಹಲವಾರು ಸುತ್ತಿನ ಸಭೆಗಳನ್ನು ಮಾಡಿದ್ದೇವೆ. ಈ ಸಂಬಂಧವಾಗಿ ಇನ್ನೂ ಸಹ ಕೆಲಸಗಳನ್ನು ಮಾಡುತ್ತೇವೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹದ್ದನ್ನು ನಾನು ಉಲ್ಲೇಖ ಮಾಡಿದ್ದೇನೆ. ನಾನು ಅದನ್ನು ಹೇಳಲಿಲ್ಲ. ನಮ್ಮ ರಾಜ್ಯವನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ಅನುಪಾತ ಕಡಿಮೆ ಇರಬಹುದು. ನಮ್ಮ ರಾಜ್ಯದಲ್ಲಿರುವ ಆತಂಕದ ವಿಷಯವಾಗಿ ಮಾಧ್ಯಮಗಳಲ್ಲಿಯೂ ಸಹ ವರದಿ ಬಂದಿದೆ. 1000 ಗಂಡು ಮಕ್ಕಳ ಅನುಪಾತಕ್ಕೆ 1000 ಅಥವಾ ಅದಕ್ಕಿಂತ ಹೆಚ್ಚಾದರೆ ಅದು ನಮಗೆ ಆರೋಗ್ಯಕರವಾದ ಸೂಚನೆಯಾಗುತ್ತದೆ. 11 ವರ್ಷಗಳಲ್ಲಿ ಈ ಅನುಪಾತ ಸಮಾನವಾಗಿದೆ. 946 ಇದ್ದದ್ದು 948 ಆಗಿದೆ. ಇಷ್ಟೆಲ್ಲಾ ಕ್ರಮ ಕೈಗೊಂಡರೂ ಸಹ ಆ ಅನುಪಾತವನ್ನು 1000 ಅಥವಾ ಅದಕ್ಕಿಂತ ಜಾಸ್ತಿ ಮಾಡುವಲ್ಲಿ ಸಾಧ್ಯವಾಗಿರುವುದಿಲ್ಲ. ಈ ಸಂಬಂಧ ನನ್ನ ಹತ್ತಿರ ಮಾಹಿತಿ ಇದೆ.

**ಡಾ॥ ಜಯಮಾಲ:-** ನಾವು ಮಾಹಿತಿಯನ್ನು ಕೊಟ್ಟಿರುವುದು 2016 ರವರೆಗೆ ಮಾತ್ರ.

**ಡಾ॥ ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಾನು ಹೇಳುವುದನ್ನು ಗಮನಿಸಬೇಕು. 2016 ರವರೆಗೆ ಮಾತ್ರವಲ್ಲ, ತಾವು ಕೊಟ್ಟಿರುವ ಮಾಹಿತಿ ಪ್ರಕಾರ ತದನಂತರದ್ದು ಸಹ ಇದೆ. 11 ವರ್ಷಗಳಲ್ಲಿ ಇತ್ತೀಚಿನದ್ದು ಸಹ ಮಾನ್ಯ ಸಚಿವರು ಕೊಟ್ಟಿದ್ದಾರೆ. 946 ರಿಂದ 948 ಆಗಿದೆ. ಅಂದರೆ ಎರಡು ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂದರೆ ಮಾಹಿತಿ ತಂತ್ರಜ್ಞಾನದ ಸದುಪಯೋಗದ ಜೊತೆಗೆ ಇವತ್ತು ಮಕ್ಕಳು ಮದುವೆ ಮಾಡಿಕೊಳ್ಳುವುದು ತಡವಾಗುತ್ತಿದೆ. ಜೊತೆಗೆ ಬೇರೆ ರೀತಿಯ ಆಕರ್ಷಣೆ. ಕುಟುಂಬ ವ್ಯವಸ್ಥೆ ಕುಸಿಯುತ್ತಿದೆ. ವಿಚ್ಛೇದನಗಳು ಜಾಸ್ತಿಯಾಗುತ್ತಿವೆ. ಇಂತಹ ಸನ್ನಿವೇಶಗಳಲ್ಲಿ ಹೆಣ್ಣು ಮಗು ಸಮಾಜಕ್ಕೆ ಭಾರ ಎನ್ನುವ ನಿಟ್ಟಿನಲ್ಲಿ ಬಡತನ ಒಂದು ಕಾರಣವಾದರೆ ಮತ್ತೊಂದು ಕಡೆ ಹೆಣ್ಣು ಮಕ್ಕಳಿಗೆ ಸುರಕ್ಷತೆಯಿಲ್ಲದ್ದು ಇನ್ನೊಂದು ಕಾರಣ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಗಳಿಂದ ಹೆಣ್ಣು ಮಕ್ಕಳ ಹತ್ಯೆ ನಡೆಯುತ್ತಿದೆ ಎನ್ನುವ ಆತಂಕದಲ್ಲಿ ಇರುವಂತಹ ಕಾನೂನುಗಳನ್ನು ಸಮರ್ಥವಾಗಿ ನಾವು ಚಾಲು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಶಿಕ್ಷೆಯ ಪ್ರಮಾಣ ಕಡಿಮೆ ಇರುವುದರಿಂದ ಸರ್ಕಾರದ ವತಿಯಿಂದ ತಮ್ಮ ಅವಧಿಯಲ್ಲಿ ಈ ನಿಟ್ಟಿನಲ್ಲಿ ಏನು ಕ್ರಮ ವಹಿಸುತ್ತೀರಿ ಎಂದು ಮಾನ್ಯ ಸಚಿವರನ್ನು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ॥ ತೇಜಸ್ವಿನಿಗೌಡ ರವರು ಈ ವಿಚಾರದಲ್ಲಿ ಬಹಳ ಉಪಯುಕ್ತವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಬಹಳ ಗಂಭೀರವಾಗಿದೆ. ಮಾನ್ಯ ಸಚಿವರು ಸಹ ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇದು ಎರಡೆರಡು ಸಚಿವರ ಇಲಾಖೆಗೆ ಸಂಬಂಧಪಟ್ಟಂತಹ ಪ್ರಶ್ನೆಯಾಗಿದೆ. ಇದು ಆರೋಗ್ಯ ಸಚಿವರಿಗೂ ಸಹ ಸಂಬಂಧಪಟ್ಟ ಪ್ರಶ್ನೆಯಾಗಿದ್ದು, ಮಾನ್ಯ ಸದಸ್ಯರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರೊಬ್ಬರಿಗೆ ಮಾತ್ರ ಕೇಳಿದ್ದಾರೆ. ಮಾನ್ಯ ಸಚಿವರು ಸರ್ಕಾರದ್ದು 239 ಸ್ಕ್ಯಾನಿಂಗ್ ಸೆಂಟರ್‌ಗಳಿವೆ ಎಂದು ಹೇಳಿದ್ದಾರೆ. ಜೊತೆಗೆ ಅನೇಕ ಕಡೆ trained technicians ಇಲ್ಲದೇ ಅವುಗಳು ಕೆಲಸ ಮಾಡುತ್ತಿಲ್ಲ. ಆ ವಿಷಯದ ಬಗ್ಗೆ ಇಲ್ಲಿ ಮಾನ್ಯ ಸಚಿವರು ಬೆಳಕನ್ನು ಚೆಲ್ಲಿರುವುದಿಲ್ಲ. ಅದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ಇನ್ನೊಂದು ಕಡೆ 80 ಪ್ರಕರಣಗಳು ಮಾತ್ರ ಬಂದಿವೆ. ಅವುಗಳು ಮೇಲ್ನೋಟಕ್ಕೆ ಅಕ್ಷರಶ: ಸತ್ಯವೆಂದು ಕಾಣುವುದಿಲ್ಲವೆಂದು ಹೇಳುತ್ತಿದ್ದಾರೆ. ಅದರ ಪೈಕಿ 39 ಪ್ರಕರಣಗಳಿಗೆ ಸಂಬಂಧಪಟ್ಟಂತೆ ಆರೋಪಿಗಳನ್ನು ಗುರುತು ಮಾಡಿದ್ದಾರೆ. ಅವರುಗಳಿಗೆ ಶಿಕ್ಷೆಯಾಗಿದೆ, ದಂಡ ವಿಧಿಸಿ ಶಿಕ್ಷೆಯಾಗಿದೆ, ಜೈಲು ಶಿಕ್ಷೆಯಾಗಿದೆ. ಜೈಲು ಆಗಿಲ್ಲವೆಂದರೆ ಇದರಲ್ಲಿ ಭಾಗಿಯಾದ ಡಾಕ್ಟರ್‌ಗಳಿಗೆ ಪ್ರಾಕ್ಟೀಸ್‌ನಿಂದ bar ಮಾಡಬೇಕು. ಆ ಬಗ್ಗೆ ಎಲ್ಲಿಯೂ ವಿಶ್ಲೇಷಣೆ ಇರುವುದಿಲ್ಲ. ಈ 80 ಪ್ರಕರಣಗಳ ಪೈಕಿ ಯಾವ ಸ್ಕ್ಯಾನಿಂಗ್ ಸೆಂಟರ್‌ಗಳು ಭಾಗಿಯಾಗಿವೆ ಅವುಗಳನ್ನು ತಕ್ಷಣದಿಂದಲೇ ಬಂದ್ ಮಾಡಬೇಕಾಗಿತ್ತು. ಅದರ ಬಗ್ಗೆಯೂ ಸಹ ಇದರಲ್ಲಿ ಮಾಹಿತಿ ಇರುವುದಿಲ್ಲ. ಆದ್ದರಿಂದ, ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಕಡೆಯದಾಗಿ ಹೇಳುವುದಾದರೆ, ದೆಹಲಿಯಲ್ಲಿ "ನಿರ್ಭಯ ಪ್ರಕರಣ" ಬಂದ ಮೇಲೆ ಅದಕ್ಕೆ ನಿರ್ಭಯ ನಿಧಿ ಎಂದು ಮಾಡಿದ್ದಾರೆ. ಆ ನಿರ್ಭಯ ನಿಧಿಯನ್ನು ಸಂಪೂರ್ಣವಾಗಿ ಇಂತಹ ವಿಚಾರಗಳಿಗೆ ಉಪಯೋಗ ಮಾಡಬೇಕಾಗಿತ್ತು. ಈ ಕೆಲಸವನ್ನು ಕೇಂದ್ರ ಸರ್ಕಾರ ಇದುವರೆವಿಗೂ ಮಾಡದೇ ಇರುವುದರಿಂದ ಈ ವಿಚಾರದ ಬಗ್ಗೆ ನಾನು ಇಲ್ಲಿ ಸದನದ ಗಮನಸೆಳೆಯುತ್ತಿದ್ದೇನೆ. ನಿರ್ಭಯ ನಿಧಿಯನ್ನು ಇಂತಹ ಪ್ರಕರಣಗಳಲ್ಲಿ ಉಪಯೋಗ ಮಾಡಬೇಕೆಂದು ಹೇಳಲಿಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ||ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಉದ್ಯಾನವನದಲ್ಲಿ ದೇವದಾಸಿಯರು ತಮ್ಮ ಮಾಸಾಶನವನ್ನು ಹೆಚ್ಚಿಸಬೇಕೆಂದು ಹೇಳಿ ಪ್ರತಿಭಟನೆ ಮಾಡುತ್ತಿದ್ದಾರೆ. ಇವರೆಲ್ಲರೂ ಸಹ ಸಂತ್ರಸ್ತ ಹೆಣ್ಣು ಮಕ್ಕಳು. ಈ ಕಾರಣದಿಂದ ಮಾನ್ಯ ಸಚಿವರು ಅವರ ಕೋರಿಕೆಯನ್ನು ಸಹಾನೂಭೂತಿಯಿಂದ ಪರಿಗಣಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇನೆ.

**(50) 13.02.2019 12.30 ಎಸ್‌ವಿ-ಆರ್‌ಎನ್**

**ಡಾ: ಜಯಮಾಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರು ಇಲ್ಲಿ ಒಂದು ಮಾತನ್ನು ಕೇಳಿದ್ದಾರೆ. ನಾನು ಸದಸ್ಯರಿಗೆ ನೀಡಿರುವುದು 2001ರ ಜನಗಣತಿಯಲ್ಲಿ 946 ಇದ್ದು, 2011ರಲ್ಲಿ 948 ಇರುತ್ತದೆ. ಮಾನ್ಯ ಸದಸ್ಯರು ಹೇಳಿರುವಂತಹ ಮಾಹಿತಿ 2011ರ ಮಾಹಿತಿಯಾಗಿದೆ. ನಾನು 2017ರ ಮಾಹಿತಿಯನ್ನು ಕೊಟ್ಟಿರುತ್ತೇನೆ. ಈಗ ಬದಲಾವಣೆಗಳಾಗುತ್ತಿದೆ. ಬದಲಾವಣೆಯಾಗಿದೆ. ಸ್ಕ್ಯಾನಿಂಗ್ ಸೆಂಟರ್ ಮತ್ತು ಕಾನೂನು ಎರಡಕ್ಕೂ ಈ ಒಂದು ಪ್ರಶ್ನೆ ಅನ್ವಯವಾಗುತ್ತದೆ. ಇದು ಆರೋಗ್ಯ ಇಲಾಖೆಗೆ ಸಂಬಂಧಿಸಿದಂತಹ ವಿಚಾರವಾಗಿದ್ದರೂ ಸಹ ನಾನು ಮಾಹಿತಿಯನ್ನು ತರಿಸಿಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮುಖಾಂತರವೇ ತಮಗೆ ಉತ್ತರವನ್ನು ನೀಡಿದ್ದೇನೆ. ಖಂಡಿತವಾಗಿಯೂ ವ್ಯವಸ್ಥೆಯು ಇನ್ನಷ್ಟು ಉತ್ತಮಗೊಳ್ಳುವ ನಿಟ್ಟಿನಲ್ಲಿ ಏನೇನು ಆಗಬೇಕೋ ಅದು ಆಗುವಂತೆ ಕ್ರಮಗಳನ್ನು ರೂಪಿಸಲಾಗುವುದು.

**ಪ್ರಶ್ನೆ ಸಂಖ್ಯೆ: 448**

**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಉತ್ತರಗಳನ್ನು ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿರುವುದಿಲ್ಲ. ನನ್ನ ಪ್ರಶ್ನೆಯಲ್ಲಿ ಕಡತದ ನಕಲುಗಳನ್ನು ನೀಡಬೇಕೆಂದು ಕೇಳಿದ್ದೇನೆ. ಆದರೆ ಆದೇಶದ ಪ್ರತಿಗಳನ್ನು ನೀಡಿರುತ್ತಾರೆ. ಈ ಸದನದ ಎಷ್ಟು ಜನ ಸದಸ್ಯರು ತಿರುಪತಿಯಲ್ಲಿರುವ ಕರ್ನಾಟಕ ಛತ್ರಗಳಿಗೆ ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಛತ್ರದಲ್ಲಿನ ವ್ಯವಸ್ಥೆ ಯಾವ ರೀತಿಯಿತ್ತು ಎಂಬುದು ಅಲ್ಲಿಗೆ ಭೇಟಿ ನೀಡಿದವರಿಗೆ ಗೊತ್ತಿರುತ್ತದೆ. ಅದು ಶುದ್ಧವಾಗಿದೆಯೇ ಅಥವಾ ಯಾವುದಾದರೊಂದು ಒಳ್ಳೆಯ ವಾತಾವರಣವನ್ನು ಕಲ್ಪಿಸತಕ್ಕಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾಗವಾಗಿದೆಯೇ? ನಾನು ಏಕೆ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಕ್ರಿಶ್ಚಿಯನ್ನರಿಗೆ ವ್ಯಾಟಿಕನ್ ಸಿಟಿ ಇದ್ದಂತೆ, ಮುಸಲ್ಮಾನರಿಗೆ ಮೆಕ್ಕಾ ಇದ್ದಂತೆ, ಹಿಂದೂಗಳಿಗೆ ತಿರುಪತಿಯು ಒಂದು ಪವಿತ್ರ ಯಾತ್ರಾಸ್ಥಳವಾಗಿದೆ. ಇಂತಹ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗುತ್ತದೆ. ಕರ್ನಾಟಕ ಛತ್ರವನ್ನು ನಮ್ಮ ಸರ್ಕಾರ ಸಂಪೂರ್ಣವಾಗಿ ಕಡೆಗಣಿಸಿರತಕ್ಕಂಥದ್ದು ಅತ್ಯಂತ ಶೋಚನೀಯವಾದುದಾಗಿದೆ. 1962ನೇ ಇಸವಿಯಲ್ಲಿ ಈ ಛತ್ರವನ್ನು ಕಟ್ಟಬೇಕಾದರೆ OWN YOUR ROOMS DONATIONS SCHEME ಎಂಬ ಒಂದು ಸ್ಕೀಂ ಅನ್ನು ತರಲಾಯಿತು. OWN ಎಂದರೆ ಏನು? ಅದರ ಅರ್ಥವನ್ನು ತಿಳಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಂದರೆ ಭೋಗ್ಯವೇ ಅಥವಾ ಬಾಡಿಗೆಯೇ? OWN ಎಂದರೆ ನನಗೆ ಗೊತ್ತಿರುವಂತೆ ಸ್ವಂತ ಎಂದು ಅರ್ಥ. 1964ರಲ್ಲಿ ಒಂದು ಸ್ಕೀಂ ಅನ್ನು ಮಾಡಲಾಗುತ್ತದೆ. ಸ್ಕೀಂಗೆ ಒಂದು ರೂಪುರೇಷೆಯನ್ನು ನೀಡಿ ಅರ್ಧ ಹಣವನ್ನು ನೀಡಿದಲ್ಲಿ ಅವರ ಹೆಸರಿಗೆ ಒಂದು ಕೊಠಡಿಯನ್ನು ನೀಡುತ್ತೇವೆ. ಇಷ್ಟು ದಿನಗಳು ಉಚಿತವಾಗಿ ನೀಡಲಾಗುವುದು ಹಾಗೂ ನಂತರ ಕಡಿಮೆ ದರದಲ್ಲಿ ನೀಡಲಾಗುವುದು ಎಂದು ಸ್ಕೀಂ ಪ್ರಾರಂಭವಾಗುತ್ತದೆ. 2007ರಲ್ಲಿ ಸಂಪೂರ್ಣ ಕಟ್ಟಡವನ್ನು maintenance ಮಾಡುವುದಕ್ಕಾಗಿ, ಸ್ವಚ್ಛತೆಗಾಗಿ ಹೀಗೆ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕಾಗಿ ಒಂದು ಖಾಸಗಿ ಕಂಪನಿಯವರಿಗೆ ಹೊರಗುತ್ತಿಗೆ ಆಧಾರದಲ್ಲಿ ಟೆಂಡರ್ ಮೂಲಕ ನೀಡಲಾಗಿರುತ್ತದೆ. ಅದನ್ನು 2003ರಿಂದ ಮೂರು ವರ್ಷಗಳ ಅವಧಿಗೆ ಎಂದು ನೀಡಲಾಗುತ್ತದೆ. ಅದು ಸಂಪೂರ್ಣ ವಿಫಲಗೊಳ್ಳುತ್ತದೆ. ತಿರುಪತಿಯಲ್ಲಿ ಸುಮ್ಮನೆ ಕರೆದು ಕೂರಿಸಲಾಗುತ್ತದೆ ಎಂದು ನಮ್ಮಲ್ಲಿ ಒಂದು ಗಾದೆಯಿದೆ. ಆ ರೀತಿ ಆ ಜಾಗವನ್ನು ನಾಶ ಮಾಡಿ ನಮ್ಮ ಕರ್ನಾಟಕ ಸರ್ಕಾರ ಮುಜರಾಯಿ ಇಲಾಖೆಯಡಿಯಲ್ಲಿ ಬರುವ ಈ ಚೌಲ್ಟ್ರಿ ಅಥವಾ ತಂಗುದಾಣಗಳು ಹಾಳಾಗಿವೆಯೆಂದು ಸಚಿವರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ನಾವು ಯಾರೇ ಅಲ್ಲಿಗೆ ಹೋದರೂ ಆ ಛತ್ರದಲ್ಲಿರುವುದಿಲ್ಲ. ಬೇರೆ ವಸತಿ ಗೃಹಗಳಲ್ಲಿ ಉಳಿದುಕೊಳ್ಳುತ್ತೇವೆ. ಇದರ ಬಗ್ಗೆ ನ್ಯಾಯಾಲಯದ ವಿಷಯವೇನಾದರೂ ಇದ್ದರೆ ಕೊಡಬೇಕೆಂದು ಕೇಳಿದ್ದೆನು. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು. ನಾನು ಕಡತವನ್ನು ಕೇಳಿದ್ದೆನು. ಕಡತವನ್ನು ನೀಡಿರುವುದಿಲ್ಲ. ಆದರೆ OWN ಎನ್ನುವುದಕ್ಕೆ ದಯವಿಟ್ಟು ಉತ್ತರವನ್ನು ಕೊಡಬೇಕು. ಇದರ ಬಗ್ಗೆ ಉಚ್ಚ ನ್ಯಾಯಾಲಯದಿಂದ ಆದೇಶವಿದೆ ಎಂದು 2009ರಲ್ಲಿ ಮುಜರಾಯಿ ಆಯುಕ್ತರ ಕಛೇರಿಯಿಂದ ಪತ್ರ ಬರೆಯಲಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತಹ ನ್ಯಾಯಾಲಯದ ಆದೇಶಗಳೇನಾದರೂ ಇದ್ದರೆ ಅವುಗಳನ್ನೂ ಸಹ ಒದಗಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್:-** ಮಾನ್ಯ ಸಭಾಪತಿಯವರೇ, ಹಿರಿಯರಾಗಿರುವಂತಹ ಶ್ರೀ ಪಿ.ಆರ್.ರಮೇಶ್‌ರವರು ತಮ್ಮ ಅನುಭವದೊಂದಿಗೆ ಅಲ್ಲಿಯ ಪರಿಸ್ಥಿತಿಯ ಕುರಿತು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುವಂತಹ ಕೆಲಸವನ್ನು ಮಾಡಿದ್ದಾರೆ. ಅವರು ಹೇಳಿರುವುದರಲ್ಲಿ ಕೆಲವೊಂದು ವಾಸ್ತವಾಂಶವಿದೆ. ಈಗಾಗಲೇ ಸುಮಾರು 60 ಕೊಠಡಿಗಳನ್ನು ಸುಧಾರಣೆ ಮಾಡಿ ಆನ್‌ಲೈನ್ ಮೂಲಕ ಬುಕ್ಕಿಂಗ್ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಅವರು OWN ಇದರ ಅರ್ಥ ಏನು ಎಂಬುದನ್ನು ಕೇಳಿದ್ದಾರೆ. 1964-65ರಲ್ಲಿ ಮೈಸೂರು ಸಂಸ್ಥಾನದಡಿಯಲ್ಲಿ ಆಂಧ್ರಪ್ರದೇಶದ ತಿರುಮಲ-ತಿರುಪತಿಯ ಛತ್ರವನ್ನು ನಿರ್ಮಾಣ ಮಾಡುವಂತಹ ಸಂದರ್ಭದಲ್ಲಿ ಈ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದದ್ದು ಸರಿಯಷ್ಟೆ. ಆದರೆ ಅಂದಿನ ಪರಿಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಹೋಲಿಕೆಯನ್ನು ಮಾಡಿದರೆ ದಿನದಿಂದ ದಿನಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಭಕ್ತರಿಗೆ ಅನುಕೂಲ ಕಲ್ಪಿಸಬೇಕೆನ್ನುವ ಉದ್ದೇಶದಿಂದ ಹಿಂದೆ ಇದ್ದಂತಹ ದಾನಿಗಳು ಮತ್ತು ಅವರು ಸೂಚಿಸಿದವರಿಗೆ ಒಂದು ವರ್ಷಕ್ಕೆ 60 ದಿನಗಳ ಕಾಲ ಕೊಠಡಿಯನ್ನು ಉಚಿತವಾಗಿ ಕೊಡುವಂತಹ ವ್ಯವಸ್ಥೆ ಮಾರ್ಪಾಟು ಮಾಡಿ ಒಂದು ವರ್ಷದಲ್ಲಿ 60 ದಿನಗಳ ಬದಲಿಗೆ 20 ದಿನಗಳ ಕಾಲ ರೂ.25 ಬಾಡಿಗೆಯನ್ನು ಮಾತ್ರ ಪಾವತಿ ಮಾಡುವಂತೆ 2010ರಲ್ಲಿ ಆದೇಶವಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ 10 ವರ್ಷಗಳ ಅವಧಿಗೆ ಎಂದು ಕೊಟ್ಟಿದ್ದಾರೆ. ಅದನ್ನು ಮಾನ್ಯ ಸಚಿವರು ಉಲ್ಲೇಖ ಮಾಡಲಿಲ್ಲ. ಅವರು ಅದನ್ನೂ ಸಹ ಹೇಳಬೇಕು. ಅಲ್ಲಿಗೆ ಸ್ಕೀಂ ಪ್ರಾರಂಭ ಮಾಡಿದ್ದು OWN ಎಂದು...

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಲಿಖಿತವಾಗಿ ಉತ್ತರವನ್ನು ನೀಡಿರುತ್ತೇನೆ. ಈ ಹಿಂದೆ ಒಂದು ವರ್ಷಕ್ಕೆ 60 ದಿನಗಳು ಇತ್ತು. ಅದು ಜೀವಿತಾವಧಿಯವರೆವಿಗೂ ಎಂದು ಇತ್ತು. ಈಗ ಅದನ್ನು 10 ವರ್ಷಕ್ಕೆ ಸೀಮಿತಗೊಳಿಸಲಾಗಿದೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, 10 ವರ್ಷಕ್ಕೆ ಸೀಮಿತಗೊಳಿಸಲು ಅಧಿಕಾರವಿರುವುದಿಲ್ಲ. ಮೂಲ ಒಪ್ಪಂದಕ್ಕೆ ಅಂದರೆ OWN ಎಂಬುದಕ್ಕೆ ಸರ್ಕಾರ stick-on ಆಗಬೇಕು. ದಿನಗಳು ಕಳೆದಂತೆಲ್ಲಾ ಬದಲಾವಣೆಯನ್ನು ಮಾಡಲು ಅಧಿಕಾರವಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್ ಅವರು ಹೇಳಿದಂತೆ ಸರ್ಕಾರಕ್ಕೆ ಅಧಿಕಾರವಿದೆಯೇ ಅಥವಾ ಇಲ್ಲವೇ ಮತ್ತು ಯಾವ ರೀತಿ ಮಾರ್ಪಾಟು ಮಾಡಲಾಗಿದೆ ಎಂಬುದರ ಬಗ್ಗೆ ಕಾನೂನು ತಜ್ಞರ ಸಲಹೆಯನ್ನು ಪಡೆದು ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಪಿ.ಆರ್.ರಮೇಶ್ ಅವರು ತಮ್ಮ ಪ್ರಶ್ನೆಗೆ ಸಂಬಂಧಿಸಿದಂತೆ ತಿರುಪತಿಗೆ ಹೋಗಿದ್ದೀರಾ ಎಂದು ಕೇಳಿದರು. ಬಹಳಷ್ಟು ಬಾರಿ ಹೋಗಿದ್ದೇವೆ. ಮೊನ್ನೆಯೂ ಸಹ ಹೋಗಿಬಂದೆವು. ಅಲ್ಲಿರುವ ಪರಿಸ್ಥಿತಿ ಶೋಚನೀಯ. ತಿರುಪತಿಗೆ ಬೇರೆ ಬೇರೆ ರಾಜ್ಯದವರು ಹೋಗುವುದಕ್ಕಿಂತ ಹೆಚ್ಚಾಗಿ ಕರ್ನಾಟಕದ ಜನರು ಹೆಚ್ಚಿಗೆ ಹೋಗುತ್ತಾರೆ. ಹಿಂದೆ ಮೈಸೂರು ಮಹಾರಾಜರು ಅಲ್ಲಿ ಜಾಗವನ್ನು ಕೊಟ್ಟಿದ್ದಾರೆ. ಏಕೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆಂದರೆ ಹಿಂದೆ ಮಾನ್ಯ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ತಿರುಪತಿಯ ಕರ್ನಾಟಕ ಛತ್ರದಲ್ಲಿ ಇನ್ನೂ ಹೆಚ್ಚಿನ ಕೊಠಡಿಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಬೇಕೆಂದು ಒಂದು ಸಮಿತಿಯನ್ನು ಮಾಡಿದಾಗ ನಾನು ಅದರ ಸದಸ್ಯನಾಗಿ ಹೋಗಿ ಬಂದಿದ್ದೆನು. ಸಮಿತಿಯು ವರದಿಯನ್ನೂ ಸಹ ಕೊಟ್ಟಿದೆ. ಆದರೆ ಅದರ ಕಡತವನ್ನು ಮೂಲೆಯಲ್ಲಿ ಹಾಗೆ ಇಟ್ಟಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಆ ಛತ್ರದಲ್ಲಿ ಉಳಿದುಕೊಳ್ಳಲು ಆಗುವುದಿಲ್ಲ. ಮಾನ್ಯ ರಮೇಶ್ ಅವರು ಹೇಳಿದಂತೆ ಸಮಯವನ್ನು ಕಡಿಮೆ ಮಾಡಲಾಗಿದೆಯೇ ಹೊರತು ಕೊಠಡಿಗಳನ್ನು ಜಾಸ್ತಿ ಮಾಡಿಲ್ಲ. ಸಾಮಾನ್ಯ ಜನರೂ ಸಹ ಉಳಿಯುವುದು ಕಷ್ಟ. ಇತ್ತೀಚೆಗೆ ನಾನು ಮತ್ತು ಮಾನ್ಯ ವೆಂಕಟರಮಣಪ್ಪ ಅವರೂ ಸಹ ಹೋಗಿ ಬಂದಿದ್ದೇವೆ.

**(51)13.02.2019 ಕೆಜಿ/ವಿಕೆ 12.40**

**ಶ್ರೀ ಹೆಚ್.ಎಂ.ರೇವಣ್ಣ (ಮುಂದು...):–**

ಮಾನ್ಯ ಸಭಾಪತಿಯವರೇ, ತಿರುಪತಿಯಲ್ಲಿ ಮೂರು ಕಡೆ ಜಾಗ ಇದೆ. ತಿರುಮಲ ಮತ್ತು ತಿರುಪತಿಯಲ್ಲಿ ಹಾಗೂ ಇನ್ನೊಂದು ಕಡೆ ಜಾಗ ಇದೆ. ಅದಕ್ಕೆ ಬೇಕಾಗುವಷ್ಟು ಹಣ ಇದೆ. ಹಾಗಾಗಿ, ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ (ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಮತ್ತು ಮುಜರಾಯಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಹೆಚ್.ಎಂ.ರೇವಣ್ಣನವರು ಅಲ್ಲಿನ ವಸ್ತಾಂಶವನ್ನು ಇವತ್ತು ಸದನದ ಮೂಲಕ ಸರ್ಕಾರದ ಗಮನವನ್ನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೆಳೆದಿದ್ದಾರೆ. ನಾನು ಪ್ರಾರಂಭದಲ್ಲಿಯೇ ಅದು ವಸ್ತಾಂಶ ಇದೆ ಎಂದು ಹೇಳಿದ್ದೆನೆ. ನಾನು ಸಚಿವನಾಗಿ ಅಧಿಕಾರ ವಹಿಸಿಕೊಂಡ ಎರಡು/ಮೂರು ದಿವಸಗಳಲ್ಲೇ ಈ ಬಗ್ಗೆ ಅಧಿಕಾರಿಗಳ ಸಭೆಯನ್ನು ಮಾಡಿದ್ದೇನೆ. ನಾನು ಸಹ ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ಮನವಿ ಇದೆ. ಈ ಸಮಸ್ಯೆ ಹಲವಾರು ವರ್ಷಗಳಿಂದ ಹಾಗೆಯೇ ಮುಂದುವರಿಯುತ್ತಿದೆ. ಸನ್ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡಿದ್ದರು. ಭರವಸೆ ಸಮಿತಿಯಿಂದ..

**(ಗೊಂದಲ)**

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ನಾನು ಸಂಪೂರ್ಣ ಉತ್ತರವನ್ನು ಹೇಳಿದ ಮೇಲೆ, ಅದು ಮಾನ್ಯ ಸದಸ್ಯರಿಗೆ ಸಮಾಧಾನವಾಗಲಿಲ್ಲವೆಂದರೆ, ಅದರ ಬಗ್ಗೆ ಅವರು clarifications ಕೇಳಬಹುದು.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರನ್ನು ನಿಮ್ಮ ಕೊಠಡಿಗೆ ಕರೆದು ಕೇಳಿ.

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿಯೇ ಹೇಳುತ್ತೇನೆ. ಕೊಠಡಿಗೂ ಬಂದರೂ ಒಳ್ಳೆಯದು.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಅನುಮಾನ ಆಗುತ್ತಿದೆ. ಅವರನ್ನು ಕೊಠಡಿಗೆ ಕರೆಸಿ ಎಂದರೆ, is it amounts to in-camera proceedings?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ, ಟೈಮ್ ಆಗುತ್ತಿದೆ. ಬೇಗ ಉತ್ತರ ಹೇಳಿ ಮುಗಿಸಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆ ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಟ್ಟ ಮೇಲೆ, ಅದು ಅವರಿಗೆ ಸಮಾಧಾನವಾಗಲಿಲ್ಲವೆಂದರೆ ಅವರು ಕೇಳಲಿ. ನಾನು ಧಾರ್ಮಿಕ ಭಾವನೆಯನ್ನು ಅರ್ಥಮಾಡಿಕೊಂಡಿದ್ದೇನೆ. ನಾನು ಪ್ರಾರಂಭದಲ್ಲಿಯೇ ಅಧಿಕಾರಿಗಳ ಜೊತೆಗೆ ಸಭೆ ಮಾಡಿ ಅಲ್ಲಿನ ವ್ಯವಸ್ಥೆಯ ಬಗ್ಗೆ ಸೂಚನೆ ಕೊಟ್ಟಿದ್ದೇನೆ. ಅಲ್ಲಿರುವಂತಹ ಕೊಠಡಿಗಳ ಪೈಕಿ ಈಗಾಗಲೇ ಸುಮಾರು 60 ಕೊಠಡಿಗಳನ್ನು ದುರಸ್ಥಿ ಮಾಡಿದ್ದೇವೆ. ಅದರಲ್ಲಿ 40 ಕೊಠಡಿಗಳಿಗೆ Air Conditioners ಗಳನ್ನು ಅಳವಡಿಸಿದ್ದೇವೆ. ಉಳಿದಿರುವಂತಹ ಕೊಠಡಿಗಳನ್ನು renovate ಮಾಡುವುದಕ್ಕೆ ನಾಲ್ಕು ಕೋಟಿ ರೂಪಾಯಿಗಳ ಅನುದಾನವನ್ನು ಸಹ ಮೀಸಲು ಇಟ್ಟಿದ್ದೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ದಯವಿಟ್ಟು ತಾವು ಒಂದು ನಿಮಿಷ ಕುಳಿತುಕೊಳ್ಳಿ. ಎಲ್ಲರಿಗೂ ಒಂದೇ ಬಾರಿ ಉತ್ತರ ಕೊಡಿ. ಮಾನ್ಯ ವೆಂಕಟೇಶ್‌ರವರು ಮಾತನಾಡಲಿ

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ತಿರುಪತಿಯಲ್ಲಿರುವ ಛತ್ರಗಳಿಗೆ ಒಂದು ಬಾರಿ ಹೋದರೆ, ಮತ್ತೊಮ್ಮೆ ತಿರುಪತಿಗೆ ಹೋಗಬಾರದು ಅನಿಸಿಬಿಡುತ್ತದೆ. ಎರಡನೆಯದಾಗಿ, ಮುಜರಾಯಿ ಇಲಾಖೆಯ ದೇವಸ್ಥಾನಗಳಲ್ಲಿ ಒಬ್ಬೊಬ್ಬ ಅಧಿಕಾರಿಗಳು 10 ರಿಂದ 20 ವರ್ಷಗಳ ಕಾಲ ಇರುತ್ತಾರೆ. ಇದರ ಹಿಂದಿನ ಮರ್ಮ ಏನು? ಅವರನ್ನು 2 ರಿಂದ 3 ವರ್ಷಗಳಿಗೆ ಬದಲಾವಣೆ ಮಾಡಬೇಕು. ಅವರನ್ನು ಯಾರು ಹೇಳಿದರು ಬದಲಾವಣೆ ಮಾಡುವುದಿಲ್ಲ. ಅವರು ದೇವಸ್ಥಾನಗಳನ್ನು ಅವರ ಆಸ್ತಿ ಮಾಡಿಕೊಂಡು ಬಿಟ್ಟಿದ್ದಾರೆ. ಮಾನ್ಯ ಸಚಿವರಿಗೆ ಈ ಪುಣ್ಯದ ಇಲಾಖೆ ಸಿಕ್ಕಿದೆ. ಆದ್ದರಿಂದ, ಮಾನ್ಯ ಸಚಿವರು ಇದಕ್ಕೆ ಏನಾದರೊಂದು ಇತಿಶ್ರೀ ಆಡಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ವಿಷಯಗಳು ಬಹಳ ಗಂಭೀರವಾಗಿವೆ. ನಮ್ಮ ಸದಸ್ಯರು ಯಾರು ತಪ್ಪು ಭಾವನೆ ತಿಳಿಯಬಾರದು. ಇದರಿಂದ ನಮ್ಮ ಶಾಸಕರಿಗೆ ಯಾರಿಗೂ ತೊಂದರೆ ಇಲ್ಲ. ನಮಗಿಂತಲೂ ನಮ್ಮ ಅಧಿಕಾರಿಗಳಿಗೆ ಮೊದಲೇ ತೊಂದರೆ ಇಲ್ಲ. ಇಲ್ಲಿ ತೊಂದರೆ ಇರುವುದು ಸಾಮಾನ್ಯ ಜನರಿಗೆ ಮಾತ್ರ. ತಿರುಪತಿಯ ಮೆಟ್ಟಿಲುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹತ್ತಿಕೊಂಡು ಹೋಗುವಂತಹ ಭಕ್ತರಿಗಾಗಿ ಆ ಅತಿಥಿ ಗೃಹಗಳನ್ನು ನಮ್ಮ ಸರ್ಕಾರ ಮಾಡಿದೆ. ಇಲ್ಲಿರುವಂತಹ ಶಾಸಕರು ಭವ್ಯ ಬಂಗಲೆಗಳಲ್ಲಿ ಉಳಿದುಕೊಳ್ಳುತ್ತಾರೆ. ಆ ರೀತಿ ಉಳಿದುಕೊಳ್ಳುವುದಕ್ಕೆ ಅವಕಾಶ ಸಹ ಇದೆ. ಆದ್ದರಿಂದ, ಸಾಮಾನ್ಯ ಜನರಿಗೆ ಆಗುವಂತಹ ತೊಂದರೆಗಳನ್ನು ನಿವಾರಣೆ ಮಾಡುವ ಕಡೆಗೆ ಮಾನ್ಯ ಸಚಿವರು ದಯಮಾಡಿ ಗಮನಹರಿಸಬೇಕು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾವು ಒಂದು ವರ್ಷಕ್ಕೆ ತಿರುಪತಿಗೆ 4 ರಿಂದ 5 ಬಾರಿ ಹೋಗುತ್ತೇನೆ. ನಾವು ಬೇರೆ ಹೋಟೆಲ್‌ಗಳಲ್ಲಿ ತಂಗುವುದಿಲ್ಲ. ನಾವು ನಮ್ಮ ಕರ್ನಾಟಕ ಭವನಕ್ಕೆ ಹೋಗುತ್ತೇವೆ. ಅಲ್ಲಿ ನಡೆಯುವಂತಹ ಅವ್ಯವಸ್ಥೆಯನ್ನು ನೋಡಿದ್ದೇವೆ. ಅಲ್ಲಿ ಹೆಣ್ಣು ಮಕ್ಕಳು ಚಿಕ್ಕ ಚಿಕ್ಕ ಮಕ್ಕಳನ್ನು ಇಟ್ಟುಕೊಂಡು ಪುಟ್‌ಬಾತ್ ಮೇಲೆ ಮಲಗುತ್ತಾರೆ. ಅಂತಹವರಿಗೆ ಕೊಠಡಿಗಳನ್ನು ಕೊಡುವುದಿಲ್ಲ. ಹೊರರಾಜ್ಯಗಳಿಂದ ಬರುವವರಿಗೆ ರೂ.500/- ಮತ್ತು ರೂ.1000/- ಗಳು ಇರುವಂಥ ಕೊಠಡಿಗಳನ್ನು ರೂ.2000/- ರಿಂದ ರೂ.3000/- ಗಳಿಗೆ ಮಾರಾಟ ಮಾಡಿಕೊಳ್ಳುತ್ತಾರೆ. ಅಲ್ಲಿ ನಮ್ಮ ಶಾಸಕರಿಗೂ ಸಹ ಬಹಳ ತೊಂದರೆ ಇದೆ. ಉದಾಹರಣೆಗೆ, ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಇಂದು ಸದನದಲ್ಲಿ ಇದ್ದಾರೆ. ಅವರು ಒಂದು ದಿವಸ ಅಲ್ಲಿ ಕೊಠಡಿ ಕೊಡುತ್ತಿಲ್ಲವೆಂದು ನನಗೆ ಫೋನ್ ಮಾಡಿದ್ದರು. ಆಗ ನಾನು ಫೋನ್ ಮಾಡಿದೆ. ಆದರೆ, ಅಲ್ಲಿನ ಸ್ವಾಗತಕಾರರು ಯಾರು ಸಹ ಫೋನ್ ತೆಗೆಯಲಿಲ್ಲ. ಈ ರೀತಿಯಾದರೆ ನಾವು ಯಾರ ಹತ್ತಿರ ಮಾತನಾಡಬೇಕು. ಅಲ್ಲಿಗೆ ವಿಶೇಷ ಅಧಿಕಾರಿಯನ್ನು ನೇಮಕ ಮಾಡುತ್ತಾರೆ. ಅವರು ಅಲ್ಲಿ ಮೂರು ತಿಂಗಳು ಕೆಲಸ ಮಾಡುವುದಿಲ್ಲ. ಅವರು ಅಲ್ಲಿನ ಕಾಟ ತಡೆಯಲಾರದೆ ಬೇರೆ ಕಡೆಗೆ ವರ್ಗಾವಣೆ ಮಾಡಿಸಿಕೊಂಡು ಹೋಗುತ್ತಾರೆ. ಎರಡನೆಯದಾಗಿ, ಅಲ್ಲಿ ಏಳೂವರೆ ಎಕರೆ ಜಮೀನಿನ ಮೇಲೆ ವ್ಯಾಜ್ಯ ಇದೆ. ಆ ವ್ಯಾಜ್ಯದಲ್ಲಿ ಸರಿಯಾಗಿ ನಮ್ಮ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಭರವಸೆ ಸಮಿತಿಯ ಅಧ್ಯಕ್ಷರಾಗಿದ್ದ ಮಾನ್ಯ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ನಾವು ಎರಡು ಬಾರಿ ಅಲ್ಲಿ ಸಭೆ ಮಾಡಿದ್ದೇವೆ. ಅಲ್ಲಿನ ಟಿ.ಟಿ.ಡಿ ಅಧಿಕಾರಿಗಳ ಜೊತೆಗೆ ಮಾತನಾಡಿದ್ದೇವೆ. ಶ್ರೀ ಗೋವಿಂದರಾಜು ಎಂಬ ವಕೀಲರು ಈ ವ್ಯಾಜ್ಯದ ಬಗ್ಗೆ ವಾದ ಮಾಡುತ್ತಿದ್ದರು. ಅಲ್ಲಿ ಖಾಸಗಿ ವ್ಯಕ್ತಿಯೊಬ್ಬರು ಪಿ.ಐ.ಎಲ್ ಹಾಕಿಕೊಂಡಿದ್ದಾರೆ. ಅದನ್ನು vacate ಮಾಡಿಸುವುದಕ್ಕೆ ಆಗಲಿಲ್ಲವೇ? ಈ ರೀತಿ ಆ ವ್ಯಾಜ್ಯ ಏಕೆ ಮುಂದುವರಿಯುತ್ತಿದೆ? ಇದಕ್ಕೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲವೇ? ಮಾನ್ಯ ಸಚಿವರು ಇದರ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕು.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾನ್ಯ ಸದಸ್ಯರಾದ ರಮೇಶ್‌ರವರ ಪ್ರಶ್ನೆಗೆ ಬಹಳ ಸೂಕ್ತವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇಲ್ಲಿ ಸಮಸ್ಯೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನಾಗಿದೆ ಎಂದರೆ, ತಿರುಮತಿ ಮತ್ತು ತಿರುಮಲ ದೇವಸ್ಥಾನದ ಒಬ್ಬ legal advisor retired ಆದಮೇಲೆ ಒಂದು Public Interest Litigation ಹಾಕಿ Judicature of Andhra Pradesh ದಲ್ಲಿ ಆ ಪಿಟೇಷನ್ ಬಾಕಿ ಇದೆ. 2010 ಮತ್ತು 2011 ನೇ ಸಾಲಿನಿಂದ ಇಲ್ಲಿಯವರೆಗೆ ಅದು ಬಾಕಿ ಇದೆ. ನಮ್ಮ ಕರ್ನಾಟಕ ಭವನದ ಯಾವುದೇ renovation ಮಾಡುವುದಕ್ಕಾಗಲಿ ಮತ್ತು ಹೊಸ ಕಟ್ಟಡ ಕಟ್ಟುವುದಕ್ಕಾಗಲಿ ನಮಗೆ ಅಲ್ಲಿ ಅವಕಾಶ ಇಲ್ಲ. ಈಗಾಗಲೇ ಅದರಲ್ಲಿ ಎರಡು ಬಾರಿ ಮಧ್ಯಂತರ ಅರ್ಜಿ ಹಾಕಿ, stay vacate ಮಾಡುವುದಕ್ಕೆ ನಮ್ಮ ರಾಜ್ಯದಿಂದ ಬಹಳಷ್ಟು ಪ್ರಯತ್ನಗಳು ಆಗಿವೆ. ಸನ್ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ಅಲ್ಲಿಗೆ ಹೋಗಿದ್ದಾಗ ನಾವೆಲ್ಲರೂ ಅಲ್ಲಿ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ, ಉತ್ತರ ಕೊಡಿ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಇದಕ್ಕೆ ಸುಮ್ಮನೆ ಉತ್ತರ ಕೊಟ್ಟರೆ ಆಗುವುದಿಲ್ಲ ಇದು..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಬೇರೆ ಕೇಳಿ.

**(ಗೊಂದಲ)**

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಸದನಕ್ಕೆ ಬೇಕಾದರೆ ಹೇಳುತ್ತೇನೆ. ಬೇಡವೆಂದರೆ ಬಿಟ್ಟುಬಿಡಿ. ಸುಮ್ಮನೆ ಉತ್ತರಕ್ಕಾಗಿ ಕೇಳುವುದು ಬೇಡ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರೇ.,

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಇದಕ್ಕೆ ಮಾನ್ಯ ಸಚಿವರಿಂದ ಉತ್ತರ ಕೊಡಿಸಿ. ಇದು ಬಹಳ ಮುಖ್ಯವಾದಂತಹ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕಿ ಚರ್ಚೆ ಮಾಡಿ.

(ಗೊಂದಲ)

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ಈ ಸದನದ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ನಾನು ಮೊದಲೇ ಹೇಳಿದ್ದೇನೆ. ಮಾನ್ಯ ಶರವಣರವರು ಅದನ್ನು ಕೇಳಿಸಿಕೊಂಡಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ.

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದಕ್ಕೆ ಬಹಳಷ್ಟು ಸ್ಪಂದಿಸಿದ್ದಾರೆ. ಮಾನ್ಯ ಸಚಿವರ ಅವಧಿಯಲ್ಲಿ ಆದರೂ ಸಹ, ಈ ಸಮಸ್ಯೆ ಬಗೆಹರಿಯಲಿ ಎಂದು ನಮ್ಮ ಅಭಿಪ್ರಾಯ. ಇದಕ್ಕೊಂದು ಅಭಿವೃದ್ಧಿ ಪ್ರಾಧಿಕಾರ ಮಾಡಿ.

(ಗೊಂದಲ)

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ರೀತಿ ಸಮ್ಮಿಶ್ರ ಸರ್ಕಾರದವರು ಕಿತ್ತಾಡಿದರೆ ಹೇಗೆ?

(ಗೊಂದಲ)

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ನಾವು ಕಿತ್ತಾಡುತ್ತಿಲ್ಲ. ಹಾಗಾದರೆ, ಮಾನ್ಯ ಶರವಣರವರು ಉತ್ತರ ಕೇಳಬಾರದೆ?

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವರ ಸಂಸ್ಕೃತಿ ಏನೆಂದು ನಮಗೆ ಗೊತ್ತಿದೆ. ನಾವು ನೋಡಿಲ್ಲವೇ..

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಸಭಾಪತಿಯವರೇ, ಸಮ್ಮಿಶ್ರ ಸರ್ಕಾರದವರು ಪ್ರಶ್ನೆ ಕೇಳಬಾರದು ಎಂದು ನಿಯಮ ಏನಾದರೂ ಇದೆಯೇ? ಅವರು ಏನು ಮಾತನಾಡುತ್ತಾರೆ..

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಚಿವರೇ ಉತ್ತರ ಕೊಡಿ.

**(ಗೊಂದಲ)**

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ನಾನು ಮೊದಲೇ ಹೇಳಿದ್ದೇನೆ. ನಾನು ಮಂತ್ರಿಯಾದ ಎರಡೇ ದಿವಸಗಳಲ್ಲಿ ಅಧಿಕಾರಿಗಳ ಸಭೆ ಮಾಡಿ ಮೊದಲು ತಿರುಪತಿಯಲ್ಲಿರುವ ನಮ್ಮ ಕರ್ನಾಟಕ ಭವನದ ಬಗ್ಗೆ ಚರ್ಚೆ ಮಾಡಿದ್ದೇನೆ. ನನಗೆ ಅಲ್ಲಿರುವ ನಮ್ಮ ಭವನದ ಬಗ್ಗೆ ಅನುಭವ ಆಗಿತ್ತು. ಅಲ್ಲದೇ, ಆ ಬಗ್ಗೆ ಬಹಳ ಜನರ ಬಾಯಿಯಲ್ಲಿ ಸಹ ಕೇಳಿದ್ದೆ. ಮಾನ್ಯ ಸದಸ್ಯರಾದ ಶ್ರೀ ಭೋಜೇಗೌಡರವರು ಹೇಳಿದಂತೆ, ಅನುಕೂಲಸ್ಥರು ಯಾವ ಹೋಟೆಲ್‌ನಲ್ಲಿ ಬೇಕಾದರೂ ತಂಗಬಹುದು. ಆದರೆ, ಕಾಲು ನಡೆಗೆಯಿಂದ ತಿರುಪತಿಗೆ ಹೋಗುವಂತಹ ಭಕ್ತರಿಗೆ ಹಾಗೂ ಸ್ವಾಮಿ ದರ್ಶನಕ್ಕೆ ಬರುವಂತಹ ಬಡವರಿಗೆ ಆಗಿರುವಂತಹ ಅನುಭವನ್ನು ನಾನು ಕೇಳಿದ್ದೇನೆ. ಅದಕ್ಕೆ ನಾನು ಅಧಿಕಾರಕ್ಕೆ ಬಂದ ತಕ್ಷಣವೇ ಆ ಬಗ್ಗೆ ಸಭೆ ಮಾಡಿ ತಿರುಪತಿಯಲ್ಲಿರುವ ನಮ್ಮ ಕರ್ನಾಟಕ ಭವನದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ಈಗಾಗಲೇ 40 ಕೊಠಡಿಗಳನ್ನು ದುರಸ್ಥಿ ಮಾಡಿ ಆ ಕೊಠಡಿಗಳಿಗೆ Air Conditioner ಗಳನ್ನು ಅಳವಡಿಸಿದ್ದೇವೆ. 40 ಕೊಠಡಿಗಳಿಗೆ ಆನ್‌ಲೈನ್ ಬುಕಿಂಗ್‌ಗೆ ವ್ಯವಸ್ಥೆ ಸಹ ಮಾಡಿದ್ದೇವೆ. ಉಳಿದ ಕೊಠಡಿಗಳನ್ನು ದುರಸ್ಥಿ ಮಾಡುವುದಕ್ಕೆ ಈಗಾಗಲೇ 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

**(52)13-02-2019(12-50)ಎಂವಿ-ವಿಕೆ**

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ(ಮುಂದು):-**

ಮೊನ್ನೆ ಬಜೆಟ್ ಪೂರ್ವ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕರ್ನಾಟಕದ ತಿರುಮಲ ಛತ್ರ, ಶ್ರೀಶೈಲ ಛತ್ರ, ಮಂತ್ರಾಲಯ ಛತ್ರ, ಮಹಾರಾಷ್ಟ್ರದ ಪಂಡರಾಪುರ ಛತ್ರ ಮತ್ತು ತುಳಜಾಪುರದ ಛತ್ರ ಇವುಗಳೆಲ್ಲವನ್ನು ಸಹ ದುರಸ್ತಿ ಮಾಡಬೇಕು; ಇದರಲ್ಲಿ ಮೊದಲ ಆದ್ಯತೆ ತಿರುಪತಿಯಲ್ಲಿರುವಂತಹ ತಿರುಮಲ ಛತ್ರಕ್ಕೆ ಕೊಡಬೇಕೆಂದು ಮನವಿಯನ್ನು ಮಾಡಿದಾಗ ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದನೆ ಮಾಡಿದ್ದಾರೆ. ಇದಕ್ಕೆ ಅನುದಾನವನ್ನು ಕೊಡುತ್ತೇನೆ ಎನ್ನುವ ಭರವಸೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ನಮ್ಮ ವಕೀಲರು ಮತ್ತು ಸದಸ್ಯರಾದ ಮಾನ್ಯ ಶರಣಪ್ಪ ಮಟ್ಟೂರರವರು ನ್ಯಾಯಾಲಯದಲ್ಲಿ ದಾವೆಗಳಿವೆ ಎಂದು ಏನು ಹೇಳಿದ್ದಾರೆ, ಅದು ವಾಸ್ತವಾಂಶದಿಂದ ಕೂಡಿರುವಂಥದ್ದು ಮತ್ತು ಅದು ಸರಿಯಿದೆ. ಮೊನ್ನೆ ಸುಮಾರು ನಾಲ್ಕು ದಿವಸಗಳ ಹಿಂದೆ ಕೂಡಲೇ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಹಿರಿಯ ವಕೀಲರನ್ನು ನೇಮಕ ಮಾಡುವಂತೆ, ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಈ ಹಿಂದೆ ಆ ಜಾಗದಲ್ಲಿ ಇದ್ದಂತಹ ಛತ್ರವನ್ನು ಕೆಡವಿ, ಹೊಸ ಛತ್ರವನ್ನು ಕಟ್ಟಬೇಕೆಂದು ಪ್ರಾರಂಭ ಮಾಡಿದ್ದರು, ಅದಕ್ಕೆ ಈಗ ತಡೆಯಾಜ್ಞೆ ಇದೆ. ಕೂಡಲೇ ಆ ತಡೆಯಾಜ್ಞೆಯನ್ನು ತೆರವುಗೊಳಿಸಬೇಕು ಎನ್ನುವುದು, ಹಾಗೆಯೇ ಸದಸ್ಯರಾದ ಮಾನ್ಯ ಯು.ಬಿ.ವೆಂಕಟೇಶ್‌ರವರು ತಿಳಿಸಿರುವಂತೆ, ಒಂದೇ ಕಡೆ ಬಹಳ ವರ್ಷಗಳಿಂದ ಇರುವಂತಹ ಅಧಿಕಾರಿಗಳ ಬಗ್ಗೆ ಗಮನ ಹರಿಸಬೇಕೆಂದು ಹೇಳಿದ್ದಾರೆ. ಅವರ ಸಲಹೆಯನ್ನು ಸಹ ಗಮನದಲ್ಲಿಟ್ಟುಕೊಂಡು, ಅದಕ್ಕೆ ಕ್ರಮವನ್ನು ವಹಿಸುತ್ತೇನೆಂದು ಈ ಸಂದರ್ಭದಲ್ಲಿ ಭರವಸೆಯನ್ನು ಕೊಡುವುದಕ್ಕೆ ಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 477**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಈ ಮಾನವ-ವನ್ಯಪ್ರಾಣಿ ಸಂಘರ್ಷಕ್ಕೆ ಸಂಬಂಧಪಟ್ಟಂತೆ ಕ್ರಮ ಏನಿದೆ; ಈ ಸೌರಶಕ್ತಿ ಬೇಲಿ ನಿರ್ಮಾಣ, ಆನೆ ತಡೆ ಕಂದಕ ನಿರ್ಮಾಣ ಮತ್ತು ರೈತರಿಗೆ ಸೋಲಾರ್ ಬೇಲಿ ನಿರ್ಮಾಣಕ್ಕೆ ಶೇಕಡಾ 50ರಷ್ಟು ಸಹಾಯ ಧನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ, ಇವುಗಳೆಲ್ಲವು ಸಹ ತಾತ್ಕಾಲಿಕ. ಆದರೆ, ಇಲಾಖೆಯಲ್ಲಿ ಹಲವಾರು ಯೋಜನೆಗಳಿವೆ. ಆ ಯೋಜನೆಗಳನ್ನು ಸಕಾಲಿಕವಾಗಿ ಅನುಷ್ಠಾನ ಮಾಡಿದರೆ, ಬಹುಶಃ ಇನ್ನು ಹೆಚ್ಚಿನ ರೀತಿಯಲ್ಲಿ ಈ ಮಾನವ ಮತ್ತು ವನ್ಯಮೃಗಗಳ ತಿಕ್ಕಾಟವನ್ನು ತಪ್ಪಿಸಬಹುದು. ಇದರಲ್ಲಿ ಹಾಸನ ಜಿಲ್ಲೆಯ Bisle Reserve Forest, Kagneri Reserve Forest, Kenchekumri Forest ಗಳ ಅಂಚಿನಲ್ಲಿರುವಂತಹ ಸುಮಾರು 416 ಕುಟುಂಬಗಳು ಈ ಆನೆ ಹಾವಳಿಯನ್ನು ತಡೆಯಲಾರದೆ ಅವರು ತಮ್ಮ ಸುಮಾರು 2500 ಎಕರೆ ಸ್ವಂತ ಜಮೀನನ್ನು ಬಿಟ್ಟುಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅದಕ್ಕೆ ಪರಿಹಾರ ನೀಡುವಂತೆ ಅರಣ್ಯ ಇಲಾಖೆಯನ್ನು ಕೇಳಿಕೊಂಡಿದ್ದಾರೆ. ಅದೇರೀತಿ ಕೊಡಗು ಜಿಲ್ಲೆಯಲ್ಲಿ Jamma Malai Land ಮತ್ತು Coffee Kharab Land ಇದೆ. ಈ ಜಮೀನುಗಳಲ್ಲಿ ಬೆಳೆದಿರುವಂತಹ ಕಾಫಿ ಬೆಳೆಗಳಿಗೆ ಆನೆಗಳು ದಾಳಿ ಮಾಡಿ ಅವುಗಳನ್ನು ನಾಶ ಮಾಡಿವೆ. ಇದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ತಂದಿದೆ. ಈ Compensatory Afforestation Fund Act, 2016 ನಲ್ಲಿ NPV Fund ಅನ್ನು allocation ಮಾಡಿದ್ದಾರೆ. ದಯಮಾಡಿ ಸ್ವಯಂಪ್ರೇರಿತವಾಗಿ ಯಾವ ರೈತರು ಈ ಜಮೀನುಗಳನ್ನು ಕೊಡುತ್ತಾರೆ, ಆ ಜಮೀನುಗಳನ್ನು ಪಡೆದುಕೊಂಡು, Compensatory Forest ಅನ್ನು ಬೆಳೆಸಬೇಕು. ಮತ್ತೆ ಎಲ್ಲೆಲ್ಲಿ ಸಾಧ್ಯವಿದೆ ಅಂತಹ ಕಡೆಗೆ ಆನೆಗಳನ್ನು ಸ್ಥಳಾಂತರ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಸತೀಶ್ ಎಲ್. ಜಾರಕಿಹೊಳಿ:–** ಮಾನ್ಯ ಸಭಾಪತಿಯವರೆ, ಈಗಾಗಲೇ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. ಮಾನವ–ವನ್ಯಪ್ರಾಣಿ ಸಂಘರ್ಷದ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಹೆಚ್ಚಿನ ಸಲಹೆಯನ್ನು ಕೊಟ್ಟರೆ ಖಂಡಿತವಾಗಿ ನಮ್ಮ ಇಲಾಖೆ ಅದನ್ನು ಗಂಭೀರವಾಗಿ ಪರಿಗಣಿಸಿ, ಈ ಸಂಘರ್ಷವನ್ನು ತಪ್ಪಿಸುವಂತಹ ಕೆಲಸವನ್ನು ಮಾಡುತ್ತದೆ.

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್:–** ಮಾನ್ಯ ಸಭಾಪತಿಯವರೆ, ನಾನು ಒಂದು ವಿಷಯವನ್ನು ಕೈಬಿಟ್ಟಿದ್ದೆ. ನಾನು ಸದನದಲ್ಲಿ ಒಂದು ವಿಷಯವನ್ನು ಘೋಷಣೆ ಮಾಡುತ್ತೇನೆ.

**ಸಭಾಪತಿಯವರು:–** ಆಯಿತು, ಘೋಷಣೆ ಮಾಡಿ.

**ಶ್ರೀ ಪಿ.ಟಿ.ಪರಮೇಶ್ವರ ನಾಯ್ಕ್:–** ಮಾನ್ಯ ಸಭಾಪತಿಯವರೆ, ನಮ್ಮ ಹಿರಿಯ ಸದಸ್ಯರಾದಂತಹ ಶ್ರೀ ಹೆಚ್.ಎಂ.ರೇವಣ್ಣನವರು ಹೇಳಿದಂತೆ, ಹಿಂದೆ ಶ್ರೀ ರಾಮಕೃಷ್ಣ ಹೆಗಡೆ ಮತ್ತು ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರದಲ್ಲಿ ಒಂದು ಸಮಿತಿ ಅಸ್ತಿತ್ವದಲ್ಲಿ ಇತ್ತು. ಆದರೆ ಈಗ ಆ ಸಮಿತಿ ರದ್ದಾಗಿದೆ. ಈಗ ಆ ಸಮಿತಿಯನ್ನು ರಚನೆ ಮಾಡುವುದರ ಜೊತೆಗೆ ಈ ಸದನದ ಸದಸ್ಯರ ಒಂದು ತಂಡವನ್ನು ತಿರುಪತಿಗೆ ಕರೆದುಕೊಂಡು ಹೋಗಿ, ಅಲ್ಲಿ ಹೆಚ್ಚಿನ ಸುಧಾರಣೆ ಮಾಡುವುದಕ್ಕೆ ಮಾನ್ಯ ಸದಸ್ಯರ ಸಲಹೆಯನ್ನು ಪಡೆಯುತ್ತೇನೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ, ಮಾನ್ಯ ಸದಸ್ಯರಾದ ಶ್ರೀ ಎಸ್.ರುದ್ರೇಗೌಡರ ಪ್ರಶ್ನೆಗೆ ಉತ್ತರ ನೀಡಲು ಸರ್ಕಾರದವರು ಕಾಲಾವಕಾಶವನ್ನು ಕೇಳಿದ್ದಾರೆ.

**(ಪ್ರಶ್ನೆ ಸಂಖ್ಯೆ:436 + 563)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಈ ಸಂದರ್ಭದಲ್ಲಿ ಮುಖ್ಯವಾಗಿ ನಾನು ಎರಡು ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಬಯಸುತ್ತೇನೆ. 'ಈ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತುದಾರರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಾರಂಭದಲ್ಲಿ ಗುತ್ತಿಗೆ ಆಧಾರದ ಮೇಲೆ ಸಂಚಿತ ವೇತನದ ಮೇಲೆ ಅವರಿಗೆ ವೇತನ ಶ್ರೇಣಿಯನ್ನು ಕೊಡಲಾಗುತ್ತಿತ್ತು. ತದನಂತರ 1996 ರಿಂದ 2003ರವರೆಗೆ ಮೂಲ ವೇತನ, ಡಿ.ಎ. ಮತ್ತು ಇನ್ನಿತರೆ ಸೌಲಭ್ಯಗಳನ್ನು ಕೊಟ್ಟು, ಈಗ ಯಾವುದೇ ಕಾರಣವನ್ನು ನೀಡದೆ ಏಕೆ ವಾಪಸ್ಸು ತೆಗೆದುಕೊಂಡಿದ್ದಾರೆ' ಎಂದು ನಾನು ಪ್ರಶ್ನೆ ಮಾಡಿದ್ದೆ. ಅದಕ್ಕೆ ಅವರು ಬಹಳ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಪ್ರಾಧಿಕಾರದವರು ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳದೆ, ಈ ಮೂಲ ವೇತನ ಶ್ರೇಣಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಸರ್ಕಾರದ ಮತ್ತು ಆರ್ಥಿಕ ಇಲಾಖೆಯ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು. ಅವರು ಅದನ್ನು ಮಾಡದೆ ಇರುವುದಕ್ಕೆ, ತಡೆಹಿಡಿದಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿ ನನ್ನ ಪ್ರಶ್ನೆ ಇಷ್ಟೆ. ಇಲಾಖೆಯವರು ಇಲ್ಲಿ ತಪ್ಪು ಮಾಡಿದ್ದೇವೆಂದು ತಿಳಿದುಕೊಳ್ಳುವುದಕ್ಕೆ ಏಳು ವರ್ಷ ಬೇಕೆ? ಏಕೆಂದರೆ, 1996ರಿಂದ 2003ರವರೆಗೆ ಮೂಲವೇತನ, ಡಿ.ಎ. ಮತ್ತು ಇನ್ನಿತರೆ ಸೌಲಭ್ಯವನ್ನು ಕೊಟ್ಟಿದ್ದಾರೆ. ಆದರೆ, ಅದನ್ನು ತಡೆಹಿಡಿದಿದ್ದಾರೆ. ಇಲಾಖೆಯವರು ಏಕೆ ತಪ್ಪು ಮಾಡಿದರು. ಅಲ್ಲಿಗೆ ಬರುವವರು ಅಧಿಕಾರಿಗಳಾಗಿರುತ್ತಾರೆ. ಸರ್ಕಾರದ ಅನುಮತಿ ತೆಗೆದುಕೊಳ್ಳದೆ ಕೊಡಬಾರದು ಎಂಬುದು ಅವರಿಗೆ ತಿಳುವಳಿಕೆ ಇಲ್ಲವೆ. ಇದನ್ನು ಕೊಟ್ಟಂತಹ ಅಧಿಕಾರಿ ಯಾರು? ಅವರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ? ಇದು ನನ್ನ ಮೂಲ ಪ್ರಶ್ನೆ. ಇದು ಸಾಮಾನ್ಯ ಜ್ಞಾನ. ಈಗ ಯಾವುದೋ ಒಂದು ವೇತನ ಶ್ರೇಣಿಯನ್ನು ಕೊಡಬೇಕಾದರೆ, ಪ್ರಾಧಿಕಾರದವರು ಸರ್ಕಾರದ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು. ಸರ್ಕಾರದ ಅನುಮತಿ ಪಡೆದುಕೊಳ್ಳದೆ ಹೇಗೆ ಕೊಟ್ಟರು? ಎಂಬುದು ನನ್ನ ಮೊದಲ ಪ್ರಶ್ನೆ.

ಎರಡನೆಯದಾಗಿ ಅಲ್ಲಿ ಸುಮಾರು 25-30 ವರ್ಷಗಳಿಂದ ತರಬೇತುದಾರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಅವರಿಗೆ ಅನ್ಯಾಯವಾಗಿದೆ. ಆದುದರಿಂದ ಅವರನ್ನು ಖಾಯಂಗೊಳಿಸಬೇಕೆಂದು ಬಹಳ ಸಲ ಸದನದಲ್ಲಿ ಇದರ ಬಗ್ಗೆ ನಿರಂತರವಾಗಿ ಚರ್ಚೆಯಾಗಿದೆ. ಇದು ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲೂ ಸಹ ಪ್ರಶ್ನೆಯಾಗಿತ್ತು. ಈ ಹಿಂದೆ ಡಾ॥ಜಿ.ಪರಮೇಶ್ವರ್‌ರವರು ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದರು. ಅಂದರೆ, ಸಿ ಆಂಡ್ ಆರ್ ನಿಯಮಕ್ಕೆ ತಿದ್ದುಪಡಿ ತಂದು, ನಾನು ಇಲ್ಲಿ ಅದನ್ನು ಓದುತ್ತೇನೆ; 'ಮಾನ್ಯ ಸದಸ್ಯರುಗಳಿಗೆ ಒಂದು ಆಶ್ವಾಸನೆಯನ್ನು ಕೊಡಬಯಸುತ್ತೇನೆ. ಆದಷ್ಟು ಶೀಘ್ರವಾಗಿ ಸಿ ಆಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಿ, ತರಬೇತುದಾರರಿಗೆ ಒಂದು ಕಾಯಕಲ್ಪ ಕಲ್ಪಿಸಿಕೊಡುತ್ತೇನೆಂದು ಭರವಸೆ ಕೊಟ್ಟಿದ್ದರು'. ಅದಕ್ಕೆ ಇವತ್ತು ನಾನು ಮಾನ್ಯ ಸಚಿವರಿಗೆ ಪ್ರಶ್ನೆ ಮಾಡುತ್ತೇನೆ. ಮಾನ್ಯ ಪರಮೇಶ್ವರ್‌ರವರು ಬೆಳಗಾವಿ ಅಧಿವೇಶನದಲ್ಲಿ ಸದನಕ್ಕೆ ಏನು ಭರವಸೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದರು. ಅದಕ್ಕೆ ಮಾನ್ಯ ಸಚಿವರು stick on ಆಗಿದ್ದಾರೆಯೇ? ಅದಕ್ಕೆ ಬದ್ಧರಾಗಿದ್ದಾರೆಯೇ? ಎಂಬುದನ್ನು ಸ್ಪಷ್ಟಪಡಿಸಬೇಕು.

**ಸಭಾಪತಿಯವರು:–** ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಇಬ್ಬರು ಸದಸ್ಯರು ಪ್ರಶ್ನೆ ಕೇಳಿರುವುದರಿಂದ ಡಾ॥ತೇಜಸ್ವಿನಿ ಗೌಡರವರು ಸಹ ಈಗ ಉಪ ಪ್ರಶ್ನೆಗಳನ್ನು ಕೇಳಬಹುದಾಗಿದೆ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ, ನಾನು ಇನ್ನೂ ಪ್ರಶ್ನೆಯನ್ನು ಕೇಳಿಲ್ಲ. ಈಗ ಮಾನ್ಯ ಪರಮೇಶ್ವರ್‌ರವರು ಸಿ ಆಂಡ್ ಆರ್ ನಿಯಮಕ್ಕೆ ತಿದ್ದುಪಡಿ ಮಾಡಿ, ತರಬೇತುದಾರರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದರು. ಆದರೆ, ಇವತ್ತು ಇಲ್ಲಿ ಈ ರೀತಿ ಹೇಳಿದ್ದಾರೆ; 'ಇದು ಸುಪ್ರೀಂ ಕೋರ್ಟ್ ಪ್ರಕರಣ, ಇದನ್ನು ಮಾಡುವುದಕ್ಕೆ ಬರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ'. ಅದಕ್ಕೆ ಸ್ಪಷ್ಟತೆ ಏನೆಂದು ಹೇಳಬೇಕು. ಏಕೆಂದರೆ, ಇದೇ ಸರ್ಕಾರ ಈ ಎರಡು ಅಂಶಗಳನ್ನು ಹೇಳಿದೆ. ಆದ್ದರಿಂದ ಮಾನ್ಯ ಪರಮೇಶ್ವರ್‌ರವರು ಹೇಳಿರುವುದನ್ನು ನೀವು ಒಪ್ಪಿಕೊಳ್ಳುತ್ತೀರೋ? ಅದಕ್ಕೆ ಬದ್ಧರಾಗಿದ್ದೀರೋ, ಇಲ್ಲವೋ? ಈಗ ಮುಖ್ಯವಾಗಿ ಕೇಳುವುದೇನೆಂದರೆ, ಸಿ ಆಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಿ ಕಳುಹಿಸುತ್ತಾರೆಂದು ತಿಳಿದುಕೊಂಡು, ಅಪರ ಮುಖ್ಯ ಕಾರ್ಯದರ್ಶಿಯವರು, ಆಯುಕ್ತರಿಗೆ ಒಂದಲ್ಲ, ಎರಡಲ್ಲ ಸುಮಾರು ನಾಲ್ಕು ಪತ್ರಗಳನ್ನು ಬರೆದಿದ್ದಾರೆ. ನಾನು ಈ ವಿಷಯವನ್ನು ಏತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ಮಾನ್ಯ ಸಚಿವರು ಅಧಿಕಾರಿಗಳನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಸಿ ಆಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಿ ಇಲಾಖೆಗೆ ಕಳುಹಿಸಿ ಎಂದು ನಾಲ್ಕು ಬಾರಿ ಪತ್ರ ಬರೆದಿದ್ದಾರೆ. ಆದರೆ, ಆಯುಕ್ತರು ಸಿ ಆಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಿ ಇಲ್ಲಿಯವರೆಗೂ ಏಕೆ ಕಳುಹಿಸಿಲ್ಲ? 2018ರಿಂದ ಇಲ್ಲಿಯವರೆಗೂ ನಾಲ್ಕು ಪತ್ರಗಳನ್ನು ಬರೆಯಲಾಗಿದೆ. ಆದರೆ, ಮಾನ್ಯ ಪರಮೇಶ್ವರ್‌ರವರು ಹೇಳಿದ್ದರು, ಸಿ ಆಂಡ್ ಆರ್ ನಿಯಮವನ್ನು ತಿದ್ದುಪಡಿ ಮಾಡಿ ಅವರನ್ನು ಖಾಯಂಗೊಳಿಸುತ್ತೇವೆಂದು. ಈಗ ನಾಲ್ಕು ಪತ್ರಗಳನ್ನು ಬರೆದರೂ ಕೂಡ ಆಯುಕ್ತರು ಇನ್ನು ಸಿ ಆಂಡ್ ಆರ್ ನಿಯಮವನ್ನು ಏಕೆ ಮಾಡಿಲ್ಲ? ಇದರ ಜೊತೆಗೆ ಇನ್ನೂ ಒಂದು ಬಹಳ ಮಹತ್ವವಾದದ್ದು ಮತ್ತು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ್ದು ಕೂಡ ಸಿ ಆಂಡ್ ಆರ್ ನಿಯಮವನ್ನು ಮಾಡಬೇಕೆಂದು ದಿನಾಂಕ 11-11-2010ರಲ್ಲಿ ಹೈಕೋರ್ಟ್‌ನವರು ಒಂದು decision ಕೊಟ್ಟಿದ್ದಾರೆ. ಅದು ಏನೆಂದರೆ "...The Government therefore, shall not delay further in according approval to the C & R rules in accordance with Law and the Government shall take necessary steps in this regard for

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

bringing C & R rules into force at the earliest and shall complete this exercise within six months..."

**(053) 13–02–2019 (01–00) ಎಲ್‌ಎಲ್/ಬಿಎನ್‌ಎಸ್**

**ಶ್ರೀ ಎಸ್.ವ್ಹಿ. ಸಂಕನೂರ(ಮುಂದು):–**

ನಾನು ಹೇಳುವುದು ಇಷ್ಟೇ, ಪ್ರಾಧಿಕಾರಕ್ಕೆ C & R (Cadre & Recruitment) Rules ಮಾಡಬೇಕೆಂದು ಕೋರ್ಟ್ ತೀರ್ಮಾನ ಕೊಟ್ಟರೂ ಸಹ ಅದನ್ನು ಮಾಡಿರುವುದಿಲ್ಲ. ಅದು Contempt of Court ಆಯಿತು. ಆಗಿನ ಪ್ರಧಾನ ಕಾರ್ಯದರ್ಶಿಯವರಿಗೆ ಅರೆಸ್ಟ್ ವಾರೆಂಟ್ ಆಯಿತು. ಇಷ್ಟೆಲ್ಲಾ ಆದಾಗ್ಯೂ ಕೂಡ ಆ ಪ್ರಾಧಿಕಾರದಲ್ಲಿ ಯಾವ್ಯಾವ ಅಧಿಕಾರಿಗಳು ಕೆಲಸ ಮಾಡುತ್ತಾರೆ, ಯಾವ್ಯಾವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ? ಅಲ್ಲಿ ಶ್ರೀ ಜಿತೇಂದ್ರ ಎಂಬ ಅಧಿಕಾರಿ ಕೆಲಸ ಮಾಡುತ್ತಿದ್ದಾರೆ, ಅವರು ಸರ್ಕಾರಕ್ಕೆ misguide ಮಾಡುತ್ತಿದ್ದಾರೆ. ಕೋರ್ಟ್ ತೀರ್ಮಾನ ಕೊಟ್ಟರೂ ಸಹ ಇವರು C & R Rules amendment ಮಾಡುತ್ತಿಲ್ಲ ಮತ್ತು ಸರ್ಕಾರ 4 ಬಾರಿ ಪತ್ರ ಕೊಟ್ಟರೂ ಸಹ amendment ಮಾಡುತ್ತಿಲ್ಲ. ಅದಕ್ಕೆ ಮಾನ್ಯ ಸಚಿವರು ಇದನ್ನು ಚಾಲೆಂಜ್ ಆಗಿ ಸ್ವೀಕಾರ ಮಾಡಬೇಕು, ಇದನ್ನು ಚಾಲೆಂಜ್ ಆಗಿ ಸ್ವೀಕಾರ ಮಾಡುತ್ತಾರೋ ಇಲ್ಲವೋ? ಏಕೆಂದರೆ, ಈ ವಿಷಯದ ಬಗ್ಗೆ ಯಾವಾಗಲೂ ಚರ್ಚೆ ಮಾಡುವುದು ಬೇಡ. ಏಕೆಂದರೆ, ಈ ಬಗ್ಗೆ ನಮಗೆ ನಾಚಿಕೆ ಬರುತ್ತಿದೆ. ಆದುದರಿಂದ, ಇದನ್ನು ಮಾಡುವುದಕ್ಕಾಗುತ್ತದೆಯೇ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಲಿ.

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಒಂದು ಅಂಶ ಏನೆಂದರೆ, ಕರ್ನಾಟಕ ರಾಜ್ಯದ ಕ್ರೀಡಾ ಸಾಧಕರನ್ನು ಪ್ರೋತ್ಸಾಹ ಮಾಡುವುದಕ್ಕೆ ಯಾವ ರೀತಿಯ ಕ್ರಮ ವಹಿಸಲಾಗಿದೆ, ಕ್ರೀಡಾ ತರಬೇತಿದಾರರ ಖಾಯಂ ಹುದ್ದೆಗಳನ್ನು ತುಂಬಲಾಗಿದೆಯೇ, ಎಷ್ಟು ಹುದ್ದೆ ಖಾಲಿ ಇವೆ ಮತ್ತು ಹುದ್ದೆ ತುಂಬದೇ ವಿಳಂಬ ಆಗಿರುವುದಕ್ಕೆ ಕಾರಣ ಏನೆಂದು ಪ್ರಶ್ನೆ ಕೇಳಿದ್ದೆನು. ತುಂಬಾ ಆತಂಕಗೊಳ್ಳುವ ಉತ್ತರವೆಂದು ಹೇಳಿದರೆ, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತಿದಾರರ ಹುದ್ದೆ ಸೇರಿದಂತೆ ಯಾವುದೇ ಖಾಯಂ ಹುದ್ದೆ ಮಂಜೂರಾಗಿರುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ವಾಪ್ರಯು 121 ಯುಸೇಕ್ರೀ 1992, ದಿನಾಂಕ:15.05.1995ರ ಆದೇಶದನ್ವಯ ಒಟ್ಟು 84 ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ. 32 ತರಬೇತುದಾರರು ಮತ್ತು 20 ಕಿರಿಯ ತರಬೇತುದಾರರನ್ನು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ತೆಗೆದುಕೊಂಡಿದ್ದಾರೆ. 1995 ರ ವಿಷಯವನ್ನು ನಾವು ಮಾತನಾಡುತ್ತಿದ್ದೇವೆ. ಇವೊತ್ತಿನ ದಿವಸ ಕ್ರೀಡೆ ತಾಂತ್ರಿಕವಾಗಿ ಬಹಳ ಮುಂದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೋಗಿದೆ. ನಮ್ಮ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಇತ್ತೀಚಿನ ದಿನಗಳಲ್ಲಿ ಅತ್ಯಂತ ವೈಜ್ಞಾನಿಕವಾದಂತಹ ತಾಂತ್ರಿಕತೆಯಲ್ಲಿ ತರಬೇತಿ ಸಿಗುತ್ತಿಲ್ಲ. ತರಬೇತುದಾರರು ಇಲ್ಲವೆಂದರೆ ಕ್ರೀಡಾಪಟುಗಳು ಯಾವ ರೀತಿಯ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ? ದಯವಿಟ್ಟು, ಈ ಒಂದು ನಿರ್ಲಕ್ಷ್ಯಕ್ಕೆ ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಮಾನ್ಯ ಸಚಿವರಿಗೆ ನಾನು ಒಂದು ಮಾಹಿತಿ ಹೇಳಬೇಕು.

**ಸಭಾಪತಿಯವರು:-** ತಮ್ಮ ಮಾಹಿತಿಯನ್ನು ಸಚಿವರು ಉತ್ತರ ಕೊಟ್ಟ ನಂತರ ಹೇಳಿ. ಮೊದಲು ಸಚಿವರು ತಮ್ಮ ಉತ್ತರ ನೀಡಲಿ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಾನು ನೀಡುವ ಮಾಹಿತಿಯಿಂದ ಮಾನ್ಯ ಸಚಿವರಿಗೆ ಉತ್ತರ ನೀಡುವುದಕ್ಕೆ ಅನುಕೂಲವಾಗುತ್ತದೆ.

**ಸಭಾಪತಿಯವರು:-** ಆ ರೀತಿ ಹೇಳುವುದಕ್ಕೆ ಆಗುವುದಿಲ್ಲ. ನಂತರ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಕಳೆದ ಸದನದಲ್ಲಿ ಮಾತನಾಡಿದ್ದೆನು.

**ಸಭಾಪತಿಯವರು:-** ಆಯಿತು. ತಮಗೆ ನಂತರ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕ್ರೀಡಾ ತರಬೇತುದಾರರಿಗೆ Basic Pay, T.A. (Travelling Allowance), D.A. (Daily Allowance) ಯನ್ನು 7ವರ್ಷ 8ವರ್ಷ ಆದ ಮೇಲೆ ಅವರಿಗೆ ಏತಕ್ಕೆ ಕಡಿತಗೊಳಿಸಿದ್ದಾರೆಂದು ಕೇಳಿದ್ದಾರೆ. ಇದು ನಿಜವಾಗಿಯೂ Sport Authority of Karnataka (S.A.K.) ನಲ್ಲಿ ನಡೆದಿದ್ದು. ಅವರು ಏನು ಮಾಡಿದ್ದಾರೆಂದರೆ, without permission of the Government ಅವರನ್ನು ನೇಮಕಾತಿ ಮಾಡಿಕೊಂಡು ಅವೊತ್ತಿನಿಂದ 7 ವರ್ಷ ಕೊಟ್ಟಿದ್ದಾರೆ. ಆ ನಂತರ ಅವರಿಗೆ shortage of money ಆದಾಗ ಅವರು ಈ ರೀತಿ ನಾವು ತರಬೇತುದಾರರನ್ನು ನೇಮಕ ಮಾಡಿದ್ದೇವೆಂದು, ಈ ರೀತಿ ಫಂಡ್ ಬೇಕಿದೆ ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆಗ ಸರ್ಕಾರದಿಂದ ಯಾವ ಆದೇಶ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀಡಿದ್ದಾರೆಂದರೆ, ಗುತ್ತಿಗೆ ಆಧಾರದ ಮೇರೆಗೆ ಯಾರು ಕೆಲಸ ಮಾಡುತ್ತಾರೆ ಅವರಿಗೆ ಈ ಸೌಕರ್ಯಗಳು ಇಲ್ಲವೆಂದು ಸರ್ಕಾರದಿಂದ ಆದೇಶವಾಗಿದೆ. ಆ ದಿನದಿಂದ ಈ ತರಬೇತುದಾರರಿಗೆ ಸೌಕರ್ಯಗಳು ಸಿಕ್ಕಿರುವುದಿಲ್ಲ. ಆ ಆಧಾರದ ಮೇರೆಗೆ ಮೊದಲನೇ ಪ್ರಶ್ನೆ...

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಇದೊಂದು common sense...

**ಸಭಾಪತಿಯವರು:–** ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡುವುದು ಬೇಡವೇ?

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಆದೇಶ ಕೊಡುವವರೆಗೂ ಅದನ್ನು ಕೊಡಬಾರದೆಂದು ಅವರಿಗೆ ಬುದ್ಧಿ ಇರುವುದಿಲ್ಲವೇ? ಅವರ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದಾರೆ?

**ಶ್ರೀ ರಹೀಂ ಖಾನ್:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ತಕ್ಷಣ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಂಡು ಪುನಃ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ. ಎರಡನೆಯದಾಗಿ, ಮಾನ್ಯ ಸದಸ್ಯರು ಕೇಳಿರುವಂತೆ, ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸುಮಾರು ವರ್ಷಗಳಿಂದ ತರಬೇತುದಾರರು ಇರುವುದಿಲ್ಲ... ನಿಜವಾಗಲೂ 20 ವರ್ಷ 30 ವರ್ಷಗಳಿಂದ ಒಳ್ಳೆಯ ರೀತಿಯಲ್ಲಿ ಶೇಕಡ 95ರಷ್ಟು ತರಬೇತುದಾರರು ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ ಇದೆ. ಆದರೂ initially, ಈ ತರಬೇತುದಾರರನ್ನು ಗುತ್ತಿಗೆ ಆಧಾರ ನೌಕರರೆಂದು ತೆಗೆದುಕೊಂಡಿದ್ದಾರೆ. ಪರ್ಮನೆಂಟ್ ಪೋಸ್ಟ್ ಅಲ್ಲಿ ಇರುವುದಿಲ್ಲ. ಆ ಪರ್ಮನೆಂಟ್ ಪೋಸ್ಟ್ ಇಲ್ಲದೇ ಇರುವ ಸಲುವಾಗಿ ಅದು ವಿಳಂಬವಾಗಿದೆ. ನಂತರ ಅವರು ಕೋರ್ಟ್‌ಗೆ ಹೋಗಿರುತ್ತಾರೆ. ಕೋರ್ಟ್‌ನಲ್ಲಿ ಎರಡು ತೀರ್ಮಾನಗಳಾಗಿವೆ. ಒಂದರಲ್ಲಿ ಈ ತರಬೇತುದಾರರಿಗೆ ತಕ್ಷಣ C & R Rules ಮಾಡಿ ಅವರನ್ನು ನೇಮಕ ಮಾಡಿಕೊಳ್ಳಿ ಎಂದು ಆಗಿದೆ. ನಂತರ ಮತ್ತೊಂದು ಜಡ್ಜ್‌ಮೆಂಟ್ ಆಗಿದೆ. ಅದರಲ್ಲಿ ಸರ್ಕಾರದಲ್ಲಿ ಪರ್ಮನೆಂಟ್ ಪೋಸ್ಟ್ ಇಲ್ಲ. ಆ ಪರ್ಮನೆಂಟ್ ಪೋಸ್ಟ್ ಬಗ್ಗೆ Government can take decision, ಎಂದು ಆದೇಶ ನೀಡಿರುತ್ತದೆ. ಅದರಿಂದಾಗಿ, ಇದು ವಿಳಂಬವಾಗಿದ್ದು, ಈಗಾಗಲೇ ಈ ಬಗ್ಗೆ ಉತ್ತರ ಕೊಟ್ಟಿದ್ದೇವೆ. ಇದರ ಬಗ್ಗೆ ಡಾ॥ ಜಿ. ಪರಮೇಶ್ವರ್ ಸಾಹೇಬರು C & R Rules ತಕ್ಷಣ ಮಾಡುತ್ತೇವೆಂದು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ನಾವು ಅದರ ಬಗ್ಗೆ ಈಗಾಗಲೇ ಮೂರು ಕಡೆ ಫೈಲ್‌ಗಳನ್ನು ಕಳುಹಿಸಿಬಿಟ್ಟಿದ್ದೇವೆ. ಒಂದು ಸಿ.ಆ.ಸು. ಇಲಾಖೆಯಲ್ಲಿ, ಮತ್ತೊಂದು ಕಾನೂನು ಇಲಾಖೆಯಲ್ಲಿ ಇನ್ನೊಂದು ಫೈಲ್ ಅನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ. ಅದನ್ನು ನಾವು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

follow up ಮಾಡಿ ಫೈಲ್ ಬಂದ ನಂತರ, immediately, we will take a decision.

(ಗೊಂದಲ)

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಮಗೆ ಉತ್ತರ ಸಿಕ್ಕಿರುವುದಿಲ್ಲ. ಆ ತರಬೇತುದಾರರನ್ನು ಖಾಯಂಗೊಳಿಸುತ್ತಾರೋ ಇಲ್ಲವೋ ಎಂಬ ಉತ್ತರ ನೀಡಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಆದರೆ, ಅವರ ವಿರುದ್ಧ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾರೆಂದು ಉತ್ತರ ನೀಡಬೇಕು.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಎಷ್ಟು ದಿನಗಳಲ್ಲಿ ಈ ತರಬೇತುದಾರರನ್ನು ಖಾಯಂಗೊಳಿಸುತ್ತಾರೆಂದು ನಮಗೆ ಭರವಸೆ ಕೊಡಬೇಕು.

(ಗೊಂದಲ)

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಪ್ರಶ್ನೆ ಮಾಡಿದ್ದೆನು. ಶ್ರೀ ಹೆಚ್.ಎಂ. ರೇವಣ್ಣ ನವರು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಸರ್ ಕೂಡ ನನ್ನ ಜೊತೆಗೆ ದನಿಗೂಡಿಸಿದ್ದರು. ಆಗ ಸನ್ಮಾನ್ಯ ಉಪಮುಖ್ಯಮಂತ್ರಿಗಳಾಗಿರುವ ಡಾ॥ ಜಿ. ಪರಮೇಶ್ವರ್ ಸಾಹೇಬರು ನಾವು C & R Rules ಮಾಡಿ ತರಬೇತುದಾರರನ್ನು ಸಕ್ರಮಾತಿಗೊಳಿಸುವುದಕ್ಕೆ ಕ್ರಮ ವಹಿಸುತ್ತೇವೆಂದು ಉತ್ತರ ನೀಡಿದ್ದರು. ನಂತರ ಭರವಸೆಗಳ ಸಮಿತಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು, ಆಯುಕ್ತರು ಮತ್ತು ತಮ್ಮ ಇಲಾಖೆಯಲ್ಲಿ deputation ಮೇರೆಗೆ ಕಾರ್ಯನಿರ್ವಹಿಸುತ್ತಿರುವಂತಹ ಒಬ್ಬ ವ್ಯಕ್ತಿ ಸಮಿತಿ ಸಭೆಗೆ ಹಾಜರಾಗಿದ್ದರು. ಮಾನ್ಯ ಸಚಿವರು ಮೊದಲು ಒಂದು ಸ್ಪಷ್ಟವಾದಂತಹ political decision ತೆಗೆದುಕೊಳ್ಳಬೇಕು. ಇಲ್ಲಿ ಏನಾಗಿದೆಯೆಂದರೆ, ಈ ವರ್ಷ ಸುಮಾರು 16 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಸರ್ಕಾರ ಅನುದಾನ ಕೊಟ್ಟಿದ್ದರೂ ಸಹ ಒಂದೂ ಮಂಜೂರಾದ ಹುದ್ದೆ ಇರುವುದಿಲ್ಲ. 16 ಕೋಟಿಗೂ ಹೆಚ್ಚು ಹಣ ಪ್ರತಿ ವರ್ಷ ಹೋಗುತ್ತಿದೆ. ಒಂದೂ ಸಹ ಮಂಜೂರಾದ ಹುದ್ದೆ ಇರುವುದಿಲ್ಲ ಮತ್ತು ಒಬ್ಬರೂ ಸಿಬ್ಬಂದಿ ಇರುವುದಿಲ್ಲ. ಅಲ್ಲಿ ಇರುವವರೆಲ್ಲಾ deputation ಮೇಲೆ ಇದ್ದಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಎರಡನೆಯದಾಗಿ, ಈ ಸದನದಲ್ಲಿ ಪ್ರಶ್ನೆ ಮಾಡಿದ ನಂತರ ಈ ವಿಷಯದ ಬಗ್ಗೆ ಮಾನ್ಯ ಹೊರಟ್ಟಿ ಸರ್ ರವರು ಸಹ ಬಹಳ ಗಂಭೀರವಾಗಿದ್ದಾರೆ. ಆದುದರಿಂದ, ನಾನು ಈ ವಿಷಯವನ್ನು ಹಕ್ಕುಚ್ಯುತಿಗೆ ಕಳುಹಿಸಿಕೊಡುತ್ತೇನೆ. ಈ ಬಗ್ಗೆ ಸದನದಲ್ಲಿ ಪ್ರಶ್ನೆಯಾದ ನಂತರ ನಿಮ್ಮ ಹುದ್ದೆ ಯಾವ ರೀತಿ ಸಕ್ರಮಾತಿ ಆಗುತ್ತದೆ ಅದನ್ನು ನಾನು ನೋಡುತ್ತೇವೆ ಎಂದು ಅಲ್ಲಿ deputation ಮೇಲೆ ಕಾರ್ಯನಿರ್ವಹಿಸುತ್ತಿರುವಂತಹ ಅಧಿಕಾರಿ ಹೇಳುತ್ತಾರೆ. ಅದರಿಂದಾಗಿ, ಅಲ್ಲಿ ಕೆಲಸ ಮಾಡುವಂತ್ಹಹ ತರಬೇತುದಾರರನ್ನು ಬೈದು, ಆಚೆ ಈಚೆ ಹೊರಗೆ ಕಳುಹಿಸುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಆ ಕಾರಣದಿಂದ ಈ ಉತ್ತರ ಕಂಪ್ಲೀಟ್ ಆಗಿ ಯು ಟರ್ನ್ ಆಗಿದೆ. ಕಳೆದ ಬಾರಿ ಏನು ಉತ್ತರ ಕೊಟ್ಟಿದ್ದಾರೆ ಅದಕ್ಕೆ ವ್ಯತಿರಿಕ್ತವಾದಂತಹ ಉತ್ತರ ಮಾನ್ಯ ಸಚಿವರಿಂದ ಕೊಡಿಸುವ ಪ್ರಯತ್ನ ಮಾಡಿದ್ದಾರೆ. ಆದುದರಿಂದ, ಅವರ ವಿರುದ್ಧ ಮೊದಲು ಕ್ರಮ ತೆಗೆದುಕೊಳ್ಳಬೇಕು. ತರಬೇತುದಾರರನ್ನು ಸಕ್ರಮಾತಿಗೊಳಿಸುವುದು ನಂತರದ ವಿಷಯ. ಆದರೆ, ಈ ಸದನದಲ್ಲಿ ಪ್ರಸ್ತಾಪವಾದಂತಹ ವಿಷಯದ ಬಗ್ಗೆ ಈ ರೀತಿ ಆಗುತ್ತದೆಯೆಂದರೆ ಇದನ್ನು ಸದನ ಬಹಳ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ನಾವು ಭರವಸೆಗಳ ಸಮಿತಿ ಸಭೆಯ ನಡವಳಿಕೆಯನ್ನು ಮತ್ತು ಕಳೆದ ಬಾರಿಯ ಅಧಿವೇಶನದ ನಡವಳಿಕೆಯನ್ನು ಕೊಡುತ್ತೇವೆ. ಯಾವುದೇ ಪರಿಸ್ಥಿತಿಯಲ್ಲಿ ಈ ಕೆಲಸ ಆಗದೇ ಇರುವ ರೀತಿ ನೋಡಿಕೊಳ್ಳುವಲ್ಲಿ ಹಿತಾಸಕ್ತಿ ಇದೆ. ಇದು ಸರಿ ಹೋಗಬೇಕೆಂದರೆ, ಆ ಇಲಾಖೆಯಲ್ಲಿ deputation ಮೇಲೆ ಇರುವಂತಹ ವ್ಯಕ್ತಿಯನ್ನು ಮೊದಲು ಹೊರಗೆ ಹಾಕಬೇಕು. ಹಲವಾರು ವರ್ಷಗಳಿಂದ ಅಲ್ಲಿನ ಪಟ್ಟಾಭದ್ರ ಹಿತಾಸಕ್ತಿಯಾಗಿ 16.5 ಕೋಟಿ ರೂಪಾಯಿ ಅನುದಾನ ನೀಡಿದ್ದರೂ ಸಹ ಒಂದೂ ಮಂಜೂರಾದ ಹುದ್ದೆ ಇರುವುದಿಲ್ಲ. ಹುದ್ದೆ ಸೃಷ್ಟಿ ಮಾಡಬೇಕು. ಆದರೆ, C & R Rules ಕಳುಹಿಸಿಬೇಕಾದರೆ, post approve ಮಾಡಬೇಕಾದರೆ ಅನಗತ್ಯವಾಗಿ 350 ಕ್ಕೂ ಹೆಚ್ಚು ಹುದ್ದೆಗಳು ಬೇಕೆಂದು ಆರ್ಥಿಕ ಇಲಾಖೆಗೆ ಕಳುಹಿಸುತ್ತಾರೆ. ಅಂದರೆ, ಒಂದೂ ಹುದ್ದೆ ಮಂಜೂರಾಗಬಾರದು, ಇದೇ ವ್ಯವಸ್ಥೆ ಮುಂದುವರೆಯಬೇಕು. 16.5 ಕೋಟಿ ರೂಪಾಯಿ ಹಣವನ್ನು ತಮಗೆ ಯಾರಿಗೆ ಬೇಕೋ ಅವರಿಗೆ ಹಂಚಿಕೊಂಡಿದ್ದಾರೆ. ಇದರಲ್ಲಿ ಬಹಳ ದೊಡ್ಡ ಹಗರಣ ಇದೆ. ಭರವಸೆಗಳ ಸಮಿತಿಯಲ್ಲಿ ಕಳೆದ ಹತ್ತು ವರ್ಷದ ಮಾಹಿತಿಯನ್ನು ಕೇಳಿದ್ದೇವೆ. ಇದೊಂದು ಬಹಳ ಗಂಭೀರವಾದಂತಹ ವಿಷಯವಾಗಿ ತಾವು ಪರಿಗಣಿಸಬೇಕು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬೇಕು ಅಷ್ಟೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಬಹಳ ಒಳ್ಳೆಯ ಪ್ರಶ್ನೆಯನ್ನು ಮಾನ್ಯ ಎಸ್.ವ್ಹಿ. ಸಂಕನೂರ ಸಾಹೇಬರು ಕೇಳಿದ್ದಾರೆ. ನಾನೊಬ್ಬ ಕ್ರೀಡಾಪಟುವಾಗಿ, ಕ್ರೀಡಾಪಟುಗಳಿಗೆ ಮತ್ತು ತರಬೇತುದಾರರಿಗೆ ಏನೇನು ಸಮಸ್ಯೆಗಳು ಇವೆ ಆ ನೋವು ನನಗೆ ಗೊತ್ತಿದೆ. ಸರ್ಕಾರ ನನ್ನ ಪ್ರಕಾರ ಇದಕ್ಕೆ ಒಂದು ಕ್ರೀಡಾನೀತಿಯನ್ನು, ಒಂದು ಪಾಲಿಸಿಯನ್ನು ತರಬೇಕು. ತರಬೇತುದಾರರು ಇಷ್ಟು ವರ್ಷ ಕೆಲಸ ಮಾಡುತ್ತಾರೆ, ಆ ಕೆಲಸ ಮಾಡುವಂತಹ ತರಬೇತುದಾರರನ್ನು ಖಾಯಂಗೊಳಿಸುವುದಿಲ್ಲ. ಅವರಿಗೆ ಬೇರೆ ಕಡೆ ಎಲ್ಲಿಯೂ ಅವಕಾಶ ಸಿಗುವುದಿಲ್ಲ. ಈ ರೀತಿಯ ಗಂಭೀರವಾದಂತಹ ಪರಿಸ್ಥಿತಿಯನ್ನು ಇವೊತ್ತಿನ ದಿವಸ ಕ್ರೀಡಾಪಟುಗಳಲ್ಲಿ ನಾವು ನೋಡುತ್ತಿದ್ದೇವೆ. ಇವೊತ್ತಿನ ಆಧುನಿಕ ಯುಗದಲ್ಲಿ ಕ್ರೀಡಾಪಟುಗಳಿಗೆ ಪ್ರೋತ್ಸಾಹ ಕೊಡಬೇಕು. ಇಡೀ ಅಂತರರಾಷ್ಟ್ರೀಯ ಮಟ್ಟದಲ್ಲಿ ಇವೊತ್ತಿನ ದಿವಸ ಕ್ರೀಡಾಪಟುಗಳನ್ನು, ಕ್ರೀಡೆಗಳನ್ನು ಮಾಧ್ಯಮದ ಮುಖಾಂತರ ನಾವು ನೋಡುತ್ತೇವೆ. ಈ ಸಮಯದಲ್ಲಿ ಸರ್ಕಾರ ಇದಕ್ಕೆ ಒಂದು ಕ್ರೀಡಾ ನೀತಿ ತರಬೇಕು. ಇದರ ಜೊತೆಗೆ, ಮೊದಲು ಕ್ರೀಡಾಪಟುಗಳನ್ನು ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ಹಲವಾರು ಬಾರಿ ನೇರ ನೇಮಕಾತಿ ಮಾಡುತ್ತಿದ್ದರು. ಆದರೆ, ನೇರ ನೇಮಕಾತಿ ಮಾಡುವುದನ್ನು ಸಹ ಸರ್ಕಾರ ಈಗ ನಿಲ್ಲಿಸಿದೆ. ಬ್ಯಾಂಕ್‌ಗಳಲ್ಲಿಯೂ ನಿಲ್ಲಿಸಿದೆ. ಇದಕ್ಕೆ ಸರ್ಕಾರ ತಕ್ಷಣ ಒಂದು ಕ್ರೀಡಾ ನೀತಿಯನ್ನು ತರಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಇದರಲ್ಲಿ ಸಮಸ್ಯೆ ಏನಿದೆ ಅದಕ್ಕೆ ಪರಿಹಾರ ಕೊಡಲು C & R Rules ಮಾಡುವುದಕ್ಕೆ ಬಹಳ ತ್ವರಿತ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಇದು ಆಗದೇ ಇರುವುದು ತರಬೇತುದಾರರಿಗೆ ಮತ್ತು ಕ್ರೀಡಾಪಟುಗಳಿಗೆ ಬಹಳ ನೋವಿನ ಸಂಗತಿಯಾಗಿದೆ. ನಾವೆಲ್ಲಾ ಕ್ರೀಡೆಗಳನ್ನು ಸಾಕಷ್ಟು ಪ್ರಾಕ್ಟೀಸ್ ಮಾಡುತ್ತೇವೆ. ಅದರ ಜೊತೆಗೆ ನಮಗೆ ತರಬೇತುದಾರರು ಸಿಗಲಿಲ್ಲವೆಂದರೆ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇದು ಬಹಳ ನೋವಿನ ಸಂಗತಿಯಾಗಿದೆ. ಆದುದರಿಂದ, ಈ ಸಮಸ್ಯೆಯನ್ನು ಆದಷ್ಟು ಬೇಗ ಇತ್ಯರ್ಥ ಮಾಡಬೇಕು. ಮಾನ್ಯ ಎಸ್.ವ್ಹಿ. ಸಂಕನೂರ ಸಾಹೇಬರು ಹೇಳಿರುವ ವಿಷಯಗಳ ಬಗ್ಗೆ ಸರ್ಕಾರ ಗಂಭೀರವಾದಂತಹ ಚಿಂತನೆ ಮಾಡಬೇಕೆಂದು ಹೇಳುತ್ತೇನೆ.

**(054) 1.10 13.02.2019 ವೈಎಲ್-ಬಿಎನ್‌ಎಸ್**

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಬ್ಬ ಕ್ರೀಡಾಪಟುವಾಗಿ ಮಾನ್ಯ ಎಸ್.ವ್ಹಿ.ಸಂಕನೂರರವರು ಮತ್ತು ಡಾ॥ ತೇಜಸ್ವಿನಿ ಗೌಡರವರು ತಂದಿರತಕ್ಕಂಥ ಪ್ರಶ್ನೆಯನ್ನು ನಿಜವಾಗಿಯೂ ಸ್ವಾಗತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವುದರಲ್ಲಿ ಕ್ರೀಡಾಪಟುವಾಗಿದ್ದರು ಎಂಬುದನ್ನು ತಿಳಿಸಬೇಕು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ದೇಶೀಯ ಆಟವಾದ ಕಬ್ಬಡಿಯಲ್ಲಿ ಕ್ರೀಡಾಪಟುವಾಗಿ ಕಾರ್ಯನಿರ್ವಹಿಸಿದ್ದೇನೆ. ರಾಷ್ಟ್ರ ಮಟ್ಟದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎರಡನೇ ಸ್ಥಾನದಲ್ಲಿ ವಿಜೇತನಾಗಿದ್ದೇನೆ. ಒಬ್ಬ ಕ್ರೀಡಾಪಟುವಾಗಿ ಅಲ್ಲಿ ನಡೆಯುವಂಥ ವಿಷಯವನ್ನು ನೋಡಿ ಕಳೆದ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ನಾವೆಲ್ಲರೂ ಮಾತನಾಡಿದಂಥ ಸಂದರ್ಭದಲ್ಲಿ ಸರಿಪಡಿಸುತ್ತೇವೆ, ಖಾಯಂಗೊಳಿಸುತ್ತೇವೆ ಎನ್ನುವಂಥ ಉತ್ತರವನ್ನು ಸಹ ಸರ್ಕಾರದಿಂದ ಪಡೆದಿದ್ದೇವೆ. ಡಾ॥ ಜಿ.ಪರಮೇಶ್ವರ್‌ರವರು ಕ್ರೀಡಾ ಸಂಸ್ಥೆಯ ಅಧ್ಯಕ್ಷರಾಗಿದ್ದು ಸರಿಪಡಿಸುವಂತೆ ಈಗಾಗಲೇ ಒಪ್ಪಿಕೊಂಡಿದ್ದು, ಇವತ್ತಿನ ದಿವಸ diversion ಆಗುತ್ತಿದೆ. ದಯವಿಟ್ಟು ಆ ರೀತಿ ಆಗುವುದು ಬೇಡ. ಇದನ್ನು ಸರಿಪಡಿಸಿಕೊಟ್ಟರೆ ಒಳ್ಳೆಯದು. ಇನ್ನೊಂದು ಮೂಲ ಪ್ರಶ್ನೆಯೇನೆಂದರೆ, ಸರ್ಕಾರದಿಂದ ಕೊಡತಕ್ಕಂಥ ಉತ್ತರ ಏನಿದೆ, ಆ ಸಮಯದಲ್ಲಿ ತರಬೇತುದಾರರನ್ನು ನೇಮಕ ಮಾಡಿಕೊಂಡ ಸಂದರ್ಭದಲ್ಲಿ ಆರ್ಥಿಕ ಇಲಾಖೆಯವರು ಅನುಮತಿ ಕೊಟ್ಟಿಲ್ಲವೆಂದು ಏನು ಹೇಳುತ್ತಾರೆ, ಯಾರು ಆ ಸಂದರ್ಭದಲ್ಲಿ ನೇಮಕಾತಿ ಮಾಡಿಕೊಂಡಿದ್ದಾರೆ, ಏಕೆ ಅನುಮತಿ ಕೊಡಲಿಲ್ಲ ಎಂಬುದರ ಬಗ್ಗೆ ಏನು ಕಾನೂನು ಕ್ರಮ ತೆಗೆದುಕೊಂಡಿದ್ದಾರೆ? ಸರ್ಕಾರ ನೇಮಕಾತಿ ಮಾಡಿದ ಮೇಲೆ ಅವರನ್ನು ತೆಗೆದುಕೊಳ್ಳಲಾಗಿದೆ. ತೆಗೆದುಕೊಂಡ ಮೇಲೆ, ಟೆಕ್ನಿಕಲ್ ಪಾಯಿಂಟ್ ಪ್ರಕಾರ ಆರ್ಥಿಕ ಇಲಾಖೆಯವರು ಅನುಮತಿ ನೀಡಿರುವುದಿಲ್ಲ ಎಂದು ಹೇಳುವುದಾದರೆ, ಅದು ಅವರಿಗೆ ಗೊತ್ತಿರುತ್ತದೆಯೇ? ಈಗಾಗಲೇ ಕೆಲವರು ನಿವೃತ್ತಿ ಹೊಂದುತ್ತಿದ್ದಾರೆ, ಇನ್ನೂ ಕೆಲವರು ನಿವೃತ್ತಿಯ ಅಂಚಿನಲ್ಲಿದ್ದಾರೆ. ಇದರಲ್ಲಿ ಅನ್ಯಾಯವಾಗುತ್ತಿದೆ. ಇದನ್ನು ಸರಿಪಡಿಸಬೇಕು.

**ಶ್ರೀ ರಹೀಂ ಖಾನ್:–** ಮಾನ್ಯ ಸಭಾಪತಿಯವರೇ, ನನಗೂ ಕ್ರೀಡಾ ತರಬೇತುದಾರರಿಗೆ ಸಂಬಂಧಿಸಿದಂತೆ ನಿಜವಾಗಿಯೂ ನೋವಾಗಿದೆ. ಸುಮಾರು ವರ್ಷಗಳಿಂದ ನಮ್ಮ ಯುವಕರಿಗೆ National ಹಾಗೂ International ಮಟ್ಟದಲ್ಲಿ ಸ್ಪರ್ಧಿಸಲು ತರಬೇತಿಯನ್ನು ನೀಡಿದ್ದಾರೆ. ಸುಮಾರು 10, 20, 30 ವರ್ಷಗಳಾದರೂ ತರಬೇತುದಾರರು ವಯೋವೃದ್ಧರಾದಾಗ ಯಾವುದೇ ರೀತಿಯ ಬೆಂಬಲ ಇಲ್ಲವೆಂದರೆ ತುಂಬಾ ನೋವಾಗುತ್ತದೆ. ಈಗಾಗಲೇ ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ಉಪ ಮುಖ್ಯಮಂತ್ರಿಯವರು ತರಬೇತುದಾರರಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಈಗಾಗಲೇ C & R (Cadre & Recruitment) Rules

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅನ್ನು ಮಾಡುವುದಕ್ಕೆ ಆದೇಶವನ್ನು ನೀಡಿದ್ದಾರೆ. ಈಗಾಗಲೇ ಅದಕ್ಕೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಒಳಗೊಂಡಂತೆ 3 ಇಲಾಖೆಗಳಿಗೂ ಕಡತವನ್ನು ಕಳುಹಿಸಲಾಗಿದೆ. ಆ ಕಡತ ಬಂದ ನಂತರ ಅದರ ಬಗ್ಗೆ ತಕ್ಷಣ ಪರಿಶೀಲಿಸಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರು:-** ಮಾನ್ಯ ಸಭಾಪತಿಯವರೇ, ಡಾ॥ ಜಿ.ಪರಮೇಶ್ವರ್‌ರವರು ಖಾಯಂ ಮಾಡುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂಬ ಸ್ಟೇಟ್‌ಮೆಂಟ್ ಹೇಳುವವರೆಗೂ ನಾವು ಮಾನ್ಯ ಸಚಿವರ ಉತ್ತರವನ್ನು ಒಪ್ಪುವುದಿಲ್ಲ.

**ಸಭಾಪತಿಯವರು:-** ಈಗಾಗಲೇ ನೂತನ ಸಚಿವರು ಉತ್ತರವನ್ನು ಹೇಳಿದ್ದಾರಲ್ಲವೇ?

**ಶ್ರೀ ಎಸ್.ವ್ಹಿ.ಸಂಕನೂರ :-** ಮಾನ್ಯ ಸಭಾಪತಿಯವರೇ, ಅದು ಹೇಗೆ ಆಗುತ್ತದೆ ಆಗುವುದಿಲ್ಲ. ಹಾಗೆಯೇ ಅಲ್ಲಿ ಕೆಲಸ ಮಾಡುವ ಸಿಬ್ಬಂದಿಗಳು ಏನಿದ್ದಾರೆ ಅವರ್ಯಾರು ಕೆಲಸ ಮಾಡಲು ಬರುವುದಿಲ್ಲ. ಅವರನ್ನು ಮೊದಲು ಹೊರಗೆ ಕಳುಹಿಸಬೇಕು.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಶಸ್ವಿ ಸಚಿವರಾಗುವುದಕ್ಕೆ ಮೊದಲು ಪಟ್ಟಭದ್ರಾ ಹಿತಾಸಕ್ತಿಯನ್ನು ಹೊಂದಿರುವ ಜಿತೇಂದ್ರ ಶೆಟ್ಟಿ ಎಂಬುವರನ್ನು ಹೊರಗೆ ಕಳುಹಿಸಿ. ಇಲ್ಲದಿದ್ದರೆ ಮಾನ್ಯ ಸಚಿವರು ಕೆಲಸ ಮಾಡಿಸಲು ಬಿಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಡಾ॥ ಜಿ.ಪರಮೇಶ್ವರರವರು ಏನು ಸ್ಟೇಟ್‌ಮೆಂಟ್ ನೀಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ನೋಡಬೇಕು. ಇಲ್ಲದಿದ್ದರೆ ಸದನಕ್ಕೆ ಅಪಮಾನ ಮಾಡಿದಂತಾಗುತ್ತದೆ. ಡಾ॥ ಜಿ.ಪರಮೇಶ್ವರ್‌ರವರು ಮಾಡುತ್ತೇವೆ ಎಂದು ಒಪ್ಪಿಗೆ ನೀಡಿದ್ದಾರೆ ಮಾಡುತ್ತೇವೆಂದಿದ್ದಾರೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಬೆಳಗಾವಿ ಅಧಿವೇಶನದಲ್ಲಿ C & R Rules ತಿದ್ದುಪಡಿ ಮಾಡುತ್ತೇವೆ ಎಂದು ಮಾನ್ಯ ಪರಮೇಶ್ವರ್‌ರವರು ಒಪ್ಪಿಕೊಂಡಿದ್ದಾರೆ. ಅದನ್ನು ಕಾರ್ಯಗತಗೊಳಿಸಬೇಕು.

**ಶ್ರೀ ರಹೀಂ ಖಾನ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಡಾ॥ ಜಿ.ಪರಮೇಶ್ವರರವರು...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೆ, ಸಂಬಂಧಪಟ್ಟಂತಹ ಶಾಸಕರು ಏನು ಕೇಳುತ್ತಿದ್ದಾರೆ ಅವರನ್ನು ಕರೆಸಿ ಮಾತನಾಡಿ ಏನಾದರೂ ಪರಿಹಾರ ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡಿ.

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ಡಾ|| ಜಿ.ಪರಮೇಶ್ವರರವರು ಒಪ್ಪಿಕೊಂಡಿದ್ದಾರೆ ಎಂದು ಮಾನ್ಯ ಸಚಿವರು ಹೇಳಲಿ. ಉಪ ಮುಖ್ಯಮಂತ್ರಿಯವರ ಮಾತಿಗೆ ಕಿಮ್ಮತ್ತು ಇಲ್ಲವೇ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸಭೆಯನ್ನಾದರೂ ಕರೆಯಲಿ.

**ಶ್ರೀ ರಹೀಂ ಖಾನ್:–** ಸದರಿ ವಿಷಯದ ಸಲುವಾಗಿ ಒಂದು ಸಭೆಯನ್ನು ಕರೆಯುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಆರ್.ಪ್ರಸನ್ನ ಕುಮಾರ್‌ರವರು.

**ಪ್ರಶ್ನೆ ಸಂಖ್ಯೆ 416**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಅಂಗನವಾಡಿ ಕಾರ್ಯಕರ್ತರ ಮತ್ತು ಸಹಾಯಕಿಯರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂಥ ಕೆಲಸವನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ, ಆದಷ್ಟು ಬೇಗ ಭರ್ತಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ|| ಜಯಮಾಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊನ್ನಾಳಿ ಭಾಗದಲ್ಲಿ ಮತ್ತು ಚೆನ್ನಗಿರಿಯಲ್ಲಿ ಅಂಗನವಾಡಿ ಕಾರ್ಯಕರ್ತರ–02 ಖಾಲಿ ಹುದ್ದೆಗಳು ಮತ್ತು ಸಹಾಯಕಿಯರ–05 ಖಾಲಿ ಹುದ್ದೆಗಳು ಇದ್ದು, ಈಗಾಗಲೇ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಕರೆ ನೀಡಲಾಗಿದ್ದು, ಅರ್ಜಿ ಪರಿಶೀಲನೆಯಲ್ಲಿದೆ. ತಕ್ಷಣ ಖಾಲಿ ಹುದ್ದೆಗಳನ್ನು ತುಂಬುವಂತಹ ಕೆಲಸವನ್ನು ಮಾಡಿಕೊಡಲಾಗುವುದು.

**ಪ್ರಶ್ನೆ ಸಂಖ್ಯೆ 443**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:- ಮಾನ್ಯ ಸದಸ್ಯರಾದ ಶ್ರೀ ಕೆ.ಹರೀಶ್ ಕುಮಾರ್‌ರವರ ಪ್ರಶ್ನೆಗೆ ಸಚಿವರು 15 ದಿವಸಗಳ ಕಾಲಾವಕಾಶವನ್ನು ಕೋರಿರುತ್ತಾರೆ**

**ಪ್ರಶ್ನೆ ಸಂಖ್ಯೆ 121**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಮಾನ್ಯ ಸಚಿವರು ಹೊಸದಾಗಿ ಆಯ್ಕೆಯಾಗಿ ಬಂದಿದ್ದಾರೆ. ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ಇದೇ ವಿಚಾರವಾಗಿ ಪ್ರಸ್ತಾಪ ಮಾಡಲಾಗಿತ್ತು. ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಮುಂದಿನ ದಿನಗಳಲ್ಲಿ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹಾರ ಮಾಡುತ್ತೇವೆ ಎನ್ನುವ ಮಾತನ್ನು ಅವತ್ತಿನ ಅರಣ್ಯ ಸಚಿವರು ಹೇಳಿದ್ದರು. 3 ತಿಂಗಳಿಗೊಮ್ಮೆ ಅರಣ್ಯ ಇಲಾಖೆಯ ಸಚಿವರು ಬದಲಾವಣೆಯಾಗುತ್ತಿದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ? ಚಿಕ್ಕಮಗಳೂರು ಜಿಲ್ಲೆಯಲ್ಲಿ ಆನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಈ ಕುರಿತು ಕೈಗೊಂಡ ಕ್ರಮಗಳೇನು ಎಂದು ಮೊದಲ ಪ್ರಶ್ನೆಯಲ್ಲಿ ಕೇಳಿದ್ದೆ. ಈ ಪ್ರಶ್ನೆಗೆ ಹಿಂದಿನ ಅಧಿವೇಶನದಲ್ಲಿ ಏನು ಉತ್ತರವನ್ನು ನೀಡಿದ್ದಾರೆ, ಆ ಉತ್ತರದಲ್ಲಿ ಬದಲಾವಣೆ.... ಉತ್ತರಗಳು ಸರಿ ಇಲ್ಲವೆಂದು ಬಾವಿಗೆ ಇಳಿದು ಹಿಂದಿನ ಅಧಿವೇಶನದಲ್ಲಿ ಹೋರಾಟವನ್ನು ಸಹ ಮಾಡಿದ್ದೆವು. ಆದರೂ ಹಳೆಯ ಉತ್ತರವನ್ನೇ ಪುನಃ ಬರೆದು ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಬಹುಶಃ ಚಿಕ್ಕಮಗಳೂರು ವ್ಯಾಪ್ತಿಗೆ ಬರುವ ಮೂಡಿಗೆರೆ ತಾಲ್ಲೂಕು, ನರಸಿಂಹರಾಜಪುರ ತಾಲ್ಲೂಕಿನ ಸುತ್ತಮುತ್ತ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುತ್ತದೆ. ಆದ್ದರಿಂದ ಸದರಿ ಆನೆಗಳ ಹಾವಳಿಯನ್ನು ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕೊಟ್ಟಿರುವಂಥ ಉತ್ತರವೇ ಹಿಂದಿನ ಸಲ ಪ್ರಶ್ನೆ ಕೇಳಿದಾಗ ಸಹ ಇತ್ತು. ಆದರೆ, ತದನಂತರ ಆಗಿರುವ ಪರಿಸ್ಥಿತಿಗಳನ್ನು ಅವಲೋಕನ ಮಾಡಲಾಗಿದೆಯೇ? ಎನ್ನುವುದು ನನ್ನ ಪ್ರಶ್ನೆ. ಜೀವ ಹಾನಿಗಳು ಎಷ್ಟಾಗಿತ್ತು ಎನ್ನುವ ಪ್ರಶ್ನೆಯನ್ನು ಕೇಳಿದ್ದು, ಮಾನ್ಯ ಸಚಿವರು ಕೊಟ್ಟಿರುವ ಉತ್ತರ ನನಗೆ ಅರ್ಥವಾಗಲಿಲ್ಲ. ಹಾಗಾಗಿ ನನಗೆ ಆ ಉತ್ತರವು ಸರಿಯಾಗಿ ಅರ್ಥವಾಗುವ ರೀತಿಯಲ್ಲಿ ಹೇಳಬೇಕಾಗುತ್ತದೆ. ಆನೆ ದಾಳಿಯಿಂದ ಆದ ಮಾನವ ಪ್ರಾಣ ಹಾನಿಗಳು ಎಷ್ಟು ಎಂಬ ಪ್ರಶ್ನೆಯನ್ನು ಕೇಳಿದ್ದೆ. ಇಲ್ಲಿ ವಿಭಾಗವಾರು ಪ್ರಸ್ತಾಪವನ್ನು ಮಾಡಲಾಗಿದೆ. ಭದ್ರಾ ಹುಲಿ ಯೋಜನೆ-00 2015-16ನೇ ಸಾಲಿನಲ್ಲಿ ಚಿಕ್ಕಮಗಳೂರು-01, 2016-17ನೇ ಸಾಲಿನಲ್ಲಿ ಚಿಕ್ಕಮಗಳೂರು -01, 2018-19ನೇ ಸಾಲಿನಲ್ಲಿ ಚಿಕ್ಕಮಗಳೂರು-02. ಹಾಗೆಯೇ ಆನೆ ದಾಳಿಯಿಂದ ಮಾನವ ಗಾಯವಾಗಿರುವುದು ಕೊಪ್ಪ-01 ಎಂಬ ಉತ್ತರವನ್ನು ನೀಡಿದ್ದಾರೆ. ಬಹುಶಃ ಮಾನ್ಯ ಸಚಿವರ ಹತ್ತಿರ ಮಾಹಿತಿ ಇಲ್ಲವೇ? ಸರ್ಕಾರ ಇದಕ್ಕೆ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಬಂಧಿಸಿದಂತೆ ಎಷ್ಟು ಪ್ರಾಣ ಹಾನಿಗಳಾಗಿದೆ ಎಂಬುದರ ಬಗ್ಗೆ ಗಂಭೀರವಾಗಿ ಏನಾದರೂ ಕ್ರಮ ತೆಗೆದುಕೊಂಡಿದೆಯೇ ಎಂಬುದು ಗೊತ್ತಿಲ್ಲ. ಚಿಕ್ಕಮಗಳೂರು ವಿಭಾಗವೆಂದರೆ ಅದರಲ್ಲಿ ಯಾವುದು ಬರುತ್ತದೆ? ಚಿಕ್ಕಮಗಳೂರು ಎಂದರೆ ಮೂಡಿಗೆರೆ ಬರುತ್ತದೆಯೇ, ಶೃಂಗೇರಿ ಬರುತ್ತದೆಯೇ, ಎನ್.ಆರ್. ಪುರ ಬರುತ್ತದೆಯೇ? ಕೊಪ್ಪ ಎನ್ನುವುದನ್ನು ಹೇಳಿದ್ದಾರೆ. ಬಹುಶಃ ಇನ್ನುಳಿದಂತೆ ಯಾವುದೂ ಇದರಲ್ಲಿ ಪ್ರಸ್ತಾಪವಾಗಿಲ್ಲ. ಸ್ಥಳೀಯವಾಗಿ ಮಾನ್ಯ ಸಚಿವರು ಇದರ ಕಡೆ ಗಮನಹರಿಸಬೇಕೆಂದು ಹೇಳುತ್ತೇನೆ. ನಾನು ಈಗಾಗಲೇ ಇರುವಂಥ ಭಾಗದಲ್ಲಿ ನನಗೆ ಗೊತ್ತಿರುವ ಹಾಗೆ 2017 ರಿಂದ 2019ನೇ ಸಾಲಿನವರೆಗೂ ಆನೆ ದಾಳಿ ನಡೆಸಿ 4 ಜನರನ್ನು ಆಹುತಿ ತೆಗೆದುಕೊಂಡಿದೆ. ಆಹುತಿ ತೆಗೆದುಕೊಂಡಿರುವ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿಲ್ಲ. ಇತ್ತೀಚಿನ 2018ನೇ ಸಾಲಿನ ಕೊನೆಯಲ್ಲಿ ಇತ್ತೀಚೆಗೆ ಕೇವಲ 3-4 ತಿಂಗಳ ಹಿಂದೆ ಹಳ್ಳಿಬೈಲು ಎಂಬ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಜೀವವನ್ನು ಕಳೆದುಕೊಂಡಿದ್ದು ಅವನಿಗೆ ಸರ್ಕಾರ ಪರಿಹಾರ ಕೊಟ್ಟಿದೆ. ಇದರಲ್ಲಿ ಅದರ ಉಲ್ಲೇಖ ಇಲ್ಲ. ಆದರೆ, ಸರ್ಕಾರ ಇದನ್ನು ಯಾವ ರೀತಿಯಲ್ಲಿ ಎಷ್ಟು ಗಂಭೀರವಾಗಿ ತೆಗೆದುಕೊಂಡಿದೆ ಎಂಬುದು ನನ್ನ ಮೂಲಭೂತವಾದ ಪ್ರಶ್ನೆ. ಹಾಗಾಗಿ ಇಲ್ಲಿ ಕೊಟ್ಟಿರುವಂಥ ಉತ್ತರಗಳಲ್ಲಿ ನಾನು ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಆನೆ ಹಾವಳಿಯನ್ನು ತಡೆಗಟ್ಟುವ ಕುರಿತು ಅಧಿಕಾರಿಗಳೊಂದಿಗೆ ಎಷ್ಟು ಬಾರಿ ಮಾನ್ಯ ಅರಣ್ಯ ಸಚಿವರು ಜಿಲ್ಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಜಿಲ್ಲೆಗೆ ಭೇಟಿ ನೀಡಿರುವ ಸಂಪೂರ್ಣ ಮಾಹಿತಿ ನೀಡಿ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಹಿಂದಿನ ಬೆಳಗಾವಿ ಅಧಿವೇಶನದಲ್ಲಿ ಕೇಳಿದಂಥ ಪ್ರಶ್ನೆ ಇದು. ಆದರೆ, ಮಾನ್ಯ ಸಚಿವರು ದಿನಾಂಕ 31.10.2017 ರಂದು ಆಗಿನ ಮಾನ್ಯ ಅರಣ್ಯ ಸಚಿವರೊಂದಿಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಆನೆ ಯೋಜನೆ) ಇವರು ಸಕಲೇಶಪುರಕ್ಕೆ ಬಂದು ಒಂದು ಸಭೆಯಲ್ಲಿ ಭಾಗವಹಿಸಿದ್ದಾರೆ ಎಂದು ಪುನಃ ಅದೇ ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವಂಥ ಪ್ರಶ್ನೆ ಯಾವತ್ತು? ಆದರೆ ಪುನಃ ಅಧಿಕಾರಿಗಳೊಂದಿಗೆ ಕುಳಿತುಕೊಂಡು ಅದೇ ಮಾಹಿತಿಯನ್ನು ಸದನಕ್ಕೆ ಒದಗಿಸಿರುವುದು ಸರಿಯೇ? ಹಾಗೆ ಆನೆ ದಾಳಿಗೊಳಗಾದ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರ ಧನ ಎಷ್ಟು? ಈವರೆಗೂ ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ ಎಂದು ಸಹ ಕೇಳಲಾಗಿದೆ. ಅದರ ಬಗ್ಗೆ ಮಾಹಿತಿ ಸಹ ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(055)13.02.2019/1.20/ಎಸ್‌ಕೆ-ಕೆಎಸ್**

**ಶ್ರೀ ಎಂ.ಕೆ. ಪ್ರಾಣೇಶ್ (ಮುಂದು)**

ಕಳೆದ ಬಾರಿ ಬೆಳಗಾವಿ ಅಧಿವೇಶನದಲ್ಲಿ ನೀಡಿದಂತಹ ಉತ್ತರದಲ್ಲಿ ಅಧಿಕಾರಿಗಳು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆಂದು ಮಾನ್ಯ ಸಚಿವರಿಗೆ ತಿಳಿಸಿದ್ದೆನು. ಆನೆಗಳು ಇಂತಿಷ್ಟು ಬಲಿಗಳನ್ನು ತೆಗೆದುಕೊಂಡಿವೆ. ಇದನ್ನು ಏಕೆ ಉಲ್ಲೇಖವನ್ನು ಮಾಡಿಲ್ಲ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ನಾನು ಕೇಳಿರುವಂತಹ ಪ್ರಶ್ನೆಗೆ ಮತ್ತೆ ಹಿಂದೆ ಕೊಟ್ಟಂತಹ ಅದೇ ಉತ್ತರವನ್ನು ಕೊಡುವಂತಹ ವ್ಯವಸ್ಥೆಯಾಗಿದೆ. ಮಾನ್ಯ ತಿಪ್ಪೇಸ್ವಾಮಿಯವರು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ಆನೆಗಳಿಗೆ caller ID ಯನ್ನು ಹಾಕಿದ್ದೇವೆಂದು ಹೇಳಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆಗೂ ಮತ್ತು ಅವರು ಕೇಳಿರುವಂತಹ ಪ್ರಶ್ನೆಯೂ ಸಮೀಪದವಾದಂತಹ ರೀತಿಯಲ್ಲಿದೆ. ಆದರೆ ನನಗೊಂದು ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಒಂದು ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಎರಡು ಪ್ರಶ್ನೆಗಳು ಎಲ್ಲಾ ಆನೆಗಳಿಗೆ ಸಂಬಂಧಪಟ್ಟಂತಹದ್ದು. ಎಲ್ಲಾ ಜೀವ ಹಾನಿಗಳಾಗಿರುವಂತಹದ್ದರ ಬಗ್ಗೆಯೇ ಇರುವಂಥದ್ದು. ಇವೆಲ್ಲವನ್ನು ಮಾನ್ಯ ಸಚಿವರು ಗಂಭೀರವಾಗಿ ತೆಗೆದುಕೊಂಡಿಲ್ಲ. ಮಾನ್ಯ ಸಚಿವರು ಹೊಸದಾಗಿ ಬಂದಿದ್ದಾರೆ. ನಮ್ಮ ಭಾಗದಲ್ಲಿ ಗಂಭೀರವಾಗಿರುವಂತಹ ವಿಚಾರವನ್ನು ಇಲ್ಲಿ ಚರ್ಚೆ ಮಾಡುತ್ತೇವೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಈ ಹಿಂದೆ ಇದೇ ವಿಚಾರವಾಗಿ ಸದನದ ಬಾವಿಗೆ ಇಳಿದು ಧರಣಿಯನ್ನು ಮಾಡುತ್ತಿದ್ದ ಸಂದರ್ಭದಲ್ಲಿ ತಾವು ಮಾನ್ಯ ಸಚಿವರಿಗೆ ಆ ಜಿಲ್ಲೆಗೆ ಹೋಗಿ ಯಾವಾಗ ಸಭೆಯನ್ನು ಮಾಡುತ್ತೀರಿ ಎಂದು ಪ್ರಶ್ನೆಯನ್ನು ಕೇಳಿರುವುದು ಕಡತದಲ್ಲಿ ಇದೆ. ಪ್ರಾಣ ಹಾನಿಗಳಾಗಿವೆ. ಕೇವಲ ಒಂದು ವಾರದೊಳಗೆ ಜಿಲ್ಲೆಗೆ ಬಂದು ಅಧಿಕಾರಿಗಳನ್ನು ಕರೆದು ಏನೇನು ಸಮಸ್ಯೆಗಳಿವೆ ಅದನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕೆಲಸವನ್ನು ಮಾಡಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ಇದುವರೆಗೂ ಅರಣ್ಯ ಸಚಿವರು ಜಿಲ್ಲೆಗೆ ಏಕೆ ಬರಲಿಲ್ಲ?

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವೇ, ಮಾನ್ಯ ಪ್ರಾಣೇಶ್‌ರವರೇ ಅರಣ್ಯ ಸಚಿವರ ಅಧಿಕಾರ ಮಾರನೇ ದಿವಸ ಹೋಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ. ಪ್ರಾಣೇಶ್:-**ಮಾನ್ಯ ಭೋಜೇಗೌಡರೇ ನನ್ನ ಮಾತು ಮುಗಿದಿಲ್ಲ. ನಾನು ಕೇಳಿರುವಂತಹ ಪ್ರಶ್ನೆಗೆ ಪೂರ್ಣ ಉತ್ತರವನ್ನು ಕೊಡಬೇಕಾಗುತ್ತದೆ. ಇಲ್ಲಿ ಮಂತ್ರಿಗಳು ಬದಲಾವಣೆಯಾದರು ಎನ್ನುವುದನ್ನು ಕೇಳುವುದಕ್ಕೆ ನಾವು ತಯಾರಿಲ್ಲ. ಇದು ನಮಗೆ ಸಂಬಂಧಪಟ್ಟ ವಿಚಾರವಲ್ಲ. ಮಂತ್ರಿಗಳು, ಅಧಿಕಾರಿಗಳು ಬದಲಾವಣೆಯಾಗಬಹುದು. ಇದಕ್ಕೆ ಜವಾಬ್ದಾರಿ ಯಾರು?

ಇದು ರಾಜ್ಯ ಸರ್ಕಾರದ ಜವಾಬ್ದಾರಿ. ನಾಳೆ ಮತ್ತೊಬ್ಬರು ಮಂತ್ರಿಗಳಾಗಿ ಬರಬಹುದು. ಹಾಗೂ ಅಲ್ಲಿ ಜೀವ ಬಲಿಗಳನ್ನು ಕೊಡುವುದಕ್ಕಾಗುತ್ತದೆಯೇ? ಆನೆಗಳ ಹಾವಳಿಯಿಂದಾಗಿ, ದಿನೇ ದಿನೇ ಜನರ ಪ್ರಾಣ ಹಾನಿಯಾಗುತ್ತಿದೆ.

**(ಗೊಂದಲ)**

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಇದಕ್ಕೆ interfere ಆಗುವುದಿಲ್ಲ. ನಾನು ಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವುದಕ್ಕೆ ಪೂರ್ವಕವಾಗಿ ಹೇಳುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ತಮಗೆ ಮುಂದೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡುತ್ತೇನೆ.

**ಶ್ರೀ ಸತೀಶ್ ಎಲ್. ಜಾರಕಿಹೊಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥ ಮಾಡಿಕೊಂಡಿದ್ದೇನೆ. ಅವರಿಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿಯಿಂದ ನಾನು ಈ ಇಲಾಖೆಗೆ ಹೊಸದಾಗಿ ಸಚಿವನಾಗಿ ಬಂದಿದ್ದು, ಆ ಇಲಾಖೆಯಲ್ಲಿ ಕೆಲಸವನ್ನು ಮಾಡಬೇಕಾಗಿದೆ ಏನು ಮಾನವ-ವನ್ಯಪ್ರಾಣಿ ಸಂಘರ್ಷಗಳಿವೆ. ಕೇವಲ ಒಂದೇ ಜಾಗಕ್ಕೆ ಸೀಮಿತವಾಗಿಲ್ಲ, ಅದು ಬಹಳಷ್ಟು ಕಡೆ ಇದೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ ಸಕಲೇಶಪುರದಲ್ಲಿ ಕೆಲವು ಸಮಸ್ಯೆಗಳ ಬಗ್ಗೆ ಅಲ್ಲಿಯ ಶಾಸಕರು ಕೂಡ ಹೇಳಿದ್ದಾರೆ. ಕೊಡಗಿನಲ್ಲಿಯೂ ಕೂಡ ಆನೆಗಳ ಹಾವಳಿ ಇದೆ. ಅಧಿವೇಶನ ಮುಗಿದ ನಂತರ ತಕ್ಷಣ ಖಂಡಿತವಾಗಿಯೂ, ಸದಸ್ಯರ ಭಾವನೆಗಳಿಗೆ ಸ್ಪಂದಿಸುತ್ತೇನೆ. ಆದರೆ ನನಗೆ ಸ್ವಲ್ಪ ಕಾಲವಾಕ್ಕಾಶವನ್ನು ಕೊಟ್ಟರೆ, ಖಂಡಿತವಾಗಿ ಆ ಸಮಸ್ಯೆಯನ್ನು ಬಗೆಹರಿಸುತ್ತೇವೆ ಹಾಗೂ ಸೂಕ್ತವಾದ ಪರಿಹಾರವನ್ನು ಕಲ್ಪಿಸುತ್ತೇನೆ. ನನಗೆ ಸ್ವಲ್ಪ ಸಮಯಾವಕಾಶವನ್ನು ನೀಡಬೇಕಾಗಿ ವಿನಂತಿಸುತ್ತೇನೆ.

**ಶ್ರೀ ಎಸ್. ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ತಾವು ದಯಮಾಡಿ ನಾನು ಪದೇ ಪದೇ ಮಧ್ಯ ಪ್ರವೇಶ ಮಾಡುತ್ತೇನೆಂದು ತಪ್ಪು ತಿಳಿಯಬಾರದು. ಅನಿವಾರ್ಯ ಪರಿಸ್ಥಿತಿಯಲ್ಲಿ ಮಧ್ಯೆ ಪ್ರವೇಶ ಮಾಡುತ್ತೇನೆ ಅಷ್ಟೇ. ಇದು ಬಹಳ ಗಂಭೀರವಾಗಿರುವಂತಹ ವಿಚಾರ. ಮಾನ್ಯ ಸದಸ್ಯರುಗಳಾದ ತಿಪ್ಪೇಸ್ವಾಮಿಯವರು ಮತ್ತು ಪ್ರಾಣೇಶ್‌ರವರು ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ತಿಪ್ಪೇಸ್ವಾಮಿಯವರು ಕೇಳಿರುವ ಪ್ರಶ್ನೆ ಏನೆಂದರೆ, ಅಲ್ಲಿ ಜೀವನವನ್ನೇ ಮಾಡುವುದಕ್ಕಾಗುವುದಿಲ್ಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತಹ ರೈತರು ತೋಟವನ್ನು ಮಾಡಿದ್ದೇವೆ. ಆದರೆ ತೋಟದ ಪಕ್ಕದಲ್ಲಿಯೇ ಅರಣ್ಯ ಇದೆ. ಅನೇಕ ರೈತರು ಒಗ್ಗಟ್ಟಾಗಿ ತೋಟವನ್ನು ಅರಣ್ಯ ಇಲಾಖೆಯವರೆ ತೆಗೆದುಕೊಂಡು ಪರಿಹಾರವನ್ನು ಕೊಟ್ಟು ಬಿಡಿ ಎಂದು ಹೇಳಿದ್ದಾರೆ. ಈ ಅರಣ್ಯ ಮಧ್ಯೆದಲ್ಲಿ ನನ್ನ ತೋಟ ಇರುವಂತಹ ಸಂದರ್ಭದಲ್ಲಿ, ತಾವು ಅರಣ್ಯ ಇಲಾಖೆಯವರಿಗೆ ನಮ್ಮ ಜಾಗವನ್ನು ಕೊಡಬೇಕು, ಇಲ್ಲ ಅರಣ್ಯ ಇಲಾಖೆಯವರೇ ಅರಣ್ಯ ಜಾಗವನ್ನು ತಮಗೆ ಕೊಡಬೇಕು, ಇಂತಹ ಪರಿಸ್ಥಿತಿಯಲ್ಲಿ ಕಾಡು ಪ್ರಾಣಿಗಳ ಮಧ್ಯೆ ನಾವು ವಾಸ ಮಾಡಿಕೊಂಡು, ತೋಟ ಮಾಡುತ್ತಿದ್ದೇವೆ. ಆ ತೋಟವನ್ನು ಬೆಂಬಲ ಬೆಲೆ ಕೊಟ್ಟು, ತೆಗೆದುಕೊಳ್ಳಿ ಮತ್ತು ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಿ ಕೊಡಿ ಎನ್ನುವುದೊಂದು ವಿಚಾರವಾಗಿದೆ. ಎರಡನೇ ವಿಚಾರ ಮಾತು ಎತ್ತಿದರೆ, ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು ಸೌರಶಕ್ತಿ ಬೇಲಿಯನ್ನು ನಿರ್ಮಾಣ ಮಾಡಿದ್ದೇವೆಂದು ಹೇಳುತ್ತಾರೆ. ದಯಮಾಡಿ, ಅರಣ್ಯ ಇಲಾಖೆಯ ಅಧಿಕಾರಿಗಳು ಈ ಸದನದಲ್ಲಿ ಇದ್ದಾರೆ.  ಸೌರಶಕ್ತಿ ಬೇಲಿಗೆ ಒಂದು ಹಂದಿ ಬಂದು ಬೇಲಿಗೆ ಗುದ್ದಿದರೆ ಸೌರಶಕ್ತಿ ಬೇಲಿಯೂ ಇರುವುದಿಲ್ಲ. ಅದಕ್ಕೆ ಖರ್ಚು ಮಾಡಿದಂತಹ ಹಣವೂ ವ್ಯರ್ಥವಾಗುತ್ತದೆ. ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ವ್ಯರ್ಥ ಮಾಡಿದ್ದಾರೆ. ಇದರಿಂದ ಏನು ಪ್ರಯೋಜನವಾಯಿತು? ಇದರ ಬಗ್ಗೆ ಕಳೆದ ಬಾರಿ ಅಧಿವೇಶನದಲ್ಲಿ ಚರ್ಚೆಯನ್ನು ಮಾಡಿದ್ದೇವೆ. ಇದನ್ನು ಅಧಿಕಾರಿಗಳು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಹಣವನ್ನು ಈ ರೀತಿ ಅನಾವಶ್ಯಕವಾಗಿ ವ್ಯರ್ಥ ಮಾಡಬಾರದು. ಇನ್ನೊಂದು ಹಳೆಯ ರೈಲ್ವೆ ಕಂಬಿಯನ್ನು ಅರ್ಧ ಬೆಲೆಗೆ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆಂದು ಅಧಿಕಾರಿಗಳು ಹೇಳಿದರು. ಅದರ ಬಗ್ಗೆ ಏನಾಯಿತು ಎಂಬುದರ ಬಗ್ಗೆ ಇನ್ನು ಮಾಹಿತಿ ಇಲ್ಲ. ದಯವಿಟ್ಟು, ಹಳೆ ರೈಲ್ವೆ ಕಂಬಿ ಹಾಕುವಂತಹದ್ದು ಇದೆಯಲ್ಲಾ, ಅದು ಬಹಳ ಉಪಯುಕ್ತವಾಗಿರುವಂತಹದ್ದಾಗಿದೆ. ಅದನ್ನು implement ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಆಗುತ್ತಿಲ್ಲ. ದಯವಿಟ್ಟು, second-hand ರೈಲ್ವೆ ಕಂಬಿಗಳನ್ನು ಯಾವ ರೀತಿ ಪಡೆದುಕೊಳ್ಳಬೇಕು ಎಂಬ ವಿಚಾರದ ಬಗ್ಗೆ ಗಮನಹರಿಸಬೇಕು. ಇನ್ನೊಂದು ವಿಚಾರವೇನೆಂದರೆ, ಸುಮಾರು ಏಳು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಹೋದ ಜೀವ ಮತ್ತೇ ಬರುವುದಿಲ್ಲ. ಅದೇ ಏಳು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿದರೆ, ಈ ವನ್ಯ ಪ್ರಾಣಿಗಳನ್ನು ತಡೆಯಬಹುದು ಎನ್ನುವ ಒಂದು ವಿಚಾರವಿದೆ. ದಯವಿಟ್ಟು, ಇದನ್ನು ಗಂಭೀರವಾಗಿ ಪರಿಗಣಿಸಬೇಕು.

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಅರಣ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು, ಮಾನ್ಯ ಸಚಿವರು ಕೊಡಗು ಜಿಲ್ಲೆಗೆ ಒಂದು ಸಾರಿ ಭೇಟಿ ಕೊಡಬೇಕು. ನಾನು ಕೇಳುವುದೇನೆಂದರೆ, ಮಾನ್ಯ ಸಚಿವರು ಭೇಟಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಂತಹ ಸಂದರ್ಭದಲ್ಲಿ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜೊತೆ ಒಂದು ಸಭೆಯನ್ನು ಮಾಡಬೇಕು. ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ, ಆನೆಯ ಹಾವಲಿಯಿಂದ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಕಾರ್ಮಿಕರು ತೋಟದ ಕೆಲಸಕ್ಕೆ ಬರುತ್ತಿಲ್ಲ. ಮಾಲೀಕರೇ ತೋಟಕ್ಕೆ ಹೋಗದಂತಹ ಪರಿಸ್ಥಿತಿ ಉಂಟಾಗಿದೆ. ದಯವಿಟ್ಟು, ಮಾನ್ಯ ಸಚಿವರು ಆ ಜಿಲ್ಲೆಗೆ ಭೇಟಿ ಕೊಟ್ಟು, ಒಂದು ಸಭೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಿಂದೆ ಇದ್ದಂತಹ ಸಚಿವರು ಯಾರ ಕೈಗೂ ಸಿಗದಿರುವಂತಹ ಪರಿಸ್ಥಿತಿ ಇತ್ತು. ಆ ರೀತಿಯಾಗಬಾರದೆಂದು ನಾನು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಡಿನ ಅಂಚಿನಲ್ಲಿರುವಂತಹ ರೈತರೇ voluntary ಆಗಿ ತಮ್ಮ ಜಮೀನನ್ನು ಬಿಟ್ಟುಕೊಡುವುದಕ್ಕೆ ಬಂದಿದ್ದಾರೆ. ಕೇಂದ್ರ ಸರ್ಕಾರದಲ್ಲಿ CAMPA (Compensatory Afforestation Fund Management and Planning Authority) ಎನ್ನುವಂತಹ ಒಂದು ಯೋಜನೆ ಇದೆ. ಅದರಲ್ಲಿ ಏಕೆ ಕೊಡಗು, ಹಾಸನ, ಮೈಸೂರು ಜಿಲ್ಲೆಯ ಹೆಚ್.ಡಿ ಕೋಟೆ ಇಂತಹ ಜಿಲ್ಲೆಗಳಲ್ಲಿ ಸಾಕಷ್ಟು ರೈತರು ಸಾವಿರಾರು ಎಕರೆಗಳಷ್ಟು ಜಮೀನುಗಳನ್ನು ಅರಣ್ಯ ಇಲಾಖೆಗೆ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದಷ್ಟು ಬೇಗ ಅವರಿಗೆ ಪರಿಹಾರ ಕೊಟ್ಟರೆ, ನಿಜವಾಗಿಯೂ ಕೂಡ ಅವರು ಜಮೀನುಗಳನ್ನು ಮಾರುತ್ತಾರೆ. ಆಗ ಆನೆ ದಾರಿಗಳನ್ನು re-establish ಮಾಡಬಹುದು ಅಥವಾ ಆನೆಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ translocate ಮಾಡಬಹುದು. ಹುಲಿಗಳನ್ನು ತೆಗೆದುಕೊಂಡು ಹೋಗಿ translocate ಮಾಡಬಹುದು. ದಯವಿಟ್ಟು, ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್:–**ಮಾನ್ಯ ಸಭಾಪತಿಯವರೇ, ಒಂದೇ ರೀತಿಯಾದ ಪ್ರಶ್ನೆಗಳಿಗೆ ಎರಡು ರೀತಿಯ ಉತ್ತರಗಳನ್ನು ನೀಡಿದ್ದಾರೆ. ನಾನು ಕೇಳುವುದೇನೆಂದರೆ, ಮಾನ್ಯ ತಿಪ್ಪೇಸ್ವಾಮಿಯವರು ಈ ತಿಕ್ಕಾಟ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಅವರು ಯಾವುದೇ ನಿರ್ದಿಷ್ಟವಾದ ಭಾಗವನ್ನು ಕೇಳಿಲ್ಲ. ಇದಕ್ಕೆ ಇಲಾಖೆಯವರು ನೀಡಿದ ಉತ್ತರವೇನೆಂದರೆ, ವನ್ಯ ಪ್ರಾಣಿಗಳ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಾನು ಕೇಳಿರುವಂತಹ ಪ್ರಶ್ನೆಗೆ, ಇಲಾಖೆಯವರು ಮೂಡಿಗೆರೆ ಭಾಗದ ಕಾಡಂಚಿನ ರೈತರ ಹಿಡುವಳಿ ಜಮೀನುಗಳಿಗೆ ಲಗ್ಗೆ ಇಡುವ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು Railway barricades

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗಳ ನಿರ್ಮಾಣಕ್ಕೆ ರೂ.4,100 ಲಕ್ಷ ಮೊತ್ತದ ಪ್ರಸ್ತಾವನೆಯನ್ನು ತಯಾರಿಸಲಾಗಿದೆ ಎಂದು ಲಿಖಿತ ಉತ್ತರವನ್ನು ನೀಡಿದ್ದಾರೆ. ಇದರ ಅರ್ಥ ಏನು? ಮಾನ್ಯ ಸದಸ್ಯರು ಹೇಳಿದ ನಿರ್ದಿಷ್ಟ ಜಾಗದಲ್ಲಿ ಅದನ್ನು ಮಾಡಿದ್ದರೆ, ಹೌದು ಅಲ್ಲಿ ಮಾಡಿದ್ದಾರೆ. ಆದರೆ ಇಲ್ಲಿ ಏಕೆ ಮಾಡಲಿಲ್ಲ ಎಂದು ನಾನು ಕೇಳಬಹುದು. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಮತ್ತು ನಾನು ಕೇಳಿರುವಂತಹ ಪ್ರಶ್ನೆಗೆ ಉತ್ತರಗಳು ಏಕೆ ಈ ರೀತಿ ಬದಲಾವಣೆಗಳಾಗಿವೆ? ತಮ್ಮ ಮೂಲಕ ಮಾನ್ಯ ಸಚಿವರಿಗೆ ಮನವಿ ಮಾಡುವುದೇನೆಂದರೆ, ಅಧಿಕಾರಿಗಳು ನೀಡಿದಂತಹ ವರದಿಯನ್ನು ತೆಗೆದುಕೊಂಡು ನಮಗೆ ಉತ್ತರವನ್ನು ಕೊಡುವಂತಹ ಕೆಲಸವನ್ನು ಖಂಡಿತವಾಗಿಯೂ ಮಾಡಬೇಡಿ. ಮಾನ್ಯ ಸಚಿವರು ಉತ್ತರವನ್ನು ಖುದ್ದಾಗಿ ಪರಿಶೀಲಿಸಿ, ನಾವು ಪ್ರಶ್ನೆಯನ್ನು ಕೇಳಿದಾಗ, ಅಧಿಕಾರಿಗಳು ಬರೆದು ಕೊಟ್ಟಿರುವ ಉತ್ತರವನ್ನು ನಮಗೆ ಕಳುಹಿಸಿಕೊಡುವ ಕೆಲಸವಾಗಬೇಕು. ಇಲ್ಲದಿದ್ದರೆ ಇನ್ನೇನು ಕೆಲಸ? ಯಾವುದೋ ಪ್ರಶ್ನೆಗೆ, ಮತ್ತೆ ಯಾವುದೋ ಉತ್ತರ ನೀಡಿದರೆ, ಸದನದ ಗೌರವ ಏನಾಗಬೇಕು? ನಾವು ಸಹ ಈ ಸದನದ ಸದಸ್ಯರಾಗಿ ಬಂದಂತವರು. ನಮ್ಮ ಪರಿಸ್ಥಿತಿ ಏನು?

**ಶ್ರೀ ಸತೀಶ್ ಎಲ್. ಜಾರಕಿಹೊಳಿ:–** ಮಾನ್ಯ ಸಭಾಪತಿಯವರೇ, ಅಧಿವೇಶನದ ಮುಗಿದ ನಂತರ ಆದಷ್ಟು ಬೇಗ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಸಭೆ ಮಾಡಿ ಪರಿಹಾರ ಮಾಡುವಂತಹ ಕೆಲಸವನ್ನು ಮಾಡುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಬಗ್ಗೆ ಗೌರವವಿದೆ. ಹದಿನೈದು ದಿವಸಗಳು ಅಥವಾ ಇಪ್ಪತ್ತು ದಿವಸಗಳು ಅಥವಾ ಒಂದು ತಿಂಗಳೋ ಎಂಬುದನ್ನು ಮಾನ್ಯ ಸಚಿವರು ನಿರ್ದಿಷ್ಟವಾಗಿ ಹೇಳಬೇಕು.

**ಶ್ರೀ ಸತೀಶ್ ಎಲ್. ಜಾರಕಿಹೊಳಿ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆದಷ್ಟು ಬೇಗ ಎಂದರೆ, ಹದಿನೈದು ದಿವಸಗಳು ಅಥವಾ ಒಂದು ತಿಂಗಳು ಎಂಬುದನ್ನು ನಿರ್ದಿಷ್ಟವಾಗಿ ಹೇಳಲಿ.

**ಶ್ರೀ ಸತೀಶ್ ಎಲ್. ಜಾರಕಿಹೊಳಿ:–** ಮಾನ್ಯ ಸಭಾಪತಿಯವರೇ, ತಕ್ಷಣವೇ ಕ್ರಮ ಕೈಗೊಳ್ಳುತ್ತೇನೆ. ನಾನು ಕೆಲಸವನ್ನು ಮಾಡಿದ್ದೇನೆ. ಅದು ನನಗೆ ಗೊತ್ತಿದೆ. ಮಾನ್ಯ ಸದಸ್ಯರ ಭಾವನೆಗಳನ್ನು ಗೌರವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**ಡಾ॥ ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ: 13 ನೇ ಫೆಬ್ರವರಿ, 2019, ಸಮೂಹ–3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 106 ಪ್ರಶ್ನೆಗಳ ಪೈಕಿ 54 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರದ ಪ್ರತಿಗಳನ್ನು ಲಗತ್ತಿಸಲಾಗಿದೆ.)**

**<u>7. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

ಅ) "ಕಾವೇರಿ ತಾಲ್ಲೂಕು ರಚನೆಗಾಗಿ ಮತ್ತೆ ಹೋರಾಟ" ಎಂಬ ಪತ್ರಿಕಾ ವರದಿಯ ಬಗ್ಗೆ.

-----

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊಡಗು ಒಂದು ಪುಟ್ಟ ಜಿಲ್ಲೆಯಾಗಿದ್ದು, ಬೆಟ್ಟ–ಗುಡ್ಡ ಪ್ರದೇಶಗಳಿಂದ ಕೂಡಿದೆ. ಕೊಡಗು ಜಿಲ್ಲೆಯಲ್ಲಿ ಕೇವಲ ಮೂರು ಮಡಿಕೇರಿ, ಸೋಮವಾರ ಪೇಟೆ, ವಿರಾಜ ಪೇಟೆ ತಾಲ್ಲೂಕು ಕೇಂದ್ರಗಳಿದ್ದು ಜಿಲ್ಲೆಯ ಜನಗಳು ತಮ್ಮ ದೈನಂದಿನ ಕೆಲಸ ಕಾರ್ಯಗಳಿಗಾಗಿ ಈ ತಾಲ್ಲೂಕು ಕೇಂದ್ರಗಳಿಗೆ ದೂರದ ಪ್ರದೇಶಗಳಿಂದ ಬಂದು ತಮ್ಮ ಕೆಲಸ–ಕಾರ್ಯಗಳನ್ನು ಮುಗಿಸಿಕೊಳ್ಳಲು ಕಷ್ಟ ಸಾಧ್ಯವಾಗಿರುತ್ತದೆ. ಆದಕಾರಣ ಕೊಡಗು ಜಿಲ್ಲೆಯಲ್ಲಿ ಸುಮಾರು 25 ವರ್ಷಗಳಿಂದ ಕಾವೇರಿ ತಾಲ್ಲೂಕು ರಚನೆಗಾಗಿ ಹೋರಾಟ ನಡೆಯುತ್ತಿದ್ದು, ಆದರೂ ಸಹ ಇಲ್ಲಿಯವರೆವಿಗೂ ಆಗದಿರುವುದು ವಿಷಾದನೀಯ ಸಂಗತಿ. ಆದಕಾರಣ ದಿನಾಂಕ: 11.02.2019 ರಂದು ಮತ್ತೆ ಕುಶಾಲನಗರ ಬಂದ್ ಮಾಡುವ ಮೂಲಕ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು ಮತ್ತು ಜನಸಾಮಾನ್ಯರ ಹಿತದೃಷ್ಟಿಯಿಂದ ಜಿಲ್ಲೆಗೆ ಒಂದು ಹೊಸ ತಾಲ್ಲೂಕು ಅವಶ್ಯವಾಗಿರುತ್ತದೆ.

ಆದುದರಿಂದ ಶೀಘ್ರವಾಗಿ ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಒಂದು ತಾಲ್ಲೂಕನ್ನು ರಚಿಸಿ ಆದಕ್ಕೆ ಕಾವೇರಿ ತಾಲ್ಲೂಕು ಎಂಬ ಹೆಸರನ್ನು ಇಡುವಂತೆ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಜಯಮಾಲ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಿಕೊಡಲಾಗುವುದು.

**(56)13.02.2019 1.30 ಟಿಸಿಹೆಚ್–ಕೆಎಸ**

**ಆ)ವಿಷಯ:–** ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರೌಢಶಾಲಾ ಶಿಕ್ಷಕರಿಗೆ ಕಳೆದ ಎಂಟು ತಿಂಗಳಿಂದ ವೇತನ ಪಾವತಿಯಾಗದಿರುವ ಬಗ್ಗೆ.

–––––

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನ (SSA) ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (RMSA) ಯೋಜನೆಯಡಿಯಲ್ಲಿ ಆಯ್ಕೆಯಾಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಕಳೆದ ಎಂಟು ತಿಂಗಳಿನಿಂದ ವೇತನ ಬಟವಾಡೆಯಾಗಿರುವುದಿಲ್ಲ. ಕಲಬುರಗಿ ವಿಭಾಗದ ಖಾಯಂ (ರೆಗ್ಯೂಲರ್) ಪ್ರೌಢ ಶಾಲಾ ಶಿಕ್ಷಕರಿಗೆ ಕಳೆದ ಮೂರು ತಿಂಗಳಿಂದ ವೇತನ ಪಾವತಿಯಾಗಿರುವುದಿಲ್ಲವಾದ್ದರಿಂದ, ರಾಜ್ಯದಲ್ಲಿ ಸರ್ಕಾರಿ ಶಾಲಾ ಶಿಕ್ಷಕರ ಬದುಕು ಅತಂತ್ರವಾಗಿದ್ದು, ಜೀವನ ಸಾಗಿಸುವುದು ತುಂಬಾ ಕಷ್ಟವಾಗಿರುತ್ತದೆ. ಆದುದರಿಂದ ಶೂನ್ಯ ವೇಳೆಯಲ್ಲಿ ಶಿಕ್ಷಕರಿಗೆ ವೇತನ ಪಾವತಿಸುವಂತೆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೂ ಕೂಡ (RMSA) ಯೋಜನೆಯಡಿಯಲ್ಲಿ ಆಯ್ಕೆಯಾಗಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಕಳೆದ ಎಂಟು ತಿಂಗಳಿಂದ ವೇತನ ಬಟವಾಡೆಯಾಗಿರುವುದಿಲ್ಲ.

**ಡಾ॥ ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಖಂಡಿತವಾಗಿ ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿ ಅವರಿಂದ ನಂತರ ಉತ್ತರವನ್ನು ಒದಗಿಸಿಕೊಡಲಾಗುವುದು.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಶಾಸಕರುಗಳು ಹಾಗೂ ನೌಕರರಿಗೆ ಮಾತ್ರ ಕಾಲ ಕಾಲಕ್ಕೆ ಸಂಬಳ ಬರುತ್ತಿದೆ. ಆದರೆ, (SSA) ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (RMSA) ಯೋಜನೆಯಡಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ತವ್ಯ ನಿರ್ವಹಿಸುತ್ತಿರುವ ಸಾವಿರಾರು ಶಿಕ್ಷಕರಿಗೆ ಸಂಬಳ ಬರುತ್ತಿಲ್ಲವೆಂದರೆ, ಅವರು ಬದುಕುವುದಾದರೂ ಹೇಗೆ?

**ಇ) ವಿಷಯ:-** ಪಾನಮತ್ತ ಸಾಹಿತಿಗಳು ದೆಹಲಿಯ ಕರ್ನಾಟಕ ಭವನದಲ್ಲಿ ಗದ್ದಲ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ದೂರು ನೀಡಿದ ಬಗ್ಗೆ.

-----

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಪಾನಮತ್ತ ಸಾಹಿತಿಗಳ ಫಜೀತಿ, ದೆಹಲಿ ಕರ್ನಾಟಕ ಭವನದಲ್ಲಿ ಗದ್ದಲ, ದೂರು ನೀಡಿದ ನ್ಯಾಯಮೂರ್ತಿ. ಕನ್ನಡ ಭಾಷೆಗೆ ಸಂಬಂಧಿಸಿದ ಕೆಲಸಕ್ಕಾಗಿ ದೆಹಲಿಗೆ ಬಂದಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನಿಯೋಗದಲ್ಲಿದ್ದ ಕೆಲವು ಸದಸ್ಯರು ಬುಧವಾರ ರಾತ್ರಿ ಕರ್ನಾಟಕ ಭವನದಲ್ಲಿ ಮದ್ಯಪಾನ ಮಾಡಿ ಗಲಾಟೆ ಎಬ್ಬಿಸಿದ್ದಕ್ಕೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ದೆಹಲಿ ಪೋಲೀಸರಿಗೆ ದೂರು ಸಲ್ಲಿಸಿರುವ ಘಟನೆಯು ವಿಜಯವಾಣಿ ಸೇರಿದಂತೆ ದಿನಾಂಕ 07.02.2019ರ ಎಲ್ಲಾ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಕನ್ನಡ ಭಾಷೆಗೆ ಸಂಬಂಧಿಸಿದ ಕೆಲಸಕ್ಕಾಗಿ ಹೋದ ಕೆಲವು ಸಾಹಿತಿಗಳು ಮದ್ಯಪಾನ ಮಾಡಿ ಜೋರಾಗಿ ಮಾತನಾಡುತ್ತಿರುವುದರಿಂದ, ತಮಗೆ ತೊಂದರೆಯಾಗುತ್ತಿರುವುದಾಗಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ತಮ್ಮ ಸಿಬ್ಬಂದಿಗಳ ಮೂಲಕ ಸಾಹಿತಿಗಳಿಗೆ ತಿಳಿಸಿದರೂ ಅವರು ಮಾಡುತ್ತಿದ್ದ ಗಲಾಟೆಯನ್ನು ಮಾತ್ರ ನಿಲ್ಲಿಸಿರಲಿಲ್ಲ. ಹೀಗಾಗಿ, ಸ್ವತಃ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳೇ ಚಾಣಕ್ಯಪುರಿ ಪೋಲೀಸ್ ಠಾಣೆಗೆ ದೂರವಾಣಿ ಮೂಲಕ ಮೌಖಿಕ ದೂರು ನೀಡಿ, ಪೋಲೀಸರ ಮೂಲಕ ಮದ್ಯಪಾನದಲ್ಲಿ ತೊಡಗಿದ್ದವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸುವಂತೆ ಸೂಚಿಸಬೇಕು ಎಂದಿರುವುದು ವರದಿಯಾಗಿದೆ. ಈ ಕುರಿತು ರಾಜ್ಯ ಸರ್ಕಾರವು ರಾಜ್ಯಕ್ಕೆ ಮುಜುಗರ ತರುವಂತಹ ಘಟನೆಯ ಬಗ್ಗೆ ವರದಿಯನ್ನು ಪಡೆಯಬೇಕು ಹಾಗೂ ಕರ್ನಾಟಕ ರಾಜ್ಯದ ಘನತೆಗೆ ಧಕ್ಕೆ ತರುವಂತಹ ಹಾಗೂ ಕಪ್ಪು ಚುಕ್ಕೆ ತಂದಿರುವ ಈ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಶೂನ್ಯ ವೇಳೆಯಲ್ಲಿ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಡಾ॥ ಜಯಮಾಲ(ಸಭಾನಾಯಕರು):–**ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರಿಂದ ನಂತರ ಉತ್ತರ ಒದಗಿಸಿಕೊಡಲಾಗುವುದು.

**ಈ) ವಿಷಯ:–** ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ವಿಭಜಿಸುತ್ತಿರುವ ಬಗ್ಗೆ.

–––––

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದ ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗಾಗಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಬೆಳಗಾವಿಯಲ್ಲಿ ಸ್ಥಾಪಿಸಲಾಗಿದ್ದು, ವಿದ್ಯಾರ್ಥಿಗಳ ಮತ್ತು ಕಾಲೇಜುಗಳ ಅನುಕೂಲಕ್ಕಾಗಿ ಈ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳನ್ನು ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ ಹಾಗೂ ಮುದ್ದೇನಹಳ್ಳಿಯಲ್ಲಿ ಸ್ಥಾಪಿಸಲಾಗಿರುತ್ತದೆ. ಇಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ., ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಆಯಾಯ ಭಾಗದ ತಾಂತ್ರಿಕ ಕಾಲೇಜುಗಳ ಸಮಸ್ಯೆಗಳನ್ನು ಅಲ್ಲಿಯೇ ಬಗೆಹರಿಸುವ ಹಿನ್ನೆಲೆಯಲ್ಲಿ, ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೇಂದ್ರ ಸರ್ಕಾರವು ತಾಂತ್ರಿಕ ಶಿಕ್ಷಣಕ್ಕೆ ಉತ್ತೇಜನ ಕೊಡುವ ಉದ್ದೇಶದಿಂದ ಹಾಗೂ ನಮ್ಮ ವಿದ್ಯಾರ್ಥಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಸ್ಪರ್ಧಿಯಾಗಿ ನಿಲ್ಲಲು ಶಕ್ತಿ ತುಂಬುವ ಪ್ರಯತ್ನ ಮಾಡುತ್ತಿರುವ ಈ ಸಂದರ್ಭದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ವಿಭಜನೆ ಮಾಡಲು ಹೊರಟಿರುವುದು ದುಃಖಕರ ಸಂಗತಿಯಾಗಿದೆ. ಇದರಿಂದ ಅತ್ಯಂತ ಗಂಭೀರ ಸ್ವರೂಪದ ಪರಿಣಾಮವನ್ನು ಬೀರಲಿದೆ. ಬೆಳಗಾವಿ ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಕಳೆದ ಮೂರು ದಿನಗಳಿಂದ ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಈ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಭಜನೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿರುವ ಈ ಗಂಭೀರ ವಿಚಾರವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಇದು ಬಹಳ ಗಂಭೀರವಾದಂತಹ ವಿಷಯವಾಗಿದೆ. Federation of Karnataka Chamber of Commerce and Industry (FKCCI) ನಲ್ಲೂ ಕೂಡ resolution ಆಗಿದೆ. ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾವು ಈಗ ಸುಮ್ಮನೆ ಕುಳಿತುಕೊಂಡರೆ, VTU (Visvesvaraya Technological

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

University) ಬಂದ್ ಆಗುತ್ತದೆ. ಇದನ್ನು ಬಂದ್ ಮಾಡಿದರೆ ಆ ಭಾಗದ ಜನರಿಗೆ ಬಹಳ ಅನ್ಯಾಯವಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, VTU ಇದು worldwide ಹೆಸರು ಪಡೆದಂತಹ ವಿಶ್ವವಿದ್ಯಾಲಯವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಇರುವಂತೆ, ಉತ್ತರ ಕರ್ನಾಟಕದಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇದೆ. ಇದನ್ನು ವಿಭಜನೆ ಮಾಡಿದರೆ ಉತ್ತರ ಕರ್ನಾಟಕ ಭಾಗದ ಜನರು ಕಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಉತ್ತರ ಕರ್ನಾಟಕದಲ್ಲಿರುವ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಅತ್ಯಂತ ಒಳ್ಳೆಯ ವಿಶ್ವವಿದ್ಯಾಲಯ ಆಗಿದೆ. ಸರ್ಕಾರದಿಂದ ಒಂದು ಪೈಸೆ ಅನುದಾನವನ್ನು ಪಡೆದುಕೊಳ್ಳದೇ ತನ್ನ ಕಾಲ ಮೇಲೆ ತಾನು ನಿಂತು ಕೆಲಸ ಮಾಡುತ್ತಿದೆ. ಈಗ ಅದನ್ನು ವಿಭಜನೆ ಮಾಡಿದರೆ ಹೇಗೆ? ಉತ್ತರ ಕರ್ನಾಟಕ ಭಾಗದ ಶಾಸಕರಿಗೆ ಕೈತಪ್ಪಿರುವ ಸಚಿವ ಸ್ಥಾನವನ್ನು ಹೇಳುತ್ತೇನೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಜಲಸಂಪನ್ಮೂಲ, ಬೃಹತ್ ಕೈಗಾರಿಕೆ, ಗ್ರಾಮೀಣಾಭಿವೃದ್ಧಿ, ವಸತಿ, ಕೃಷಿ, ಆಹಾರ ಮತ್ತು ನಾಗರಿಕ ಸರಬರಾಜು, ಕಾರ್ಮಿಕ, ಹಿಂದುಳಿದ ವರ್ಗಗಳ ಕಲ್ಯಾಣ, ನಗರಾಭಿವೃದ್ಧಿ, ಉನ್ನತ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ಲೋಕೋಪಯೋಗಿಯಂತಹ ಪ್ರಮುಖ ಖಾತೆಗಳು ದಕ್ಷಿಣದವರ ಕೈನಲ್ಲೇ ಇದ್ದು, ಇದರಿಂದ ಉತ್ತರ ಕರ್ನಾಟಕ ಭಾಗದ ಶಾಸಕರು ವಂಚಿತರಾಗಿದ್ದೇವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಸರ್ಕಾರದ ಪ್ರಮುಖ ಸಚಿವ ಸ್ಥಾನಗಳನ್ನೆಲ್ಲಾ ದಕ್ಷಿಣ ಕರ್ನಾಟಕದವರು ಪಡೆದುಕೊಂಡಿರುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಉತ್ತರ ಕರ್ನಾಟಕ ಭಾಗದ ಶಾಸಕರಿಗೆ ಬರೀ ಈರುಳ್ಳಿ ಮತ್ತು ಬೆಳ್ಳುಳ್ಳಿ ಖಾತೆ ನೀಡಲಾಗಿದೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೆ, ಮಾನ್ಯ ಮುಖ್ಯಮಂತ್ರಿಯವರು ಸದನಕ್ಕೆ ಬಂದಾಗ ಕೇಳಿ.

**ಡಾ|| ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ತರಿಸಿಕೊಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲ್ಪಟ್ಟ ವಿಷಯಗಳನ್ನು ಮಾತ್ರ ಮಾತನಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಶೂನ್ಯ ವೇಳೆಯಲ್ಲಿ ಮಾತನಾಡಬಾರದೆಂದು ಹೇಳುತ್ತಿದ್ದೀರಿ. ಆದರೆ ನಾನು ಈ ಸದನದ ಹಿರಿಯ ಸದಸ್ಯ. ಇದು ಬಹಳ ಗಂಭೀರವಾದಂತಹ ವಿಷಯವಾಗಿದ್ದು, ಚರ್ಚೆ ಮಾಡುವ ಅವಶ್ಯಕತೆ ಇದೆ. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಅವರು ಶೂನ್ಯವೇಳೆಯಲ್ಲಿ ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಇದನ್ನು ಮಾನ್ಯ ಮಂತ್ರಿಗಳು ಬಂದಾಗ ಹೇಳಿ.

**ಸಭಾಪತಿಯವರು:–** ತಾವು ಕೇಳುವ ಪ್ರಶ್ನೆಗೆ ಮಾನ್ಯ ಸಭಾನಾಯಕರು ಉತ್ತರ ಕೊಡುವುದಕ್ಕೆ ಆಗುತ್ತದೆಯೇ? ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ. . .

**ಡಾ॥ ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥಮಾಡಿಕೊಂಡಿದ್ದೇನೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದು, ನಂತರ ಅವರಿಂದ ಉತ್ತರ ಒದಗಿಸಲಾಗುವುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಇಡೀ ಉತ್ತರ ಕರ್ನಾಟಕ ಭಾಗಕ್ಕೆ ಅನ್ಯಾಯ ಆಗುವಂತಹ ನಿರ್ಣಯಗಳು ಆಗಬಾರದೆಂದು ನಾನು ಕಡಾಖಂಡಿತವಾಗಿ ಹೇಳುವುದಕ್ಕೆ ಬಯಸುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ.

**ಸಭಾಪತಿಯವರು:–** ಆಯಿತು. ಮಾನ್ಯ ಸದಸ್ಯರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸರ್ಕಾರಕ್ಕೇನು ತೊಂದರೆ ಆಗಿದೆ? ನಾವು ಅಲ್ಲಿಂದ ಬೆಂಗಳೂರಿಗೆ ಬರುವುದಕ್ಕೆ ಸುಮಾರು 500 ಕಿ.ಲೋ ಮೀಟರ್ ಆಗುತ್ತದೆ. ನಾವು ಎಲ್ಲಾ ಪ್ರಮುಖ ಖಾತೆಗಳ ಬಗ್ಗೆ ಚರ್ಚೆ ಮಾಡಬೇಕೆಂದಿದ್ದೇವೆ. (ಗೊಂದಲ) ಜನ ಏನು ಅನ್ನುತ್ತಾರೆ ಹೇಳಿ?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

**ಉ) ವಿಷಯ:–** ಆರೋಗ್ಯ ಇಲಾಖೆಯ ಸಿಬ್ಬಂದಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಕುರಿತು.

-----

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅನಿರ್ಧಿಷ್ಟಾವಧಿ ಮುಷ್ಕರದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಿನಂತಿಸುತ್ತೇನೆ.

ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಯೋಜನೆಯಡಿ ರಾಜ್ಯಾದ್ಯಂತ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಹಾಗೂ ಒಳಗುತ್ತಿಗೆ ನೌಕರರು ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟ ಅವಧಿಗೆ ಮುಷ್ಕರವನ್ನು ನಡೆಸುತ್ತಿದ್ದಾರೆ. ಸೇವಾ ಭದ್ರತೆ ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವಂತೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಈ ವಿಷಯವು ಈ ದಿನದ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಆರೋಗ್ಯ ಇಲಾಖೆಯಲ್ಲಿ ಸುಮಾರು 30 ಸಾವಿರ ಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದು, ಅವರಿಗೆ ಇಲಾಖೆಯ ಸಿಬ್ಬಂದಿಯಷ್ಟು ವೇತನ ಸಿಗುತ್ತಿಲ್ಲ. ವೇತನ ತಾರತಮ್ಯ ಸಾಕಷ್ಟಿರುತ್ತದೆ. ಈಗಾಗಲೇ ದೆಹಲಿ ಮತ್ತು ಹರಿಯಾಣ ರಾಜ್ಯದಲ್ಲಿ ಇದೇ ರೀತಿ ಕೆಲಸ ಮಾಡುತ್ತಿರುವ ನೌಕರರಿಗೆ ಸೇವಾ ನಿಯಮಾವಳಿಗಳನ್ನು ರೂಪಿಸಲಾಗಿದೆ. ಅಲ್ಲದೇ ನಮ್ಮ ರಾಜ್ಯದಲ್ಲಿ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಾವಳಿಗಳನ್ನು ರಚಿಸಿ ದಿನಗೂಲಿ ನೌಕರರಿಗೆ ಸೇವಾ ಭದ್ರತೆ ನೀಡಲಾಗಿದೆ. ರಾಜ್ಯದ ಬಡ ಜನರ ಆರೋಗ್ಯದ ಬಗ್ಗೆ ತಳಮಟ್ಟದಲ್ಲಿ ಕೆಲಸ ಮಾಡುವುದರ ಮೂಲಕ ಕಾಳಜಿ ವಹಿಸುತ್ತಿರುವ ಈ ಸಿಬ್ಬಂದಿಗಳ ಬೇಡಿಕೆಗಳು ನ್ಯಾಯಸಮ್ಮತವಾಗಿವೆ. ಇವರ ಮುಷ್ಕರದಿಂದ ರಾಜ್ಯದ ಆರೋಗ್ಯ ಇಲಾಖೆಯ ವ್ಯವಸ್ಥೆ ಭಾಗಶಃ ಸ್ಥಗಿತಗೊಂಡಿದೆ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಇವರ ಬೇಡಿಕೆಗಳ ಬಗ್ಗೆ ಸಹಾನುಭೂತಿಯಿಂದ ಹಾಗೂ ಮಾನವೀಯತೆಯಿಂದ ಪರಿಶೀಲಿಸಿ ಅನುಕೂಲ ಮಾಡಿಕೊಡಲು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ॥ ಜಯಮಾಲ ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಆರೋಗ್ಯ ಸಚಿವರಿಂದ ಉತ್ತರ ಒದಗಿಸಿಕೊಡಲಾಗುವುದು.

**ಊ) ವಿಷಯ:–** ಹುಬ್ಬಳ್ಳಿ–ಧಾರವಾಡ ಜಿಲ್ಲೆಯ ಗ್ರಾಮಾಂತರ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಬಿಡುಗಡೆಯಾಗದಿರುವ ಬಗ್ಗೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

-----

**ಶ್ರೀ ಎಸ್.ವ್ಹಿ.ಸಂಕನೂರ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ಹುಬ್ಬಳ್ಳಿ-ಧಾರವಾಡ ಶಹರ ಮತ್ತು ಗ್ರಾಮಾಂತರ ಹಾಗೂ ಇನ್ನಿತರ ಜಿಲ್ಲೆಗಳಲ್ಲಿನ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಡಿಸೆಂಬರ್ ಹಾಗೂ ಜನವರಿ ತಿಂಗಳ ವೇತನ ಬಿಡುಗಡೆಯಾಗಿರುವುದಿಲ್ಲ. ಈ ಕುರಿತು ಅನುದಾನಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರ ಸಂಘಟನೆಯ ಪದಾಧಿಕಾರಿಗಳು, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರಿಗೆ ಮನವಿ ಸಲ್ಲಿಸಿದ್ದು, ಇದರಿಂದ ಯಾವುದೇ ಪ್ರಯೋಜನವಾಗಿರುವುದಿಲ್ಲ. ಈ ಕುರಿತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರನ್ನು ವಿಚಾರಿಸಿದಾಗ ಆರ್ಥಿಕ ಇಲಾಖೆಯಿಂದ ವೇತನಾನುದಾನ ಇನ್ನೂ ಬಿಡುಗಡೆಯಾಗಿರುವುದಿಲ್ಲ ಎಂದು ಉತ್ತರ ನೀಡುತ್ತಿದ್ದಾರೆ.

ಎರಡು ತಿಂಗಳ ವೇತನ ಇಲ್ಲದೆ, ಸಾವಿರಾರು ಶಿಕ್ಷಕರಿಗೆ ಕುಟುಂಬದ ನಿರ್ವಹಣೆಯನ್ನು ಮಾಡಲು ತೊಂದರೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಅನುದಾನಿತ ಶಿಕ್ಷಣ ಸಂಸ್ಥೆಗಳ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಬೀದಿಗೆ ಇಳಿದು ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆಂದು ಪತ್ರಿಕಾ ಹೇಳಿಕೆ ನೀಡಿರುತ್ತಾರೆ.

ಆದ್ದರಿಂದ 2 ತಿಂಗಳ ಬಾಕಿ ವೇತನ ಬಿಡುಗಡೆ ಮಾಡಲು ತಮ್ಮ ಮೂಲಕ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

**ಡಾ॥ ಜಯಮಾಲ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ತರಿಸಿಕೊಡಲಾಗುವುದು.

## 8. ವರದಿಯನ್ನೊಪ್ಪಿಸುವುದು

**ಅ) ಶ್ರೀ ಸಿ.ಎಂ.ಲಿಂಗಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಸದಸ್ಯನಾದ ನಾನು ಸಮಿತಿಯ ಪರವಾಗಿ 2018-19ನೇ ಸಾಲಿನ 34ನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(57)13.2.2019/1.40/ಎಂ.ಎಂ-ಕೆ.ಎಸ್**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಆ) ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹದಿನೈದನೇ ವಿಧಾನಸಭೆಯ 2018–19ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಸದಸ್ಯನಾದ ನಾನು ಸಮಿತಿಯ ಪರವಾಗಿ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ಔಕಾಫ್ (ವಕ್ಫ್) ಇಲಾಖೆಗೆ ಸಂಬಂಧಿಸಿದ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಸಭಾಪತಿಯವರು:–** ವರದಿಯನ್ನೊಪ್ಪಿಸಲಾಯಿತು.

**9.ವಿತ್ತೀಯ ಕಾರ್ಯಕಲಾಪಗಳು**

**ಡಾ॥ ಜಯಮಾಲ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2018–19ನೇ ಸಾಲಿನ ಪೂರಕ ಅಂದಾಜುಗಳ 2ನೇ ಕಂತನ್ನು ಮಂಡಿಸುತ್ತಿದ್ದೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಿರುವ ಹಕ್ಕುಚ್ಯುತಿ ಪ್ರಸ್ತಾವವನ್ನು ಕೈಗೆತ್ತಿಕೊಳ್ಳಬೇಕೆಂದು ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಿಲುವಳಿ ಸೂಚನೆಯನ್ನು ಏಕೆ ಕಳುಹಿಸಿಕೊಟ್ಟಿದ್ದೇನೆ ಎಂಬುದನ್ನು ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಈಗ ತಾವು ನೀಡಿರುವ ನಿಲುವಳಿ ಸೂಚನೆಗೆ ಉತ್ತರಿಸಲು ಇಲ್ಲಿ ಸಚಿವರಿಲ್ಲ, ಇದಕ್ಕೆ ಸಚಿವರಿದ್ದರೆ ಒಳ್ಳೆಯದು. ಅದನ್ನು ಭೋಜನ ವಿರಾಮದ ನಂತರ ತೆಗೆದುಕೊಳ್ಳಲಾಗುವುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸಚಿವರನ್ನು ಕರೆಸುತ್ತೀರಾ?

**ಸಭಾಪತಿಯವರು:–** ಹೌದು ಕರೆಸುತ್ತೇವೆ. ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(58)13/02/2019/3:40/ಎಸ್‌ಪಿಆರ್/ಎಂಡಿ**

**(ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 01 ಗಂಟೆ 42 ನಿಮಿಷಕ್ಕೆ ಮುಂದೂಡಲ್ಪಟ್ಟು ಸದನವು ಪುನಃ ಮಧ್ಯಾಹ್ನ 03 ಗಂಟೆ 43 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಮಂಡಿಸಲು ನನಗೆ ಅವಕಾಶ ನೀಡಬೇಕೆಂದು ಕೋರುತ್ತೇನೆ.

## 10. ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ

**ಸಭಾಪತಿಯವರು:–** ಈಗ ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ. ಈ ದಿನ ಅಂದರೆ ದಿನಾಂಕ 13/02/2019 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ದಿನಾಂಕ 13/02/2019 ರಿಂದ ದಿನಾಂಕ 15/02/2019 ರವರೆಗೆ ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲು ತೀರ್ಮಾನಿಸಲಾಯಿತು.

ಈ ದಿನ ಅಪರಾಹ್ನ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ, ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ, ಇದಕ್ಕೆ ಸರ್ಕಾರದಿಂದ ಉತ್ತರ ಹಾಗೂ ವಂದನಾರ್ಪಣಾ ನಿರ್ಣಯವನ್ನು ಮಂಡಿಸುವುದು. ದಿನಾಂಕ 14/02/2019 ರಂದು ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಪ್ರಶ್ನೋತ್ತರ. ದಿನಾಂಕ 15/02/2019 ರಂದು ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಇದಕ್ಕೆ ಸರ್ಕಾರದಿಂದ ಉತ್ತರ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಪ್ರಶ್ನೋತ್ತರ. ಈ ವರದಿಗೆ ಸದನದ ಅಂಗೀಕಾರವಿದೆ ಎಂದು ಭಾವಿಸುತ್ತೇನೆ.

## 11. ಹಕ್ಕುಚ್ಯುತಿ ಪ್ರಸ್ತಾವ

**ವಿಷಯ:– ಸೆಕ್ಷನ್ 144ನ್ನು ಉಲ್ಲಂಘಿಸಿರುವರೆಂಬ ಆಪಾದನೆ ಮೇಲೆ ವಿರೋಧ ಪಕ್ಷದ ಸದಸ್ಯರು ಹಾಗೂ ಅವರ ಕುಟುಂಬದವರ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಿಸಿರುವ ಬಗ್ಗೆ**

* * *

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾವುಗಳು ಹಳ್ಳಿಗಳ ಹಿನ್ನೆಲೆಯಿಂದ ಬಂದವರು. ಶಾಲೆಯಿಂದ ಮೊದಲುಗೊಂಡು ಸ್ನಾತಕೋತ್ತರ ಪದವಿ ಪಡೆಯುವವರೆಗೆ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಓದಿದ್ದೇವೆ. ಸರ್ಕಾರಿ ವ್ಯವಸ್ಥೆಯಲ್ಲಿ ನಾನು ಶಿಕ್ಷಣವನ್ನು ಪೂರ್ಣಗೊಳಿಸಿದ್ದೇನೆ. ನನ್ನ ತಂದೆ–ತಾಯಿಯರು, ಜೀವನದಲ್ಲಿ ಪೊಲೀಸ್ ಠಾಣೆಗೆ ಹೋಗಬೇಡ ಎಂಬಂತಹ ಮಾತನ್ನು ಯಾವಾಗಲೂ ಹೇಳುತ್ತಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನೀವು ಭಾಷಣ ಮಾಡಬೇಡಿ. ಹಕ್ಕುಚ್ಯುತಿ ಪ್ರಸ್ತಾವನೆ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಜೀವನದಲ್ಲಿ ಕೋರ್ಟು–ಕಛೇರಿಗಳಿಗೆ ಹೋಗಬೇಡಿ ಎಂಬುದಾಗಿ ಹೇಳುತ್ತಿದ್ದರು. ನಮ್ಮ ತಂದೆ–ತಾಯಿಗಳು ಅಕ್ಷರಸ್ಥರಾಗಿರಲಿಲ್ಲದಿದ್ದರೂ ಸಹ ಬಹಳ ಒಳ್ಳೆಯ ಮಾತನ್ನು ನಮಗೆ ಹೇಳಿದ್ದಾರೆ. ನನ್ನ ಜೀವನದಲ್ಲಿ ಇದುವರೆವಿಗೆ ಆರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದೇನೆ. ಆ ಪೈಕಿ ಐದರಲ್ಲಿ ಜಯ ಸಾಧಿಸಿ, ಒಂದರಲ್ಲಿ ಸೋತಿದ್ದೇನೆ. ನಾನು ಈ ಮುನ್ನ ಕಾಲೇಜಿನಲ್ಲಿ ಉಪನ್ಯಾಸಕನಾಗಿ, ಪ್ರಾಧ್ಯಾಪಕನಾಗಿ ವಿದ್ಯಾರ್ಥಿಗಳಿಗೆ ಪಾಠ ಮಾಡಿ, ಸೇವೆ ಸಲ್ಲಿಸಿದ್ದೇನೆ. ಹೀಗಾಗಿ ಅಪರಾಧ ಮಾಡುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ಅದೇ ರೀತಿಯಾಗಿ ತಪ್ಪು ಮಾಡಿ, ಬೇರೆಯವರಿಗೆ ತೊಂದರೆ ಕೊಡುವುದಕ್ಕೂ ಸಹ ನನ್ನ ಮನಸ್ಸು ಒಪ್ಪುವುದಿಲ್ಲ. ಆದರೆ, ಬಹಳ ನೋವಿನ ಸಂಗತಿ ಏನೆಂದರೆ, 2016 ನೇ ಸಾಲಿನಲ್ಲಿ ಬೆಂಗಳೂರು ನಗರದ ಹೆಬ್ಬಾಳ ಕ್ಷೇತ್ರದ ಚುನಾವಣೆಯ ಮರು ಮತದಾನದ ಸಂದರ್ಭದಲ್ಲಿ ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 144ನ್ನು ಉಲ್ಲಂಘನೆ ಮಾಡಿದ್ದೇನೆ ಎನ್ನುವ ಆರೋಪದಡಿ ಸದರಿ ಠಾಣೆಯ ಅಂದಿನ ವೃತ್ತ ನಿರೀಕ್ಷಕರಾದ ಶ್ರೀ ಸಂಜಯ ವರ್ಣೇಕರ್ ಎಂಬುವವರು ನನ್ನ ಮೇಲೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದರು. ಅಂದಿನ ವ್ಯವಸ್ಥೆಯಲ್ಲಿ ರಾಜಕೀಯದ ಮೂರು ಪಕ್ಷಗಳಾದ ಕಾಂಗ್ರೆಸ್, ಜೆ.ಡಿ.(ಎಸ್) ಮತ್ತು ಬಿ.ಜೆ.ಪಿ.ಗಳು ದೊಡ್ಡ ಪ್ರಮಾಣದಲ್ಲಿ ಗಲಾಟೆ ಮಾಡಿದ್ದನ್ನು ಇಡೀ ರಾಜ್ಯವು ನೋಡಿದೆ. ಆಗಿನ 12ನೇ ತಾರೀಖಿನಂದು ಮತದಾನವು ನಡೆದಿತ್ತು. ಆಗ ಒಂದು ಮತದಾನ ಕಟ್ಟೆಯಲ್ಲಿ ಮತದಾನದ ಯಂತ್ರವು ಕೆಟ್ಟುಹೋಗಿತ್ತು ಎನ್ನುವ ಕಾರಣಕ್ಕೆ...

**ಸಭಾಪತಿಯವರು:–** ಆ ವಿಷಯಗಳು ಈಗ ಬೇಡ.

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹಕ್ಕುಚ್ಯುತಿ ವಿಷಯವನ್ನು ಹೇಳುತ್ತೇನೆ. ಮರುಮತದಾನವು ನಡೆದಿತ್ತು. ಆ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಟಿ.ವಿ.ಚಾನೆಲ್‌ಗಳಲ್ಲಿ ಇದೇ ವಿಷಯ ಪ್ರಸಾರವಾಗಿತ್ತು ಹಾಗೂ ದಿನಪತ್ರಿಕೆಗಳಲ್ಲಿ ಇದೇ ವಿಷಯ ಪ್ರಕಟವಾಗಿತ್ತು. ಇದನ್ನು ಎಲ್ಲರೂ ನೋಡಿದ್ದಾರೆ. ರಾಜಕೀಯದ ಮೂರು ಪಕ್ಷಗಳ ಗುಂಪುಗಳು ಗಲಾಟೆ ಮಾಡಿದ್ದಾಗ್ಯೂ ಸಹ... ನಾನು ಹಕ್ಕುಚ್ಯುತಿ ಅಂಶವನ್ನು ಹೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಚುನಾವಣೆ ವಿಚಾರಗಳು ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲ. ನಿಮ್ಮ ಪ್ರಸ್ತಾವನೆಯು ಹಕ್ಕುಚ್ಯುತಿ ವ್ಯಾಪ್ತಿಗೆ ಹೇಗೆ ಒಳಪಡುತ್ತದೆ ಎಂಬುದಕ್ಕಷ್ಟೇ ಸೀಮಿತವಾಗಿ ನೀವು ಮನವರಿಕೆ ಮಾಡಿ ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಅಷ್ಟಕ್ಕೇ ಸೀಮಿತವಾಗಿ ಮಾತ್ರವೇ ಹೇಳುತ್ತೇನೆ. ಆದರೆ ನನ್ನ ವಿರುದ್ಧ ಮಾತ್ರವೇ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದಾರೆ.

**ಡಾ||ಜಯಮಾಲ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ, ಇದರ ಬಗೆಗಿನ ಯಾವುದೇ ಮಾಹಿತಿಗಳು ನಮ್ಮ ಬಳಿ ಇಲ್ಲ.

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಭಾರತೀಯ ದಂಡ ಸಂಹಿತೆಯ ಕಲಂ 143, 147 ಸಹವಾಚನ 149 ಗಳನ್ವಯ ನನ್ನ ವಿರುದ್ಧ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದರು. ನಾನು ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ, ಸದರಿ ಪೊಲೀಸ್ ಠಾಣೆಯಿಂದ ನಮ್ಮ ಮನೆಯು ಕೇವಲ ಅರ್ಧ ಕಿಲೋಮೀಟರ್ ವ್ಯಾಪ್ತಿಯಲ್ಲಿದೆ. ನನ್ನ ಮನೆಯ ಹಿಂಭಾಗದಲ್ಲಿ ಪೊಲೀಸ್ ಠಾಣೆಯು ಇದೆ. ಅವರಿಗೆ ನನ್ನ ಮೇಲೆ ಯಾವ ರೀತಿಯಾದ ದ್ವೇಷ ಇತ್ತು ಎಂಬುದು ನನಗೆ ತಿಳಿದಿಲ್ಲ. ಆದರೆ, ಪೊಲೀಸರು ಸದರಿ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸುವ ಮುನ್ನ ನನ್ನ ವಿಚಾರಣೆ ಮಾಡಬೇಕಾಗಿತ್ತು, ನನಗೆ ನೋಟೀಸ್ ನೀಡಬೇಕಾಗಿತ್ತು ಅಥವಾ ನನ್ನನ್ನು ಠಾಣೆಗೆ ಕರೆಸಬೇಕಾಗಿತ್ತು. ಒಂದು ವೇಳೆ ನಾನು ಪೊಲೀಸರಿಗೆ ದೊರೆಯದಿದ್ದರೆ ಕನಿಷ್ಠ ಪಕ್ಷ ನನ್ನ ಮನೆಗೆ ನೋಟೀಸ್‌ನ್ನಾದರೂ ಅಂಟಿಸಬೇಕಾಗಿತ್ತು. ಇಂತಹ ಯಾವುದೇ ರೀತಿಯ ಕ್ರಮಗಳನ್ನು ತೆಗೆದುಕೊಳ್ಳದೇ ನನ್ನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುತ್ತಾರೆ. ಆ ಸಂದರ್ಭದಲ್ಲಿ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದೆನು. ಘಟನೆ ನಡೆದ ಮೂರು ತಿಂಗಳ ಅವಧಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಮುನ್ನ ನಾನು ಅದೇ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 28 ಕಾರ್ಯಕ್ರಮಗಳನ್ನು ಮಾಡಿದ್ದೇನೆ. ಅವುಗಳಿಗೆಲ್ಲಾ ಅದೇ ಪೊಲೀಸರು ರಕ್ಷಣೆ ನೀಡುತ್ತಾರೆ. ಆದರೆ ಈ ವಿಚಾರವಾಗಿ ನನ್ನ ಜೊತೆ ಯಾರೂ ಸಹ ಮಾತನಾಡಿರುವುದಿಲ್ಲ ಹಾಗೂ ನನ್ನ ವಿಚಾರಣೆ ಮಾಡಿ, ಯಾವುದೇ ಹೇಳಿಕೆಗಳನ್ನು ತೆಗೆದುಕೊಳ್ಳುವುದಿಲ್ಲ ಅಥವಾ ಪೊಲೀಸ್ ಠಾಣೆಗೆ ಕರೆಸುವುದಿಲ್ಲ. ಇನ್ನೂ ಮುಂದುವರೆದು ನನ್ನ ಮನೆಗೆ ಯಾವುದೇ ನೋಟೀಸ್‌ಗಳನ್ನೂ ಸಹ ಅಂಟಿಸುವುದಿಲ್ಲ. ಇಂತಹ ಯಾವುದೇ ಕ್ರಮಗಳನ್ನು ಪೊಲೀಸರು ತೆಗೆದುಕೊಳ್ಳದೇ ಏಕಾಏಕಿಯಾಗಿ ನಾನು ತಲೆಮರೆಸಿಕೊಂಡಿದ್ದೇನೆ ಎನ್ನುವ ಆರೋಪವನ್ನು ನನ್ನ ಮೇಲೆ ಹೊರೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ಅದರ ಸಿ.ಸಿ.ಸಂಖ್ಯೆ 25192/2018 ಆಗಿರುತ್ತದೆ. ಶಾಸಕರು ತಲೆಮರೆಸಿಕೊಂಡಿದ್ದಾರೆಂದು ಪೊಲೀಸರು ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಮಾಡಿರುವುದಕ್ಕೆ ಅಂದಿನ ಮಾನ್ಯ ನ್ಯಾಯಾಧೀಶರು ಗರಂ ಆಗುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(59) 03:50 13-02-2019 ಸಿಎಸ್/ಎಂಡಿ**

**ಡಾ॥ ವೈ.ಎ.ನಾರಾಯಣ ಸ್ವಾಮಿ (ಮುಂದು):-**

ಶಾಸಕರು ತಲೆ ಮರೆಸಿಕೊಳ್ಳುವುದಕ್ಕೆ ಸಾಧ್ಯವೇ? Charge Sheet ನಲ್ಲಿ ಈ ರೀತಿ ಬರೆಯಲು ಕಾರಣವೇನು? ಎಂದು ಸಂಬಂಧಪಟ್ಟ DCP (Deputy Commissioner of Police) ಮತ್ತು ಪ್ರಕರಣದ ತನಿಖಾಧಿಕಾರಿಗಳು ಖುದ್ದು ಹಾಜರಾಗಿ ಪ್ರಮಾಣ ಪತ್ರದ ಮೂಲಕ ವಿವರಣೆಯನ್ನು ನೀಡಬೇಕೆನ್ನುವ ನಿರ್ದೇಶನವನ್ನು ನೀಡುತ್ತಾರೆ. ಮಾನ್ಯ ಸಭಾಪತಿಗಳೇ, ಕಳೆದ 13 ವರ್ಷಗಳಿಂದಲೂ ಸಹ ನಾನು ಈ ಸದನದ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ಎಲ್ಲಿಯೂ ನನ್ನ ರಾಜಕೀಯ ಜೀವನದಲ್ಲಿ ಒಂದು ಸಣ್ಣ ಕಪ್ಪು ಚುಕ್ಕೆ ಇಲ್ಲ. ಯಾರಿಗೂ ನಾನು ಅನ್ಯಾಯ ಮಾಡಿಲ್ಲ, ಯಾರಿಗೂ ನಾನು ತೊಂದರೆಯನ್ನು ಮಾಡಿರುವುದಿಲ್ಲ. ನನಗೆ ಏನಾದರೂ ನೋವಾದರೆ ಹಾಗೆಯೇ ನಾನು ನುಂಗಿಕೊಂಡು ಸುಮ್ಮನೆ ಇರುತ್ತೇನೆ. ಜೊತೆಗೆ ಈ ಪ್ರಕರಣಕ್ಕೆ ವ್ಯಾಪ್ತಿಯಲ್ಲಿ ಇಲ್ಲದಿದ್ದರೂ ಸಹ ನಮ್ಮ ಮನೆಯವರ ಮೇಲೆ ಮೊಕದ್ದಮೆಯನ್ನು ದಾಖಲಿಸಲಾಗಿದೆ. ಈ ವಿಚಾರ ಹಕ್ಕುಚ್ಯುತಿಗೆ ಬಾರದಿದ್ದರೂ ಸಹ ತಮ್ಮ ಗಮನಕ್ಕಾಗಿ ಈ ವಿಚಾರವನ್ನು ನಾನು ಪ್ರಸ್ತಾಪಿಸುತ್ತಿದ್ದೇನೆ. ನಮ್ಮ ಮನೆಯವರ ಮೇಲೆ ಎಫ್‌ಐಆರ್ ನಂಬರ್ 95/2018 ಅವರದ್ದೆ ಒಂದು complaint ತೆಗೆದುಕೊಂಡು IPC sections 354, 448, 504 and 149 ಪ್ರಕಾರ ನಮ್ಮ ಮನೆಯವರ ಮೇಲೆ ಕೇಸ್ ದಾಖಲಿಸಲಾಗಿದೆ. ಹೀಗಾದರೆ ನಾವು ಇರಬೇಕಾ, ಹೋಗಬೇಕಾ ಎನ್ನುವುದನ್ನು ತಾವು ಹೇಳಬೇಕು. ನಾವು ಮಾಡಿರುವ ಅಪರಾಧವಾದರೂ ಏನು? ನಾವು 144 ಸೆಕ್ಷನ್ ಅನ್ನು ಉಲ್ಲಂಘನೆ ಮಾಡಿದ್ದಲ್ಲಿ ನಮ್ಮ ಮೇಲೆ ಕೇಸನ್ನು ಹಾಕಲಿ. I am not above law, I am law abider and I should not become a law breaker. ನನಗೆ ಯಾವುದೇ ಚಿಂತೆ ಇಲ್ಲ. ನಿಜವಾಗಿಯೂ ಆ ಸೆಕ್ಷನ್ ಅನ್ನು ನಾನು ಉಲ್ಲಂಘನೆ ಮಾಡಿದ್ದಲ್ಲಿ ಅಥವಾ ನಾರಾಯಣಸ್ವಾಮಿ ಒಬ್ಬರ ಆ ಸೆಕ್ಷನ್ ಉಲ್ಲಂಘನೆ ಮಾಡಿದ್ದು, ಬೇರೆ ಪಕ್ಷಗಳವರು ಯಾರು ಹಾಗೆ ಮಾಡಲಿಲ್ಲವೆನ್ನುವುದನ್ನು ಅವರು ಸಾಬೀತು ಮಾಡಿದರೆ, today I am ready to face the trial, I am ready to face any punishment given by the Hon'ble Court. ಆದರೆ ನನ್ನ ಪ್ರಶ್ನೆ ಏನೆಂದರೆ ನಾನೊಬ್ಬ ವಿಧಾನ ಪರಿಷತ್ತಿನ ಸದಸ್ಯನಾಗಿದ್ದರೂ ಸಹ Charge Sheet ಹಾಕಬೇಕಾದರೆ ನಮ್ಮನ್ನು ಇಷ್ಟು ಕಡೆಗಣನೆ ಮಾಡಿ, ನನ್ನನ್ನು absconding ಎಂದು ತೋರಿಸಿದರೆ ನನ್ನ ಗತಿಯೇನು? ನಮ್ಮ ತಂದೆತಾಯಿ, ಬಂಧುಬಳಗ ಅಥವಾ ನನ್ನ ಮಕ್ಕಳು ಏನೆಂದುಕೊಳ್ಳುತ್ತಾರೆ, ಅವರಿಗೆಲ್ಲ ನಾನೇನು ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಿ. ಶಿಕ್ಷಕರ ಕ್ಷೇತ್ರದಿಂದ ಗೆದ್ದು ಬಂದಿರುವ ನಾನು ನನ್ನ ಗೆಲ್ಲಿಸಿದಂತಹ ಶಿಕ್ಷಕರಿಗೆ ಏನು ಉತ್ತರ ನೀಡಲಿ? ನಾರಾಯಣಸ್ವಾಮಿಯವರು absconding ಆಗಿದ್ದಾರೆ ಎಂದು ಹೇಳಿದರೆ ನನ್ನಗತಿಯೇನು? ಇದರಿಂದ ನನ್ನ ಹಕ್ಕಿಗೆ ಚ್ಯುತಿಯಾಗಿದೆ, ನನ್ನ ಗೌರವಕ್ಕೆ ಧಕ್ಕೆಯಾಗಿದೆ, it is under malafide intension of a particular person. ದಯವಿಟ್ಟು ನಾನು ಆಗ್ರಹ ಮಾಡುತ್ತಿದ್ದೇನೆ. ಈಗ ಮಾನ್ಯ ಗೃಹ ಸಚಿವರು ಈ ಸದನದಲ್ಲಿಯೇ ಇದ್ದಾರೆ. ಅವರು ಆ ಪ್ರಕಾಶ್ ವರ್ಣೇಕರ್ ಎನ್ನುವ ಸರ್ಕಲ್ ಇನ್ಸ್‌ಪೆಕ್ಟರ್ ಸಂಜಯನಗರ ಪೋಲಿಸ್ ಠಾಣೆ, ಇವರನ್ನು ಈ ಕೂಡಲೇ suspend ಮಾಡಬೇಕು. ಆ ಅಧಿಕಾರಿಯನ್ನು suspend ಈ ನನ್ನ ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ತಾವು ಕಳುಹಿಸಿಕಬೇಕೆನ್ನುವ ಮನವಿಯನ್ನು ನಾನು ಬಹಳ ನೋವಿನಿಂದ ಬಹಳ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಏಕೆಂದರೆ ನನಗಾದ ಅನುಭವ ಬೇರೆ ಯಾರಿಗೂ ಆಗಬಾರದು. ದಯಮಾಡಿ ನನ್ನ track record ತೆಗೆದು ನೋಡಿ. ಒಂದು ಕೇಸ್ ಏನಾದರೂ ಇದಕ್ಕೆ ಮೊದಲು ನನ್ನ ಮೇಲೆ ದಾಖಲಾಗಿದ್ದರೆ, ಒಂದು ಎಫ್‌ಐಆರ್ ದಾಖಲಾಗಿದ್ದರೆ, ಒಂದು ಸಲ ನಾನು ಕೋರ್ಟಿಗೆ ಹೋಗಿದ್ದರೆ ಹೇಳಿ, ನಾನು ಈ ಸದನಕ್ಕೆ ತಲೆ ಬಾಗಿಸುತ್ತೇನೆ. ನನಗಾದ ಅನ್ಯಾಯ ಬೇರೆ ಯಾರಿಗೂ ಆಗಬಾರದು, ಎಲ್ಲ ಮಾನ್ಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ದಯಮಾಡಿ ಎಲ್ಲರೂ ನನ್ನ ರಕ್ಷಣೆಗೆ ಬರಬೇಕು. ಮಾನ್ಯ ಸಭಾಪತಿಗಳು ಆ ಅಧಿಕಾರಿಯನ್ನು suspend ಮಾಡಬೇಕೆಂದು ಗೃಹಮಂತ್ರಿಗಳಿಗೆ ತಾವು ಆದೇಶವನ್ನು ನೀಡಬೇಕು. ಹಾಗೆಯೇ ಈ ಪ್ರಕರಣವನ್ನು ಹಕ್ಕುಚ್ಯುತಿ ಸಮಿತಿಗೆ ಕಳುಹಿಸಬೇಕೆಂದು ಆಗ್ರಹಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಾ॥ ವೈ.ಎ.ನಾರಾಯಣಸ್ವಾಮಿಯವರು ಸಲ್ಲಿಸಿರುವ ಈ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ಇದು ಬಹಳ ಗಂಭೀರವಾದ ವಿಚಾರ. ಇಲ್ಲಿ ಪಕ್ಷದ ವಿಚಾರ ಬರುವುದಿಲ್ಲ. ಶಾಸಕರೊಬ್ಬರಿಗೆ ಇಷ್ಟು ಅನ್ಯಾಯ ಆಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಂಡು ನಂತರ ಹಕ್ಕುಚ್ಯುತಿ ಸಮಿತಿಗೆ ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಡಾ॥ವೈ.ಎ.ನಾರಾಯಣಸ್ವಾಮಿಯವರು ಸಲ್ಲಿಸಿರುವ ಈ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೇ, ನನಗೆ ರಕ್ಷಣೆಯನ್ನು ನೀಡಬೇಕು.

**ಸಭಾಪತಿಯವರು:-** ಈ ಪ್ರಕರಣವನ್ನು ಪರಿಶೀಲನೆ ಮಾಡುವುದಕ್ಕೆ ಹಕ್ಕುಚ್ಯುತಿ ಸಮಿತಿಗೆ ವಹಿಸಲಾಗಿರುತ್ತದೆ. ಇದಕ್ಕಿಂತ ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ಸಚಿವರು ನೀಡುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರ ಕುಟುಂಬ ಸದಸ್ಯರ ರಕ್ಷಣೆ ಪ್ರಮುಖವಾಗಿರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಅಧಿಕಾರಿಯ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

**ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು):-** ಈ ವಿಚಾರದಲ್ಲಿ ಸಭಾಪತಿಯವರು ರೂಲಿಂಗ್ ನೀಡಿದ್ದಾರೆ. ಸಮಿತಿಯಲ್ಲಿ ಇದರ ಬಗ್ಗೆ ವಿಚಾರಣೆಯನ್ನು ನಡೆಸಲಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಶಾಸಕರೊಬ್ಬರ ಮೇಲೆ ಸುಳ್ಳು ಕೇಸು ಹಾಕಿದಂತಹ ಪ್ರಕರಣದಲ್ಲಿ, ಇದು ಮೇಲ್ನೋಟಕ್ಕೆ ತಪ್ಪು ಎಂದು ಗೊತ್ತಾದಾಗ ಗೃಹ ಸಚಿವರ ಅಧೀನದಲ್ಲಿರುವ ಪೊಲೀಸ್ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ತನಿಖೆಯನ್ನು ಮಾಡಬಾರದೆಂದು ಎಲ್ಲಿದೆ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳು ಈ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗೆ ಒಪ್ಪಿಸಿದ್ದಾರೆ. ಸದರಿ ಸಮಿತಿಯಲ್ಲಿ ತಮ್ಮ ಪಕ್ಷದ ಸದಸ್ಯರು ಸಹ ಇದ್ದಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ:-** ಹಕ್ಕುಬಾಧ್ಯತಾ ಸಮಿತಿಯ ವರದಿ ಬರುವ ತನಕ ನಮಗೆ ರಕ್ಷಣೆ ಬೇಡವೇ?

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೇ, ತಾವು ಈ ಪ್ರಕರಣವನ್ನು ಪರಿಶೀಲಿಸಲು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿ ತಮ್ಮ ನಿರ್ಣಯ ಕೊಟ್ಟಿದ್ದೀರಿ. ಮಾನ್ಯ ಸದಸ್ಯರು ತಮಗೆ ಏನು ಅನ್ಯಾಯ ಆಗಿದೆ ಎನ್ನುವ ಮಾಹಿತಿಯನ್ನು ಸದನದ ಮುಂದೆ ಹೇಳಿದ್ದಾರೆ. ಆದರೆ ಸದರಿ ಪ್ರಕರಣದ ಬಗ್ಗೆ ನನಗೆ ಈಗ ಮಾಹಿತಿ ಇರುವುದಿಲ್ಲ. ಯಾವ ಸಂದರ್ಭದಲ್ಲಿ ಏನೇನು ಆಯಿತು ಎನ್ನುವ ಮಾಹಿತಿ ಇಲ್ಲದೇ ಸದನದಲ್ಲಿ ಉತ್ತರ ನೀಡುವುದು ತಪ್ಪಾಗುತ್ತದೆ. ಸಮಿತಿಯ ವರದಿ ಪಡೆದು ಕ್ರಮ ಕೈಗೊಳ್ಳಬಹುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಡಾ॥ **ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಗಳೇ, ಈ ಪ್ರಕರಣದ ಬಗ್ಗೆ ಸದರಿ ಅಧಿಕಾರಿ ಯಾವ ರೀತಿ ನನಗೆ ತೊಂದರೆ ಕೊಟ್ಟಿದ್ದಾರೆ ಎನ್ನುವ ಮಾಹಿತಿಯ ಪತ್ರವನ್ನು ಗೃಹ ಇಲಾಖೆಗೆ ಬರೆದಿದ್ದೇನೆ. ಗೃಹ ಮಂತ್ರಿಗಳ ಕಚೇರಿಗೆ ಪತ್ರ ಬರೆದರೂ ನಮಗೆ ರಕ್ಷಣೆ ಸಿಗದ ಕಾರಣ ಈ ಹಂತಕ್ಕೆ ನಾವು ತಲುಪಿದ್ದೇವೆ.

**ಶ್ರೀ ಎಂ.ಬಿ.ಪಾಟೀಲ್:–** ಮಾನ್ಯ ಸಭಾಪತಿಗಳ ಆದೇಶಾನುಸಾರ ಸಮಿತಿಗೆ ಇಲಾಖೆಯು ಎಲ್ಲಾ ಮಾಹಿತಿಗಳನ್ನು ಒದಗಿಸಿಸುತ್ತದೆ. ಸದರಿ ಪ್ರಕರಣದ ಬಗ್ಗೆ ಸಮಿತಿ ಪರಿಶೀಲನೆಯನ್ನು ನಡೆಸುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ಈ ಸಂದರ್ಭದಲ್ಲಿ ತಾವು ನಮ್ಮ ರಕ್ಷಣೆಗೆ ಬರಬೇಕು. ಗೃಹಸಚಿವರ ಅಧೀನದಲ್ಲಿರುವ ಒಬ್ಬ ಅಧಿಕಾರಿ, ಈ ಸದನದ ಶಾಸಕರ ಮೇಲೆ ನಡೆದುಕೊಂಡಿರುವ ರೀತಿಯ ವಿರುದ್ಧ ಆತನನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಯನ್ನು ಮುಂದುವರೆಸಲು ಆದೇಶ ನೀಡಬೇಕು.

**ಶ್ರೀ ಎಂ.ಬಿ.ಪಾಟೀಲ್:–** ಸದರಿ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಲಾಗಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರ ಮನವಿಯಂತೆ ಸದರಿ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ವಹಿಸಿರುವ ಕಾರಣ ಇದರ ಬಗ್ಗೆ ಇನ್ನೂ ಚರ್ಚೆ ಬೇಡ.

## 12. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 104ನೇ ನಿಯಮದ ಮೇರೆಗೆ ವಿಧಾನ ಸಭೆಯು ದಿನಾಂಕ 12–02–2018ರಂದು ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2018ನೇ ಸಾಲಿನ ಕರ್ನಾಟಕ ಋಣ ಪರಿಹಾರ ವಿಧೇಯಕ ಮತ್ತು ಭೂ ಸ್ವಾಧೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು(ಕರ್ನಾಟಕ ತಿದ್ದುಪಡಿ) ವಿಧೇಯಕ, 2019" ನ್ನು ಮತ್ತು ಈ ಕೆಳಕಂಡ ವಿಧೇಯಕಗಳನ್ನು ತಿದ್ದುಪಡಿಗಳಿಲ್ಲದೇ ಅಂಗೀಕರಿಸಿತೆಂದು ಹಾಗೂ ಈ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಆದಿ ಚುಂಚನಗಿರಿ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2019

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕ, 2019
3. ಆರ್.ವಿ.ವಿಶ್ವವಿದ್ಯಾಲಯ ವಿಧೇಯಕ, 2019
4. ಎನ್ಐಇ ವಿಶ್ವವಿದ್ಯಾನಿಲಯ ವಿಧೇಯಕ, 2019
5. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ(ತಿದ್ದುಪಡಿ) ವಿಧೇಯಕ, 2019
6. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕ, 2018

**13. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ**

**ವಿಷಯ:** ತ್ರಿವರ್ಣ ಧ್ವಜಕ್ಕೆ ಅಪಮಾನ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳದೇ ಇರುವ ಬಗ್ಗೆ.

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಹಿರೂರು ಗ್ರಾಮದಲ್ಲಿ ಒಂದು ಸರ್ಕಾರಿ ಶಾಲೆಯಿದ್ದು ಅಲ್ಲಿ 210 ಮಕ್ಕಳಿದ್ದಾರೆ. 10 ಜನ ಶಿಕ್ಷಕರಿದ್ದಾರೆ. ಮೊನ್ನೆ ಜನವರಿ 26ರಂದು ಗಣ ರಾಜ್ಯೋತ್ಸದ ದಿವಸ ಆ ಶಾಲೆಯ ಮಕ್ಕಳು ಮತ್ತು ಶಿಕ್ಷಕರು ಒಟ್ಟಾಗಿ ಬ್ಯಾಂಡ್ ಬಾರಿಸುತ್ತಾ, ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು ಗಣ ರಾಜ್ಯೋತ್ಸವದ ಮೆರವಣಿಗೆಯನ್ನು ಪ್ರಾರಂಭ ಮಾಡುತ್ತಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ರಚಿಸಿರುವ ಸಂವಿಧಾನವನ್ನು ನಮ್ಮ ದೇಶ ಅಳವಡಿಸಿಕೊಂಡ ದಿನ ಜನವರಿ 26 ರಂದು ಹಿರಿಯೂರು ಗ್ರಾಮದಲ್ಲಿ ಒಂದು ಸರ್ಕಾರಿ ಶಾಲೆಯ ತ್ರಿವರ್ಣ ಧ್ವಜವನ್ನು ಹಿಡಿದು ಮೆರವಣಿಗೆ ಮಾಡುತ್ತಾ, ಘೋಷಣೆಗಳನ್ನು ಕೂಗುತ್ತಿದ್ದರೆ ಆ ರಸ್ತೆಯ ತಿರುವಿನಲ್ಲಿ ಒಂದು ಪ್ರಾರ್ಥನಾ ಮಂದಿರ ಮತ್ತು ಒಂದು ದೇವಸ್ಥಾನವಿದೆ, ಪ್ರಾರ್ಥನ ಮಂದಿರದ ಎದುರಿಗೆ ಲೋಕೋಪಯೋಗಿ ಇಲಾಖೆಯ ರಸ್ತೆಯಿದೆ, ಆ ರಸ್ತೆಯ ಮೇಲೆ ಮೆರವಣಿಗೆ ಹೋಗುತ್ತಿದ್ದಾಗ ಒಂದಷ್ಟು ಜನ ಗೂಂಡಾಗಳು ಬಂದರು.

**(60)/13-2-2019/4-00/ಎಲ್ಎಂ/ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**(ಮುಂದು):– ಯಾವುದೇ ಕಾರಣಕ್ಕೆ ಭಾರತದ ಪರವಾಗಿ ಘೋಷಣೆ ಕೂಗಬಾರದು, ತ್ರಿವರ್ಣ ಧ್ವಜವನ್ನು ಹಿಡಿಯಬಾರದು ಎಂದು ಆ ಮಕ್ಕಳ ಕೈಯಲ್ಲಿರುವ ತ್ರಿವರ್ಣ ಧ್ವಜವನ್ನು ಮತ್ತು ಮಕ್ಕಳ ಕೈಯಲ್ಲಿರುವ band ನ್ನು ಕಸೆದುಕೊಂಡು 7ನೇ ತರಗತಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಕ್ಕಳಿಗೆ ಹೊಡೆದಿರುವ ಘಟನೆ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಹೀರೂರು ಗ್ರಾಮದಲ್ಲಿ ನಡೆದಿದೆ. ನಾನು ಆ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಶಾಲೆಯ ಶಾಲಾ ಅಧ್ಯಕ್ಷರು ಮಕ್ಕಳ ಪರವಾಗಿ ನಿನ್ನೆ ನಮ್ಮ ಮಕ್ಕಳ ಮೆರವಣಿಗೆಯಲ್ಲಿ ಹೋಗುತ್ತಿರುವಾಗ ಮಕ್ಕಳ ಕೈಯಲ್ಲಿರುವ ತ್ರೀವರ್ಣದ ಧ್ವಜವನ್ನು ಮತ್ತು band ನ್ನು ಕಸೆದುಕೊಂಡು ಮಕ್ಕಳಿಗೆ ಹೊಡೆದಿದ್ದಾರೆ ಎಂದು ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದಾರೆ. ಆ ದೂರಿನ ಆಧಾರದ ಮೇಲೆ ಪೊಲೀಸನವರು ಕ್ರಮ ತೆಗೆದುಕೊಳ್ಳುತ್ತಾರೆ, ಕೇಸ್‌ನ್ನು ದಾಖಲು ಮಾಡಿಕೊಳ್ಳುತ್ತಾರೆ ಎಂದು ಹೆತ್ತವರು ತಿಳಿದುಕೊಂಡಿರುತ್ತಾರೆ. ಪೊಲೀಸ್‌ನವರು ಕೇಸ್ ದಾಖಲು ಮಾಡಿ ನ್ಯಾಯಾಧೀಶರ ಮುಂದೆ ಆರೋಪಿಗಳನ್ನು ಹಾಜರುಪಡಿಸಿದಾಗ, ಶಾಚಾರಕ್ಕೆ ಕೇಸ್ ಹಾಕಿ ಪ್ರಕರಣದ ಗಂಭೀರತೆಯನ್ನು ಮರೆಮಾಚಿ, ರಾಷ್ಟ್ರ ಧ್ವಜಕ್ಕೆ ಮಾಡಿರುವ ಅವಮಾನವನ್ನು ಕೇಸ್‌ನಲ್ಲಿ ತೋರಿಸದೆ ಆರೋಪಿಗಳನ್ನು ರಕ್ಷಿಸುವಂತಹ ಕೆಲಸ ಮಾಡಿದ್ದಾರೆ. ಇದರಿಂದ ನ್ಯಾಯಾಧೀಶರು ಸದರಿ ಪ್ರಕರಣದಲ್ಲಿ ಗಂಭೀರತೆ ಇಲ್ಲದೆ ಇರುವುದರಿಂದ ಆರೋಪಿಗಳಿಗೆ bail ಕೊಟ್ಟಿದ್ದಾರೆ. ನಂತರ ಆ ಕ್ಷೇತ್ರದ M.P. (Member of Parliament) ಗಳಾದ ಮಾನ್ಯ ಉದಾಸಿಯವರು ಮತ್ತು ಸಾರ್ವಜನಿಕರೆಲ್ಲರೂ ಸೇರಿ ಪ್ರತಿಭಟನೆ, ಮೆರವಣಿಗೆ, ಧರಣಿ ಮಾಡಿದ್ದಾರೆ. ಗಣೇಶೋತ್ಸವ ಸಂದರ್ಭದಲ್ಲಿಯು ಇದೇ ರೀತಿಯ ಪ್ರಕರಣವಾಗಿದೆ. ಗಣೇಶನ ಮೆರವಣಿಗೆ ಹೋಗುತ್ತಿರುವಾಗ ಆ ಗೂಂಡಾಗಳು ಬಂದು ಮೆರೆವಣಿಗೆಯಲ್ಲಿರುವ ದೇವರನ್ನು ಕಸೆದುಕೊಂಡು, ಜನರಿಗೆ ಹೊಡೆದು, ಗಣೇಶನ ಮೂರ್ತಿಯನ್ನು ಕೆಡವಿ, ಭಗ್ನಗೊಳಿಸಿ ರಂಪಾಟ ಮಾಡಿ ಇನ್ನು ಮುಂದೆ ಯಾವುದೆ ಕಾರಣಕ್ಕೆ ಈ ಕಡೆಗೆ ಮೆರವಣಿಗೆ ಬಂದರೆ ಜಾಗ್ರತೆ ಎಂದು ಎಚ್ಚರಿಕೆ ಕೊಟ್ಟಿದ್ದಾರೆ. ಮೆರವಣಿಗೆ, ಧರಣಿ, ಪ್ರತಿಭಟನೆ ಎಲ್ಲವು ಆದ ನಂತರ S.P. (Superintendent of Police) ಯವರು ಮತ್ತು ಜಿಲ್ಲಾಧಿಕಾರಿಗಳು ಸೇರಿ ಕ್ರಮ ತೆಗೆದುಕೊಂಡು ಕೆಲವರನ್ನು ಬಂದಿಸುವಂತಹ ಕೆಲಸವನ್ನು ಮಾಡಿದ್ದಾರೆ. ದುರಾದೃಷ್ಟಕ್ಕೆ ಜನವರಿ 26 ಗಣರಾಜೋತ್ಸವದ ದಿನ ತ್ರೀವರ್ಣ ಧ್ವಜವನ್ನು ಹಿಡಿದು ಮೆರವಣಿಗೆ ಹೊರಟಿರುವ ಮಕ್ಕಳ ಮೇಲೆ ಹಲ್ಲೆ ಮಾಡಿದವರಿಗೆ ಜಾಮೀನು ಸಿಗುವಂತಹ ಅತ್ಯಂತ ಹೇಯ ಕೃತ್ಯ ನಡೆದಿದೆ ಎಂದು ನನ್ನಗನ್ನಿಸಿತು. ರಾಷ್ಟ್ರಕ್ಕೆ ಅವಮಾನ ಮಾಡಿರುವಂತಹ ಇಷ್ಟೊಂದು ಗಂಭೀರವಾದ ಪ್ರಕರಣವನ್ನು ಪೊಲೀಸ್‌ನವರು ಇಷ್ಟೊಂದು ಹಗುರವಾಗಿ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ನಾನು ಈ ನಿಲುವಳಿ ಸೂಚನೆಯನ್ನು ತರಬೇಕಾಗಿದೆ. ನಾನು ಆ ಸ್ಥಳಕ್ಕೆ ಹೋದಾಗ ಆ ಶಾಲೆ, ಪ್ರಾರ್ಥನ ಮಂದಿರ ಮತ್ತು ದೇವಸ್ಥಾನ ಮೂರನ್ನು ನೋಡಿಕೊಂಡು ಬಂದಿದ್ದೇನೆ. ಯಾವುದೇ ಧರ್ಮದ ಆಧಾರದ ಮೇಲೆ ನಾನು ಮಾತನಾಡುತ್ತಿಲ್ಲ. ಯಾವುದೆ ರಾಜಕಾರಣ ಅಲ್ಲಿ ಬರಬೇಕು ಎಂದು ನಾನು ಹೇಳುತ್ತಿಲ್ಲ. ಆದರೆ ರಾಷ್ಟ್ರಧ್ವಜವನ್ನು ಹಿಡಿದುಕೊಂಡು 240 ಮಕ್ಕಳ ಮೆರವಣಿಗೆ ಹೋಗುವಾಗ ಮಕ್ಕಳ ಮೇಲೆ ಹಲ್ಲೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವಂತಹ ಘೋರ ಅಪರಾಧ ನಡೆದಿದೆ. ಇಂತಹ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಈ ವಿಚಾರದಲ್ಲಿ ಇಷ್ಟೊಂದು ವಿಫಲವಾಗಲು ಏನು ಕಾರಣ ಎನ್ನುವುದನ್ನು ಈ ನಿಲುವಳಿ ಸೂಚನೆ ಮೂಲಕ ನಾನು ಕೇಳಬೇಕಾಗಿದೆ. ಈ ರಸ್ತೆ ಮುಂದೆ ತಿರುವು ಇರುವುದರಿಂದ ಇಲ್ಲಿ horn ಮಾಡಿದರೆ ತಕ್ಷಣ ಬಂದು ನಮಗೆ ಹೊಡೆಯುತ್ತಾರೆ, ದೌರ್ಜನ್ಯ ನಿರಂತರವಾಗಿದೆ, ಬಸವೇಶ್ವರ ರಥೋತ್ಸವಕ್ಕೂ ತೊಂದರೆ ಮಾಡಿದ್ದಾರೆ, ಹಲ್ಲೆ ಮಾಡುತ್ತಾರೆ. ಇದು ನಿರಂತರವಾಗಿದೆ ಎಂದು ನಾನು ಅಲ್ಲಿಗೆ ಹೋದಾಗ ಅಲ್ಲಿಯ ಸಾರ್ವಜನಿಕರು ನನಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಕಳೆದ ಗಣೇಶೋತ್ಸವದ ಸಂದರ್ಭದಲ್ಲಿ ಪೊಲೀಸನವರ ಸಮುಖದಲ್ಲಿಯೇ ಗಣೇಶ ಮೂರ್ತಿಯನ್ನು ಭಗ್ನಗೊಳಿಸಿ, ಕಲ್ಲು-ಚಪ್ಪಲಿ ಎಸೆದು, ಅನೇಕ ಮುಗ್ಧ ಜನರ ಮೇಲೆ ಹಲ್ಲೆ ಮಾಡಿ, ವಾಹನ ಮತ್ತು ಹುಲ್ಲಿನ ಬಣವಿಗೆ ಬೆಂಕಿ ಇಟ್ಟು ಕೇಕೆ ಹಾಕಿ ನಗುತ್ತಾ, ಕುಣಿಯುತ್ತಾ ಹೋಗಿದ್ದಾರೆ. ಇದೆಲವನ್ನು ಅಲ್ಲಿಯ ಜನರು ನೋಡಿದ್ದಾರೆ. ಇಲ್ಲಿ ಆಶ್ಚರ್ಯದ ವಿಚಾರ ಎಂದರೆ, ಅಲ್ಲಿ ಕೇರಳ ರಾಜ್ಯಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಇದೆ, ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಕೊಡುವುದು ಸಾಮಾನ್ಯ. ಈ ವಿಚಾರವಾಗಿ ನಾನು ಜಿಲ್ಲಾಧಿಕಾರಿಗಳ ಜೊತೆ, S.P. ಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಆ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಾಗಿ ಮಕ್ಕಳೆ ಇದ್ದಾರೆ. ಈ ವಿಶ್ವವಿದ್ಯಾನಿಲಯಕ್ಕೆ ಕಾಶ್ಮೀರದಿಂದ ಆಗಾಗ ಕೆಲವು ವ್ಯಕ್ತಿಗಳು ಬಂದು ಭೋಧಿಸುತ್ತಾರೆ ಎನ್ನುವ ಮಾಹಿತಿ ಇದೆ. ಇದರ ಬಗ್ಗೆ ಅಧಿಕಾರಿಗಳು ಮತ್ತು ಸಾರ್ವಜನಿಕರ ದೂರು ಇದೆ. ಆ ಕೇರಳದ ವಿಶ್ವವಿದ್ಯಾನಿಲಯಕ್ಕೆ ಕೇರಳದ ಉಗ್ರಗಾಮಿಗಳ ಜೊತೆಯಲ್ಲಿ ನೇರಸಂಪರ್ಕವಿದೆ ಎನ್ನುವಂತಹ ಮಾತುಗಳು ಕೇಳಿಬರುತ್ತವೆ. ಇಡೀ ಭಾರತ ಭಯೋತ್ಪಾದನೆಯಿಂದ ಮುಕ್ತವಾಗಬೇಕು ಎಂದು ಎಲ್ಲ ಸರ್ಕಾರಗಳು ಪ್ರಯತ್ನ ಮಾಡುತ್ತಿರುವಾಗ ಇಲ್ಲಿ ಈ ರೀತಿ ನಡೆಯುತ್ತಿದೆ.

**ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ಈ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು divert ಮಾಡುತ್ತಿದ್ದಾರೆ. ನಡೆದಿರುವ ಘಟನೆ ಬಿಟ್ಟು Kashmiri militants, ಕೇರಳದ ವಿಶ್ವವಿದ್ಯಾನಿಲಯ ಎಂದು ಏನೇನೊ ಹೇಳುತ್ತಿದ್ದಾರೆ.

**ಸಭಾಪತಿಯವರು:- ಈ ನಿಲುವಳಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿದೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಈ ರೀತಿ ಮಾಡಲು ಬರುವುದಿಲ್ಲ. ಈ ವಿಚಾರವಾಗಿ ನಾನು ಇನ್ನು ಮಾತನಾಡುವುದಿದೆ.

**ಸಭಾಪತಿಯವರು:-** ಈಗ ಹೇಳಿದಿರಲ್ಲ. ಇದನ್ನು ಈಗ ಚರ್ಚೆಗೆ ತೆಗೆದುಕೊಳ್ಳುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಗೃಹ ಸಚಿವನಾಗಿ ಹೇಳುತ್ತೇನೆ, ಮಾಧ್ಯಮಕ್ಕೆ ಇದು ತಪ್ಪು ಸಂದೇಶ ಹೋಗುವುದು ಬೇಡ. ಈ ಘಟನೆ ಆಗಿರುವುದು ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಹೀರೂರು ಗ್ರಾಮದಲ್ಲಿ. ಜನವರಿ 26ರ ಗಣರಾಜೋತ್ಸವದ ದಿನದಂದು ಅಲ್ಲಿಯ ಪ್ರೌಢ ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನೀಯರು ಬೆಳಗ್ಗೆ 9 ಗಂಟೆಗೆ. . .

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಗಳೆ, ಅಲ್ಲಿ ನಡೆದಿರುವ ಘಟನೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಅಲ್ಲಿ ಕಾಶ್ಮೀರದಿಂದ ಬಂದು ಬೋಧನೆ ಮಾಡುತ್ತಾರೆ.

**ಶ್ರೀ ಎಂ.ಬಿ.ಪಾಟೀಲ್:-** ಗಣೇಶನ ಮೂರ್ತಿಯನ್ನು ಭಗ್ನಗೊಳಿಸಿದ್ದಾರೆ ಈ ರೀತಿ ಈ ಘಟನೆಯನ್ನು divert ಮಾಡಬೇಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಇದನ್ನು divert ಮಾಡುವ ಪ್ರಶ್ನೆಯೇ ಇಲ್ಲ. ವಸ್ತು ಸ್ಥಿತಿಯನ್ನು ಸದನಕ್ಕೆ ತಿಳಿಸುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಂ.ಬಿ.ಪಾಟೀಲ್:-** ಆ ವಿಷಯಕ್ಕೆ ಸೀಮಿತವಾಗಿ ಹೇಳಲಿ.

**ಶ್ರೀ ಎಸ್.ವ್ಹಿ.ಸಂಕನೂರ ':-** ಮಾನ್ಯ ಸಭಾಪತಿಗಳೆ, ವಸ್ತು ಸ್ಥಿತಿ ಬಗ್ಗೆ ಹೇಳುತ್ತಿದ್ದಾರೆ. ಅಂದಿನ F.I.R. ತೆಗೆಯಿಸಿ ನೋಡಿ.

**(ಗೊಂದಲ)**

**ಸಭಾಪತಿಯವರು:-** ಸಚಿವರು ಏನೊ ಹೇಳುತ್ತಿದ್ದಾರೆ. ಅವರು ಹೇಳಿಕೆ ಮಾಡುತ್ತಾರೆ. ಸ್ವಲ್ಪ ತಾಳ್ಮೆಯಿಂದ ಕೇಳಿ.

**ಶ್ರೀ ಎಂ.ಬಿ.ಪಾಟೀಲ್:-** ಆ ಘಟನೆಗೆ ಸಂಬಂಧಪಟ್ಟ ಹಾಗೆ ಮಾತ್ರ ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಮಂತ್ರಿಗಳು ವರದಿ ಆಧಾರದ ಮೇಲೆ ಹೇಳುತ್ತಿರಬಹುದು ಆದರೆ ನಾನು ವಿಪಕ್ಷ ನಾಯಕನಾಗಿ ಅಲ್ಲಿಗೆ ಹೋಗಿ ಆ ಶಾಲೆಗೆ ಹೋಗಿ ಪ್ರಾರ್ಥನಾ ಮಂದಿರ, ದೇವಸ್ಥಾನವನ್ನು ನೋಡಿಕೊಂಡು ಆ ಶಾಲೆಯವರ ಜೊತೆಯಲ್ಲಿ ಮಾತನಾಡಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲವನ್ನು ಪರಿಶೀಲನೆ ಮಾಡಿಕೊಂಡು ಬಂದು ಹೇಳುತ್ತಿದ್ದೇನೆ. ಸುಮ್ಮನೆ ಏನೇನೊ ಹೇಳುತ್ತಿಲ್ಲ. ಗೃಹ ಸಚಿವರು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ.

**(ಗೊಂದಲ)**

**ಶ್ರೀ ಎಂ.ಬಿ.ಪಾಟೀಲ್(ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ನಾನು ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದೇನೆ.

**ಸಭಾಪತಿಯವರು:-** ಮಂತ್ರಿಗಳೆ ನೀವು ಮಾತನಾಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವುದು ಮುಗಿದಿದ್ದರೆ ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಕಾಶ್ಮೀರದವರಿಗೆ ಅಲ್ಲಿ ಏನು ಕೆಲಸ? F.I.R. ತೆಗೆಯಿಸಿ ನೋಡಲಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಈಗ ನಾನು ಉತ್ತರವನ್ನು ಕೊಡಬಹುದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಹೇಳುವುದು ಮುಗಿಯಿತಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಾನು ಈ ನಿಲುವಳಿ ಸೂಚನೆಯನ್ನು ತಂದಿರುವುದು, ಚರ್ಚೆ ಮಾಡಬೇಕು ಎಂದು. ಮಧ್ಯೆದಲ್ಲಿ ಗೃಹ ಸಚಿವರು ಎದ್ದು ನಿಂತರು, ಅವರ ಹತ್ತಿರ ಅನೇಕ ಮಾಹಿತಿ ಇರಬಹುದು, ಅವರು ಏನು ಹೇಳುತ್ತಾರೆ ಹೇಳಲಿ ನಂತರ ನಾವು ಮಾತನಾಡುತ್ತೇವೆ.

**ಸಭಾಪತಿಯವರು:-** ಈಗ ಇದು ನಿಲುವಳಿ ಸೂಚನೆಯಲ್ಲ. ಇದನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಈ ನಿಲುವಳಿ ಸೂಚನೆಯನ್ನು ಈಗ ನಿಯಮ 68ಕ್ಕೆ ಪರಿವರ್ತಿಸಲಾಗಿದೆ. ತಾವು ಯಾವಾಗ ಚರ್ಚೆಗೆ ಅವಕಾಶವನ್ನು ಕೊಡುತ್ತೀರಿ ಅದು ನಿಮ್ಮ discretion. ಆ ವಿಷಯ ಚರ್ಚೆ ಮಾಡಿದ ನಂತರ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಇದನ್ನು ಇವತ್ತು ನಾಳೆ ಅಥವಾ ನಾಡಿದ್ದು ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಬೇಕು. ಆಗ ಚರ್ಚೆ ಮಾಡಿದ ನಂತರ ಮಂತ್ರಿಗಳು ಉತ್ತರ ಹೇಳುತ್ತಾರೆ. ಚರ್ಚೆಗೆ ಸಮಯವನ್ನು ನಿಗದಿ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳೆ, ಚರ್ಚೆಗೆ ಸಮಯವನ್ನು ನಿಗದಿ ಮಾಡಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ನಾವು ಮಾತನಾಡುವಾಗ ಸರ್ಕಾರಕ್ಕೆ ಮಧ್ಯೆದಲ್ಲಿ ಏನೊ ಹೇಳಬೇಕು ಅನ್ನಿಸಿ ಹೇಳಿದೆ. ಇದರಲ್ಲಿ ನಮ್ಮದೇನು ಗೊಂದಲವಿಲ್ಲ. ಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ, ನಂತರ ನಾವು ಮಾತನಾಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ವಿರೋಧ ಪಕ್ಷದ ನಾಯಕರೆ ಇದರ ಚರ್ಚೆಗೆ ಮಾನ್ಯ ಸಭಾಪತಿಯವರು ಸಮಯವನ್ನು ನಿಗದಿ ಮಾಡಬೇಕು. ಆ ಸಮಯದಲ್ಲಿ ಚರ್ಚೆಯಾದ ಮೇಲೆ ಸರ್ಕಾರ ತನ್ನ ಹೇಳಿಕೆಯನ್ನು ಮಾಡುತ್ತದೆ. ಈಗ ಏಕೆ ಮಂತ್ರಿಗಳು ಉತ್ತರ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಪ್ರಾಥಮಿಕವಾಗಿ ನಾನು ಇನ್ನು ಈ ವಿಚಾರದ ಬಗ್ಗೆ ಹೇಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಈಗಾಗಲೆ ಇದು ಪರಿವರ್ತನೆಯಾಗಿದೆ. ಸಭಾಪತಿಯವರು ಅವರ ಪೀಠದಿಂದ ಸದರಿ ನಿಲುವಳಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಲಾಗಿದೆ ಎಂದು ಆದೇಶವನ್ನು ಕೊಟ್ಟುಬಿಟ್ಟಿದ್ದಾರೆ. ಅವರು ಚರ್ಚೆಗೆ ಸಮಯವನ್ನು ಕೊಟ್ಟಾಗ ಚರ್ಚೆ ಮಾಡಿ.

**ಶ್ರೀ ಎಂ.ಬಿ.ಪಾಟೀಲ್:-** ಮಾನ್ಯ ಸಭಾಪತಿಗಳು ಚರ್ಚೆಗೆ ಸಮಯವನ್ನು ನಿಗದಿ ಮಾಡಿ ತಿಳಸಿದಾಗ ಆಗ ತಾವು ಚರ್ಚೆ ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಗಳೆ, ಪೊಲೀಸ್‌ನವರೆ ಅವರ ರಕ್ಷಣೆಗೆ ನಿಂತಿದ್ದಾರೆ.

**(061)13-02-2019(04-10)ಬಿಎಸ್‌ಡಿ-ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಆದ್ದರಿಂದ ಸರ್ಕಾರದಿಂದ ತಾವು ಹೇಳಿಕೆ ಕೊಡಿಸಬೇಕು.

**ಶ್ರೀ ಎಂ.ಬಿ. ಪಾಟೀಲ್ (ಗೃಹ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರು ಪೂರ್ವಪೀಠಿಕೆ ಚರ್ಚೆ ಮಾಡಿದ್ದು, ಈ ವಿಷಯದ ಬಗ್ಗೆ ಚರ್ಚೆಯಾದ ನಂತರ ಸುದೀರ್ಘವಾದ ಉತ್ತರವನ್ನು ಕೊಡುತ್ತೇನೆ.

**Sri S.R. PATIL:** There ends the matter.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಚಿವರೇ, ಈಗ ಚರ್ಚೆ ಮಾಡಲು ಅವಕಾಶ ಕೊಟ್ಟರೆ ತಾವು ಉತ್ತರ ಕೊಡಲು ತಯಾರಿದ್ದೀರಾ?

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಹೊಸ ವಿಚಾರಗಳನ್ನು ಹೇಳಿದ್ದು, ಅವುಗಳೆಲ್ಲದ್ದರ ಬಗ್ಗೆ ನಂತರ ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಆಯಿತು.

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಏನೆಂದರೆ ಈ ವಿಷಯವನ್ನು ಎಲ್ಲೋ divert ಮಾಡುತ್ತಿದ್ದಾರೆ ಎಂದು ಹೇಳಿದರು.

**ಸಭಾಪತಿಯವರು:–** ಆಯಿತು, ಆ ವಿಷಯ ಬಿಡಿ, ಇಲ್ಲಿ ಬೇರೆ ಬೇರೆ ವಿಷಯಗಳು ಚರ್ಚೆಗೆ ಇವೆ.

**ಶ್ರೀ ಎಂ.ಕೆ. ಪ್ರಾಣೇಶ್:–** ಆದರೆ ಅವರೇ ವಿಷಯವನ್ನು divert ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲಿ ಜುತಜಡ್ಡಿಣ ಪ್ರಶ್ನೆಯೇ ಇಲ್ಲ, ಈ ವಿಚಾರವು ನಿಯಮ 68ಕ್ಕೆ convert ಆಗಿದೆ. ಚರ್ಚೆ ಮಾಡಲು ಅವಕಾಶ ನೀಡಿ, ಚರ್ಚೆಯಾದ ನಂತರ ಸರ್ಕಾರವು ಉತ್ತರ ಕೊಡುತ್ತದೆ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಿಕ್ಕಿದ ಮಾಹಿತಿಗಳನ್ನು ಸದನದ ಮುಂದೆ ಇಡುತ್ತಿದ್ದು, ಅದನ್ನು divert ಮಾಡುತ್ತಿದ್ದಾರೆ ಎಂದು ಹೇಳಿದರೆ ಅರ್ಥ ಇದ್ದೀಯೇ?

**ಸಭಾಪತಿಯವರು:–** ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಬಗ್ಗೆ ಮಾತನಾಡಿ.

**(ಗೊಂದಲ)**

**14. <u>ಹಾಸನ ಜಿಲ್ಲೆಯ ಶಾಸಕರ ಮನೆಗೆ ಗೂಂಡಾಗಳು ಕಲ್ಲು ತೂರಾಟ ನಡೆಸಿ ಗಲಾಟೆ ಮಾಡಿರುವ ಬಗ್ಗೆ</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲೆಯ ಶಾಸಕರ ಮನೆಗೆ ನುಗ್ಗಿ ದಾಳಿ ನಡೆದಿದ್ದು, ಇದು ಅತ್ಯಂತ ಗಂಭೀರವಾದ ವಿಚಾರವಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ತಾವು ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೀರಿ? ತಾವು ವಿರೋಧ ಪಕ್ಷದ ನಾಯಕರಾಗಿದ್ದುಕೊಂಡು ಯಾವುದರಿಂದಲೋ ಯಾವುದಕ್ಕೆ ಹೋಗುತ್ತಿದ್ದೀರಿ. ಎಲ್ಲವನ್ನೂ ಕೂಡಿಸಬಾರದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇಡೀ ರಾಜ್ಯವೇ ತಲ್ಲಣಗೊಂಡ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾದ ಅವಶ್ಯಕತೆ ಇದೆ.

**(ಗೊಂದಲ)**

**ಸಭಾಪತಿಯವರು:–** ಇದೇನಿದು? ನೋಟೀಸ್ ಇಲ್ಲ, ಏನೂ ಇಲ್ಲ. ತಾವು ಮಾತನಾಡುವುದು, ಬಿಡುವುದು, ವ್ಯವಸ್ಥೆ ಏನು? ಏನ್ರೀ!, ಈ ರೀತಿ ಆದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ವಿಚಾರವನ್ನು ಹೇಳಿಬಿಡುತ್ತೇನೆ. ಅನುಮತಿ ಕೊಡುವುದು ಅಥವಾ ಬಿಡುವುದು ತಮಗೆ ಬಿಟ್ಟ ವಿಚಾರವಾಗಿದೆ.

**(ಗೊಂದಲ)**

**ಸಭಾಪತಿಯವರು:–** ಯಾವ ನಿಯಮಾವಳಿ ಪ್ರಕಾರ ತಾವು ಪ್ರಸ್ತಾಪ ಮಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಹಾಸನದಲ್ಲಿ ಶ್ರೀ ಪ್ರೀತಂಗೌಡರ ಮನೆಗೆ ಆಡಳಿತ ಪಕ್ಷದ ಗೂಂಡಾಗಳು ನುಗಿದ್ದಾರೆ. ದಯವಿಟ್ಟು ಕೇಳಬೇಕು. ರಾಜ್ಯದಲ್ಲಿ ಸಮಸ್ಯೆಗಳು ಬಂದಾಗ, ರಾಜ್ಯದಲ್ಲಿ ಆಡಳಿತದಲ್ಲಿ ಧಕ್ಕೆ ಬಂದಾಗ ಈ ಸ್ಥಾನದಲ್ಲಿರುವ ಗೃಹ ಮಂತ್ರಿಗಳು...... ಪ್ರೀತಂಗೌಡರ ಮನೆಗೆ ನುಗ್ಗಿ ದಾಂಧಲೆ ಮಾಡಿದ್ದಾರೆ. ಅವರು ಕೆಳಮನೆಯಲ್ಲಿ ಗೌರವಾನ್ವಿತ ಶಾಸಕರಾಗಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ನಾನು ಅನುಮತಿಸದ ಹೊರತು ಯಾರೇ ಮಾತನಾಡಿದರೂ ದಾಖಲೆಗೆ ಹೋಗತಕ್ಕದ್ದಲ್ಲ. ಮಾನ್ಯ ರೇವಣ್ಣನವರು ಮಾತನಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರು ಪರಿಸ್ಥಿತಿಯನ್ನು ದಯವಿಟ್ಟು ಕೇಳಬೇಕು. ಅತ್ಯಂತ ಗಂಭೀರವಾದ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:-** ನೋಟೀಸ್ ಕೊಡಬಾರದೇ? ಇದು ಸರಿಯಲ್ಲ.

**(ಗೊಂದಲ)**

**(ಈ ಹಂತದಲ್ಲಿ ಬಿ.ಜೆ.ಪಿ. ಪಕ್ಷದ ಸದಸ್ಯರೆಲ್ಲರೂ ಕೆಳಮನೆಯ ಶಾಸಕರಾದ ಶ್ರೀ ಪ್ರೀತಂಗೌಡರ ಮನೆಗೆ ಗೂಂಡಾಗಳು ನುಗ್ಗಿ ದಾಳಿ ನಡೆಸಿರುವ ವಿಚಾರದ ವಿರುದ್ಧ ಪ್ರತಿಭಟಿಸಿ, "ಬೇಕೇ ಬೇಕು, ರಕ್ಷಣೆ ಬೇಕು" ಮತ್ತು "ಗೂಂಡಾಗಿರಿಗೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗುತ್ತಾ ಬಾವಿಯಲ್ಲಿ ಪ್ರತಿಭಟನೆ ನಡೆಸಿದರು)**

**(ಗೊಂದಲ)**

**ಸಭಾಪತಿಯವರು:-** ಯಾರೂ ನನ್ನ ಅನುಮತಿ ಇಲ್ಲದೇ ಮಾತನಾಡಬಾರದು. ಇಡೀ ಸದನವನ್ನು ತಪ್ಪು ದಾರಿಗೆ ಎಳೆಯುವುದು ಮತ್ತು ನಿಮ್ಮ ಇಚ್ಛೆ ಪ್ರಕಾರ ಮಾಡುವುದೆಲ್ಲ ನಡೆಯುವುದಿಲ್ಲ. ಇಡೀ ಸದನವನ್ನು ಈ ರೀತಿ ಮಾಡುವುದು ಬಹಳ ಅತಿರೇಕ. ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತೇನೆ.

**(62) 13-02-2019 4.40 ಡಿಎಸ್-ವಿಕೆ**

**(ಸದನವು ಮಧ್ಯಾಹ್ನ 4 ಗಂಟೆ 17 ನಿಮಿಷಗಳಿಗೆ ಮುಂದೂದಲ್ಪಟ್ಟು ಪುನಃ 4 ಗಂಟೆ 47 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಉಳಿದ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:-** ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಳ್ಳಿ. ತಾವು ಯಾವುದೇ ನೋಟಿಸ್ ಕೊಟ್ಟಿಲ್ಲ. ಚರ್ಚೆಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಹೇಳುವುದು ಸರಿಯಾಗಿದೆ, ಅದಕ್ಕೆ ನಮ್ಮ ವಾದವಿಲ್ಲ. ನಿಯಮಾವಳಿ ಪ್ರಕಾರ ನೋಟಿಸ್ ಕೊಟ್ಟು ಚರ್ಚೆ ಮಾಡಬೇಕೆನ್ನುವುದು ಸತ್ಯ ಇದೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ಶಾಸಕರೊಬ್ಬರ ಮನೆಗೆ ಗೂಂಡಾಗಳು ನುಗ್ಗುವಾಗ ಸರ್ಕಾರಕ್ಕೆ ಕಾನೂನು ಇಲ್ಲವೇನು? ನಿಯಮಾವಳಿ ಪ್ರಕಾರ ನಾವು ನೋಟಿಸ್ ಕೊಟ್ಟು ತಮ್ಮ ಅನುಮತಿಯನ್ನು ಕೇಳಬೇಕಾಗಿತ್ತು. ನಿಯಮಾವಳಿಗಳ ಪ್ರಕಾರ ಮಾತನಾಡಬೇಕೆನ್ನುವುದು ನಮಗೆ ಗೊತ್ತಿದೆ. ಶಾಸಕರ ಮನೆಗೆ ಗೂಂಡಾಗಳು ನುಗ್ಗಿ ಇಡೀ ಹಾಸನ ಜಿಲ್ಲೆ ಗೂಂಡಾ ರಾಜ್ಯವಾಗುವ ಪರಿಸ್ಥಿತಿ ನಿರ್ಮಾಣವಾದರೆ ಸಾಮಾನ್ಯ ಜನರಿಗೆ ಸರ್ಕಾರ ಯಾವ ರೀತಿ ಭದ್ರತೆಯನ್ನು ನೀಡುತ್ತದೆ? ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ.

**(ಗೊಂದಲ)**

**15. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯವನ್ನು ಅಂಗೀಕಾರ ಮತ್ತು ಅನುಮೋದನೆ**

**ಸಭಾಪತಿಯವರು:-** ಪ್ರಶ್ನೆ ಏನೆಂದರೆ;

"ದಿನಾಂಕ:06.02.2019 ರಂದು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರುಗಳಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುವುದು"

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ವಂದನಾ ನಿರ್ಣಯಕ್ಕೆ ಸದನದ ಅನುಮೋದನೆ ದೊರೆಯಿತು**

**ಸಭಾಪತಿಯವರು:-** ಸದನವು ಅಂಗೀಕರಿಸಿದ ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 4 ಗಂಟೆ 49 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:14ನೇ ಫೆಬ್ರವರಿ ಮಾಹೇ 2019ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

- - -

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"